ಕಲ್ಯಾಣ ಕಿರಣ



ಮಾರ್ಚ : ೧೯೭೯　　　　ಸಂಪುಟ : ೪
ಬಸವ ಶಕೆ : ೮೭೨　　　　ಸಂಚಿಕೆ : ೧೧



ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಜಿಯವರು
ತಿ. ನರಸೀಪುರದಲ್ಲಿ ವಿಶ್ವಧರ್ಮ ಪ್ರವಚನ ಮಾಡುತ್ತಿರುವುದು.

ಕಲ್ಯಾಣ ಕಿರಣ

ನುಡಿ-ನೈವೇದ್ಯ　　　　ದೇವ ಚರಣಕ್ಕೆ

ದೇವದೇವ ದಿವ್ಯ ಪ್ರಭುವೆ ಈವುದೊಂದು ವರವೆನಗೆ
ನಿಮ್ಮ ಚರಣದಲ್ಲಿ ಮನವು ಲೀಯವಾಗಲಿ ॥ಪ॥

ಅತ್ತಲಿತ್ತ ಹರಿಯದಲೆ ಸುತ್ತಮುತ್ತ ಸುಳಿಯದಲೆ
ಚಿತ್ತ ನಿನ್ನ ಸೇವೆಯಲ್ಲಿ ಶಾಂತಿ ಪಡೆಯಲಿ ॥ಅ.ಪ॥

ನೀರಿನಿಂದ ತುಂಬಿ ಮೋಡ ವಿನಯದಿಂದ ಭುವಿಗೆ ಸಾರಿ
ಪ್ರೇಮದಿಂದ ನೀರನೆರೆದು ನೆಲವ ತಣಿಪುದು ।
ಅರಿವಿನಿಂದ ಎನ್ನ ಬಾಳು ಮಾರಹರನೆ ತುಂಬಿ ತುಳುಕಿ
ಭರದಿ ತನ್ನ ಜ್ಞಾನವನ್ನು ಜಗಕೆ ನೀಡಲಿ ॥೧॥

ಉದಿಸ ರವಿಯು ಮೌನವಾಗಿ ಅಂಬುಜೆಯ ಅರಳಿಪವೊಲು
ಮುದದಿ ಎನ್ನ ಮಾತು ನೊಂದ ಹೃದಯ ನಲಿಸಲಿ ।
ಇರುಳಿನಲ್ಲಿ ಚಂದ್ರನರಳಿ ಭೀತಿಭಾವ ತೊಡೆಯುವೊಲು
ಅರಿವ ಹರಿಸಿ ಆತ್ಮಬಲವ ಮತಿಗೆ ನೀಡಲಿ ॥೨॥

ಎನ್ನ ಬಾಳ ಪಥದೊಳಗೆ ಮುಳ್ಳು ಚೆಲ್ವ ದ್ವೇಷಿಗಳಿರೆ
ಅವರ ಬಾಳಪಥದಿ ಹೂವ ಚೆಲ್ಲಿ ಸುಖಿಸುವ ।
ಶುದ್ಧ ಮನವ ನೀಡೆನಗೆ ನಿಃಕಳಂಕ ನಿರ್ಮಲಾಂಗ
ಬದ್ಧಬಾಳ ತೊಡೆದು ಸಲಹು ಸಚ್ಚಿದಾನಂದಾ ॥೩॥

— ಜಗದ್ಗುರು ಮಾತೆ ಮಹಾದೇವಿ.


ಕಲ್ಯಾಣ ಕಿರಣ

ಮಾಸಪತ್ರಿಕೆ

ಮಾರ್ಚಿ ೧೯೮೪ ಸಂಪುಟ ೪
ಬಸವ ಶಕೆ ೮೭೨ ಸಂಚಿಕೆ ೧೧
ಆಜೀವ ಸದಸ್ಯತ್ವ ವಾರ್ಷಿಕ ಚಂದಾ
ನೂರ ಐವತ್ತೊಂದು ರೂಪಾಯಿ ಹನ್ನೆರಡು ರೂಪಾಯಿ

ಒಳಗಿನ ಪುಟದಲ್ಲಿ

ಮುಖಪುಟ : ಜಗನ್ಮಾತಾ ಅಕ್ಕಮಹಾದೇವಿ
ಹಿಂಬದಿ ಚಿತ್ರ : ಪೂಜ್ಯ ಮಾತಾಜಿ



ದೈವೀ ಶರಣಾಗತಿ

ಉದಯಾಸ್ತ ಮಾನವೆಂಬ ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಬೇಗ ಬೇಗ ಶರಣೆನ್ನಿ, ಚನ್ನಮಲ್ಲಿಕಾರ್ಜುನ ದೇವರಿಗೆ
ಬೇಗ ಬೇಗ ಶರಣೆನ್ನಿ.

ಒಂದು ವಿಶಾಲವಾದ ಹೊಲ. ಅದರ ಮಧ್ಯದಲ್ಲೊಂದು ಅಚ್ಚುಕಟ್ಟಾದ ಕಣ. ಅಲ್ಲಿ ಹಾಕಲ್ಪಟ್ಟಿದೆ ಕಾಳಿನ ರಾಶಿ. ಏರಿಸಿದ ರಾಶಿಯನ್ನು ಶಾಸ್ತ್ರೋಕ್ತವಾಗಿ ಒಡದು ಅಳೆಯಲಾರಂಭಿಸುತ್ತಾರೆ ಈರ್ವರು. ಎರಡು ಸೇರುಗಳನ್ನು ಕೈಯಲ್ಲಿ ಹಿಡಿದು. ಇನ್ನೊಬ್ಬ ನೂರು ಸೇರಿನ ಚೀಲವನ್ನು ಹಿಡಿದು ಅದರ ಬಾಯನ್ನು ತೆರೆದು ಅಳೆದು ಹಾಕುವ ಕಾಳನ್ನು ನುಂಗಲು ಸನ್ನದ್ಧನಾಗಿರುತ್ತಾನೆ. ಅಳೆಯುವವರು ಸೇರಿನಲ್ಲಿ ಕಾಳು ತುಂಬಿ ಒಂದು. ಎರಡು. ಮೂರು. ನಾಲ್ಕು. ಎಂದು ಜೋಡಿ ರಾಗದಲ್ಲಿ ಹಾಡುತ್ತ, ಚೀಲದೊಳಕ್ಕೆ ಸುರಿಯುತ್ತಾರೆ. ಚೀಲ ತುಂಬುತ್ತಿದ್ದಂತೆಯೇ ಬಾಯಿ ಹೊಲಿದು, ಸಾಲಲ್ಲಿ ಸೇರಿಸುತ್ತಾರೆ. ರಾಶಿ ತೀರುತ್ತಿದ್ದಂತೆಯೇ ಕಣವು ಬರಿದಾಗುತ್ತದೆ.

ಹೀಗೆ ಇದೆ ಜೀವನದ ಯಾತ್ರೆ. ವಿಶ್ವವೆಂಬ ಹೊಲದಲ್ಲಿ ಜೀವನವು ಒಂದು ಪುಟ್ಟ ಕಣ. ಅವರವರ ಆಯುಷ್ಯದ ಕ್ಷಣಗಳೇ ಕಾಳುಗಳು. ಬಾಳಿನ ಕಣದಲ್ಲಿ ರಾಶಿ ಬಿದ್ದಿರುವ ಆಯುಷ್ಯದ ಕಾಳನ್ನು ಉದಯ-ಅಸ್ತಮಾನ ಎಂಬ ಎರಡು ಕೊಳಗಗಳಲ್ಲಿ ಅಳೆದು ಹಗಲು-ರಾತ್ರಿಗಳೆಂಬ ಈರ್ವರು ಕಾಲನ ಗರ್ಭವೆಂಬ ಚೀಲಕ್ಕೆ ತುಂಬುತ್ತಲಿದ್ದಾರೆ. ರಾಶಿ ತೀರುತ್ತಲೇ ಈ ಕಾಳಿನ ಚೀಲ ಸರಿದು ನಿಟ್ಟೊಟ್ಟಿರುವ ನೂರಾರು, ಸಹಸ್ರಾರು ಚೀಲಗಳ ಸಾಲಿನಲ್ಲಿ ಸೇರಿ ಹೋಗುತ್ತವೆ.

ಹೀಗೆ ಸಾಗಿದೆ ಜೀವನದ ಪಯಣ from creation to cremation, or from womb to tomb, ಜನನದಿಂದ ಮರಣದವರೆಗೆ ಹೀಗೆ ಸರಿಯುವ ಕಾಲಚಕ್ರ ನಿರಂತರವಾದ ಕ್ರಿಯೆಯಲ್ಲಿ ತೊಡಗಿರುವುದು : ನಮ್ಮ ಇಚ್ಛೆ-ಅನಿಚ್ಛೆಗಳನ್ನು ಅವಲಂಬಿಸಿಯಲ್ಲ, ಸರ್ವ ಸ್ವತಂತ್ರವಾಗಿ ಸಾಗುವುದು. ನಮ್ಮ ಕೈಲಿರುವುದು ಆ ಗಳಿಗೆಗಳನ್ನು ಸಾರ್ಥಕ ಪಡಿಸಿಕೊಳ್ಳುವುದು ಮಾತ್ರವೇ ವಿನಾ ಅದನ್ನು ಮೆಟ್ಟಿ ನಿಲ್ಲುವದಲ್ಲ. ಅಂತೆಯೇ ತನ್ನ ಜನ್ಮದಿನೋತ್ಸವದಂದು ಅಂತಹ ವೀಕ್ಷಣೆ Self-Introspection ಅತಿ ಮುಖ್ಯ ಕಾರ್ಯವಾಗಬೇಕು. ಮಾರ್ಚ ೧೩ ಬರುತ್ತಿದ್ದಂತೆಯೇ ಆ ವರುಷದ ಮುನ್ನೂರ ಅರವತ್ತೈದು ಕಾಳುಗಳು ಕಾಲನ ಚೀಲಕ್ಕೆ ತುಂಬಲ್ಪಟ್ಟ ನೆನಪಾಗದಿರದು. ಇಂದಿನ ಮಾರ್ಚ್ ೧೩ಕ್ಕೆ ೩೩ ವರುಷಗಳು ಸರಿದು, ೩೪ನೆಯ ವರುಷಕ್ಕೆ ಪಾದಾರ್ಪಣ. ಈ ಅವಧಿಯಲ್ಲಿ ಆಗಿರುವ ಸಾಧನೆಯ ಬಗ್ಗೆ ಉಳಿದವರು ಹಾಡಿ ಹಾರೈಸಲಿ; ಸಾಧಿಸಬೇಕಾದ ಧ್ಯೇಯದ ಬಗ್ಗೆ ತಳೆಯಬೇಕಾದ ಮನಸ್ಥೈರ್ಯದ ಬಗ್ಗೆ ನಾವು ಚಿಂತನೆಗೈಯಬೇಕು.

ಜೀವನದಲ್ಲಿ ಗುರಿ ಬಹಳ ಅಚಲವಾಗಿರಬೇಕು. ಎಂಥ ಬಿರುಗಾಳಿ ಬಂದರೂ ಅಲುಗದ ಗೌರಿಶಂಕರದಷ್ಟು ದೃಢವಿರಬೇಕು.

ರತ್ನೈಃ ಮಹಾರ್ಹೈಃ ತುತುಷುರ್ನ ದೇವಾಃ
ನ ಭೇಜಿರೇ ಭೀಮ ವಿಷೇಣ ಭೀತಿಂ
ಸುಧಾಂ ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ನೀತಿ ಶತಕವು ಹೇಳುತ್ತದೆ; ದೇವತೆಗಳು ಮತ್ತು ಅಸುರರು ಅಮೃತವನ್ನು ಪಡೆಯಲು ಸಮುದ್ರ ಮಥನ ಮಾಡಿದರಷ್ಟೇ. ಆಗ ಅಷ್ಟೈಶ್ವರ್ಯಗಳು, ಅಮೂಲ್ಯ ರತ್ನಗಳು ಬಂದವು; ಮಥನ ಮುಂದುವರಿದಾಗ ಭೀಕರವಾದ ಹಾಲಾಹಲ ಉದ್ಭವಿಸಿತು ಅಷ್ಟೈಶ್ವರ್ಯ ದೊರೆತಾಗ ಮೇರೆ ಮೀರಿದ ಆನಂದದಿಂದ ಮಥನ ಕಾರ್ಯನಿಲ್ಲಿಸಲಿಲ್ಲ; ಭೀಕರವಾದ ಹಾಲಾಹಲ ಬಂದಾಗ ದುಃಖಿತರಾಗಿ, ನಿರಾಶೆಗೊಂಡು ಕಡೆಯುವುದನ್ನು ನಿಲ್ಲಿಸಲಿಲ್ಲ. ಅವರ ಗುರಿ ಅಮೃತವನ್ನು ಪಡೆಯುವುದಾಗಿತ್ತಾದ ಕಾರಣ, ಮಥನ ಕಾರ್ಯ ಅದು ದೊರೆವವರೆಗೆ ಮುಂದುವರಿಯಿತಷ್ಟೆ. ಅದೇ ರೀತಿಯಲ್ಲಿ ನಾವೊಂದು ಕಾರ್ಯವನ್ನು ಮಾಡುತ್ತಹೊರಟಾಗ ಅಷ್ಟೈಶ್ವರ್ಯ. ಹಾಲಾಹಲ ಎರಡೂ ಸಂಭವನೀಯ. ಕೀರ್ತಿ. ಗೌರವ, ಕಾಣಿಕೆ ಮುಂತಾದ ಮಹಾರತ್ನಗಳು ಸಿಕ್ಕುವುದು ಎಷ್ಟು

ಸ್ವಾಭಾವಿಕವೋ, ಆಗದವರಿಂದ ಅಷ್ಟೇ ಕಟುಟೀಕೆ, ನಿಂದೆ ಮುಂತಾದವು ಸ್ವಾಭಾವಿಕ. ಈ ಎರಡೂ ನಮ್ಮ ಗುರಿಯಲ್ಲ. ಶಿವಪಥಿಕರಾಗಿ ನಾವು ಹೊರಟಾಗ ಒಂದು ಬದಿಯಲ್ಲಿ ಸುಂದರ ನಂದನವನ, ಇನ್ನೊಂದು ಬದಿಯಲ್ಲಿ ಕೊಳಚೆ ಕಾಣುತ್ತೇವೆ. ಎರಡನ್ನೂ ಉಪೇಕ್ಷಿಸಿ ಗುರಿಯ ಗೌರೀಶಂಕರದತ್ತ ಸಾಗಬೇಕು. ದೇವತೆ-ಅಸುರರ ಗುರಿ ಅಮೃತ ಪ್ರಾಪ್ತಿಯಾಗಿದ್ದಂತೆ ನಮ್ಮ ಜೀವನಯಾತ್ರೆಯ ಗುರಿ ಶಿವಕಾರುಣ್ಯ ಸಂಪಾದನೆ. ವಿವೇಕಿಗಳಾದವರು ಕಾರ್ಯಸಾಧನೆ ಮೆಚ್ಚಿಕೊಳ್ಳುವರು. ಅವಿವೇಕಿಗಳು ಹೀಗಳೆಯುವರು. ಟೀಕೆ-ಟಿಪ್ಪಣಿ ಬರಲೇಬಾರದೆಂದಿದ್ದರೆ ಆಗ ಇರುವುದು ಒಂದೇ ಮಾರ್ಗ. ಎಲ್ಬರ್ಟ್ ಹಬ್ಬರ್ಡ್ ಹೇಳುವಂತೆ 'To avoid criticism, do nothing, say nothing, be nothing' ಇಂಥ ಬದುಕನ್ನು ಬದುಕಿಯಾದರೂ ಪ್ರಯೋಜನವೇನು? ಆದ್ದರಿಂದ ಟೀಕೆಗೊಳಗಾದರೂ ಚಿಂತೆಯಿಲ್ಲ ಗುರಿ ಘನವಾಗಿರಬೇಕು.

ನಮ್ಮ ಶಕ್ತಿಗೆ ಮೀರಿದ ಗುರಿ ಎಂದು ಕೆಲವೊಮ್ಮೆ ನಮಗೇ ಆತಂಕ ವಾಗಬಹುದು: ಅಥವಾ ತುಂಬಾ ಅವ್ಯವಹಾರಿಕ ಗುರಿಯೆಂದು ಅನ್ಯರು ಅಪಹಾಸ್ಯ ಮಾಡಬಹುದು. ಈ ಎರಡಕ್ಕೂ ಕಿವಿಗೊಡಬಾರದು. ಗಯಟೆ ಹೇಳುತ್ತಾನೆ: 'Only engage, and then the mind grows heated, begin it, and the work will be completed.' ಗುರಿಯನ್ನು ಹಮ್ಮಿಕೊಳುತ್ತಿದ್ದಂತೆಯೇ ಅತುಳ ಬಲ ಎಲ್ಲೆಲ್ಲಿಂದಲೋ ಒದಗುತ್ತದೆ. ಇಷ್ಟೇ ಅಲ್ಲ ಏನನ್ನಾದರೂ ಸಾಧಿಸುವುದತ್ತಲಿರಲಿ, ಪ್ರಯತ್ನದಲ್ಲೇ ಅಪೂರ್ವ ಆತ್ಮಸಂತೋಷವಿದೆ. ಸರ್ ಆಲ್‌ಫ್ರೆಡ್‌ಗ್ರೆನ್‌ಪೆಲ್ ಹೇಳುತ್ತಾನೆ: 'ಆನಂದ ಲಭಿಸುವುದು ಸೌಖ್ಯದಿಂದಲ್ಲ, ಸಂಪತ್ತಿನಿಂದಲ್ಲ, ಸ್ತುತಿಯಿಂದಲೂ ಅಲ್ಲ. ಯಾವುದಾದರೊಂದು ಒಳ್ಳೆಯ ಕೆಲಸದಲ್ಲಿ ತೊಡಗುವುದರಿಂದ ಮಾತ್ರ.'

ಪ್ರತಿಯೊಬ್ಬನು ತನ್ನ ವೇಷ-ಲಾಂಛನ, ಸ್ಥಾನ-ಮಾನಗಳಿಗನುಗುಣವಾದ ಕರ್ತವ್ಯ ಹೊಂದಿರುತ್ತಾನೆ. ಆಗ ಈ ಲಾಂಛನ ಅಥವಾ ಸ್ಥಾನ ವಿಧಿಸುವ ಮೊತ್ತದ ಕರ್ತವ್ಯವನ್ನು ಮಾಡದಿದ್ದರೆ ಅವನು ಅಧಮ: ತನ್ನ ಪಾಲಿನ ಕರ್ತವ್ಯವನ್ನಾದರೂ ಅಚ್ಚುಕಟ್ಟಾಗಿ ಮಾಡಿದರೆ ಮಧ್ಯಮ; ತನ್ನ ಕರ್ತವ್ಯಕ್ಕೂ ಮಿಕ್ಕಿದ ಯೋಜನೆಗಳನ್ನು ಹಾಕಿಕೊಂಡು ಜನತೆ ನಿರೀಕ್ಷಿಸಿದ ಆಸೆ-ಆಕಾಂಕ್ಷೆಗಳಿಗಿಂತಲೂ ಮುಂದುವರಿದ ಕಾರ್ಯಕ್ರಮ ಹಾಕಿಕೊಂಡು ಪೂರೈಸಿದರೆ ಅವನು ಉತ್ತಮ. ಶ್ರೇಷ್ಠಮಟ್ಟದ ಅಂತರಂಗದ ಸುಖ ಸಿಕ್ಕುವುದು ಯಾವುದಾದರೊಂದು ಘನವಾದ ಉದ್ದೇಶವನ್ನು ಸಾಧಿಸುವುದರಿಂದ ಅಥವಾ ಅದಕ್ಕಾಗಿ ಶ್ರಮಿಸುವುದರಿಂದ. ಸಾಧನಾಪಥದಲ್ಲಿ ವಿಘ್ನಗಳು ಬರುವುದುಂಟು. ಆದ ಮಾತ್ರಕ್ಕೆ ಹಿಮ್ಮೆಟ್ಟಬಾರದು. ವಿಶಾಖದತ್ತ

ಮಾತ್ರ ಹರಕೆ

ವಿರಚಿತ 'ಮುದ್ರಾರಾಕ್ಷಸ' ನಾಟಕದಲ್ಲಿ ಕರ್ತೃ ಹೇಳುತ್ತಾನೆ, "ಕೀಳು ಜನರು ಕಷ್ಟಗಳು ಬಂದಾವೆಂದು ಹೆದರಿ ಕಾರ್ಯವನ್ನೇ ಆರಂಭಿಸರು. ಮಧ್ಯಮ ವರ್ಗದವರು ಆರಂಭಿಸಿದರೂ ಕಷ್ಟ ಬಂದಾಗ ಕೈ ಬಿಡುವರು; ಜ್ಞಾನಿಗಳು ಎಷ್ಟೇ ಕಷ್ಟ ಬಂದರೂ ಸಹ ತಮ್ಮ ಸಾಧನೆಯನ್ನು ಕೈಬಿಡರು. ಅಂತೆಯೇ ಅವರು ಮಹಾಂತರು ಎನಿಸಿ ಕೊಳ್ಳುತ್ತಾರೆ." ಕನ್‌ಫ್ಯೂಷಿಯಸ್ ಹೇಳುತ್ತಾನೆ. "ಶ್ರೇಷ್ಠ ಮನುಷ್ಯನಿಗೆ ಮೂರು ಲಕ್ಷಣಗಳಿರುತ್ತವೆ, ಸದ್ಗುಣ, ವಿವೇಕ, ಧೈರ್ಯ. ಸದ್ಗುಣಿಯಾದುದ್ದರಿಂದ ಅವನಿಗೆ ಚಿಂತೆ ಇರದು. ವಿವೇಕಿಯಾದ್ದರಿಂದ ಆತ ತಬ್ಬಿಬ್ಬಾಗನು, ಧೈರ್ಯಶಾಲಿಯಾದ್ದರಿಂದ ಅವನಿಗೆ ಹೆದರಿಕೆಯೇ ಇರದು". ಸದ್ಗುಣವಂತನಾದವನು ವಿತರ್ಕೂ ಚಿಂತಿಸಬೇಕಿಲ್ಲ. ನಿತ್ಯಾನಿತ್ಯ ವಿವೇಕ ಪ್ರಜ್ಞೆ ಇದ್ದರೆ ಎಂತಹ ಎಡರು ಕವಿದಾಗಲೂ ಪರಿಹರಿಸಿಕೊಂಡು ಮುಂದಡಿ ಇಡಬಲ್ಲ; ಧೈರ್ಯಶಾಲಿಯಾದ್ದರಿಂದ ಭೀತಿ, ಹೇಡಿತನ ಬಳಿ ಸಹ ಹಾಯವು. ಇಂತಹ ಧೀಮಂತಿಕೆಯೊದಗುವುದು ದೈವೀ ಶರಣಾಗತಿಯಿಂದ ಮಾತ್ರ.

ಮಹಾಭಾರತದಲ್ಲಿ ಸುಪ್ರಸಿದ್ಧವಾದ ಚಂದ್ರಹಾಸನ ಕಥೆಯನ್ನು ಒಂದು ದಿನ ಓದುತ್ತಿದ್ದೆ. ಎಷ್ಟೋ ಬಾರಿ ಓದಿದ್ದರೂ, ಈ ಬಾರಿ ಏಕೋ ಹೊಸದೆನಿಸಿತು. ಚಂದ್ರಹಾಸ ಅನಾಥ. ತನ್ನವರೆನ್ನುವವರು ಯಾರೂ ಇಲ್ಲ. ಬೀದಿಯ ಮಗುವಾಗಿ ಬೆಳೆದ. ಆದರೂ ಎಲ್ಲರ ಪ್ರೇಮಕ್ಕೆ ಪಾತ್ರನಾದ. ಏನೂ ಅರಿಯದ ಕಂದನಿಗೆ ದುರ್ಬುದ್ಧಿ ಶತ್ರುವಾದ. ಅವನ ರಾಜ್ಯವನ್ನೇನೂ ಕಬಳಿಸಲು ಈ ಬಾಲಕ ಬಯಸಿರಲಿಲ್ಲ. ಆದರೂ ಆ ದುರ್ಬುದ್ಧಿಗೆ ವಿಪರೀತ ಭಯ. ಮುಗ್ಧ ಹಸುಳೆಯನ್ನು ವಧಿಸ ಬಯಸಿದ. ಕ್ರೂರಿಗಳಾದ ಕೊಲೆಗಡುಕರು ಸಹ ಮನಕರಗಿ ಮಗುವನ್ನು ಕೊಲ್ಲದೇ ಹೋದರು. ಚಂದ್ರಹಾಸ ತರುಣನಾಗಿ ಬೆಳೆದು ಅರಿಯದೆ ದುರ್ಬುದ್ಧಿಯ ಬಳಿಗೆ ಬಂದಾಗ, ವಿಷವನ್ನು ಕೊಡಲು ಆಜ್ಞೆಮಾಡಿ ಅವನು ಚಂದ್ರಹಾಸನ ಕೈಲಿ ಕೊಟ್ಟ ಪತ್ರ ಅಕಸ್ಮಾತ್ ಅವನ ಪುತ್ರಿ ವಿಷಯೆಯ ಕೈಯಲ್ಲಿ ಸಿಕ್ಕು, ವಿಷದ ಬದಲು ವಿಷಯೆಯನ್ನು ಚಂದ್ರಹಾಸ ಪಡೆದ. ಇಷ್ಟಾದರೂ ಮತ್ಸರ ಬಿಡದ ದುರ್ಬುದ್ಧಿ ಚಂದ್ರಹಾಸನನ್ನು ಕೊಲ್ಲಲು ಯೋಜಿಸಿದಾಗ, ದೈವೀಲೀಲೆ ಎಂಬಂತೆ ದುರ್ಬುದ್ಧಿಯ ಮಗ ವಧಿಸಲ್ಪಟ್ಟ. ಮುಗ್ಧನು, ಸಜ್ಜನನೂ ಆದ ಚಂದ್ರಹಾಸನಿಗೆ ದೈವೀಬಲ ಅಖಂಡವಾಗಿತ್ತು. ಅಂತೆಯೇ ದುರ್ಬುದ್ಧಿಯ ಪ್ರಯತ್ನಗಳೆಲ್ಲವೂ ಹುಸಿಯಾದವು. ಅವನು ಯಾವುದೇ ಪ್ರತೀಕಾರ ಕೈಗೊಳ್ಳಲಿಲ್ಲ; ದೈವವೇ ತಕ್ಕ ಶಿಕ್ಷೆ ನೀಡಿತು.

ಈ ಕಥೆಯನ್ನು ಜೀವನಕ್ಕೆ ಅನ್ವಯಿಸಿ ನೋಡಿದರೆ ಅತ್ಯಂತ ವಾಸ್ತವಿಕ ಎನಿಸದಿರದು. ಧೀಮಂತ ನಿಲುವು, ಶ್ರೀಮಂತ ಗುರಿ ಇರಿಸಿಕೊಂಡು ಓರ್ವ ಸಹೃದಯಿ, ಯಾರಿಂದ ಗುರುತಿಸಲ್ಪಡದೆಯೂ (unrecognized) ತನ್ನ ಪಾಡಿಗೆ ತಾನು

ಕಾರ್ಯನಿರತನಾದಾಗ ಎಲ್ಲೆಲ್ಲಿಯೋ ಶತ್ರುಗಳು ಹುಟ್ಟಿಕೊಳ್ಳುವರು. ಇವನಿಗೆ ಎಳ್ಳಷ್ಟೂ ಅವರ ಬಗ್ಗೆ ದ್ವೇಷವಿಲ್ಲದಿದ್ದರೂ, ಇವನು ಅವರ ಪ್ರಗತಿಗೆ ಯಾವುದೇ ರೀತಿ ಮಾರಕನಾಗದಿದ್ದಾಗಲೂ ಅವರಿಗೆ ಎಲ್ಲಿಲ್ಲದ ಭಯ, ಎಲ್ಲಿ ತಮ್ಮ ಕೀರ್ತಿವಲಯವನ್ನು ಪ್ರವೇಶಿಸಿ, ತಮ್ಮ ಸ್ವಪ್ರತಿಷ್ಠೆಯ ಸಿಂಹಾಸನದಿಂದ ಕೆಳಗಿಳಿಯಬೇಕೊ ಎಂದು. ಈ ಸ್ವಕಲ್ಪಿತ ಭೀತಿಯೊಡನೆ ಕತ್ತಿ ಮಸೆಯ ತೊಡಗುವರು. ನಿಂದಿಸುವದು, ಎಡರನ್ನೊಡ್ಡುವುದು, ಅಪಹಾಸ್ಯ ಮಾಡುವುದು, ಜೀವ ಭಯವನ್ನೂ ಉಂಟು ಮಾಡುವುದು ಒಂದೇ ಎರಡೇ ! ದುರ್ಬುದ್ಧಿಯ ಈ ಚೆಲ್ಲಾಟ ಮುಂದುವರಿಯಲಿ ; ಅವರಿಗೆ ಬುದ್ಧಿ ಹೇಳುವ ಪ್ರಯತ್ನವನ್ನೇನೂ ಈಗ ಮಾಡುವುದು ಬೇಡ. ಅವರು ಪರಿವರ್ತನೆಗೊಳ್ಳದಷ್ಟು ಕಮಟುಗಟ್ಟಿರಬಹುದು. ತೀರಾ ಎಣ್ಣೆ ಕುಡಿದ, ತೊಳೆಯಲು ಅಸಾಧ್ಯವಾದ ಗಾಣದ ಬಟ್ಟೆಯನ್ನು ಸುಡುವುದೊಂದೇ ಪರಿಹಾರವಾದಂತೆ, ಪರಿವರ್ತನೆಗೆ ಈಡಾಗದ ಇವರನ್ನು ವಿಧಿ ಶಿಕ್ಷಿಸುವದೊಂದೇ ಉಳಿದಿರಬಹುದು. ಇಂಥ ಪ್ರಸಂಗದಲ್ಲಿ ಚಂದ್ರಹಾಸ ಮಾಡಬೇಕಾದುದೇನು ? ಎಂಬುದನ್ನರಿತರೆ ಸಾಕು. ತನ್ನ ಸಾತ್ವಿಕತೆ ಬಿಟ್ಟುಕೊಡಲಿಲ್ಲ, ಕತ್ತಿಗೆ ಕತ್ತಿ ! ಮಸೆಯಲಿಲ್ಲ, ದೈವೀ ಶರಣಾಗತಿ ತೊರೆಯಲಿಲ್ಲ. ಪರಮಾತ್ಮ ನಡೆಸಿದತ್ತ ನಡೆದ. ದೈವಿ ಸಂಕಲ್ಪ ಅವನನ್ನು ಸಾಮ್ರಾಟನನ್ನಾಗಿ ಮಾಡಿತು. ಅಂತೆಯೇ ಬಸವಣ್ಣನವರು ಹೇಳುತ್ತಾರೆ :


ಆಯುಷ್ಯ ತೀರಿದಲ್ಲದೆ ಮರಣವಿಲ್ಲಯ್ಯ
ಭಾಪೆ ತಪ್ಪಿದಲ್ಲದೆ ದಾರಿದ್ರ್ಯ ವಿಲ್ಲಯ್ಯ.
ಅಂಜಲದೇಕೋ ಲೋಕ ವಿಗುರ್ಬಣೆಗೆ
ಅಂಜಲದೇಕೋ ಕೂಡಲ ಸಂಗಮದೇವಾ. ನಿಮ್ಮಾಳಾಗಿ !

ದೇವನ ಆಳಾದವನನ್ನು ರಕ್ಷಿಸುವ ಹೊಣೆ ಪೋಷಕನದಷ್ಟೆ ! ಅಂತೆಯೇ ತಾನು ಮಾತ್ರ ನಿಶ್ಚಿಂತನಾಗಿ ಮುಂದುವರಿಯಬೇಕು-ಹೇಗೆ

ಅಕೃತ್ವಾ ಪರಸಂತಾಪಂ ಅಗತ್ವಾ ಖಲನಮ್ರತಾಂ
ಅನುತ್ಸೃಜ್ಯ ಸತಾಂ ಮಾರ್ಗಂ ಯತ್ ಸ್ವಲ್ಪಮಪಿ ತದ್ಬಹು ॥

"ಅನ್ಯರಿಗೆ ಪೀಡನೆಯನ್ನುಂಟು ಮಾಡದೆ. ದುಷ್ಟರಿಗೆ ತಲೆಬಾಗದೆ. ಸಜ್ಜನರ ಸದಾಚಾರದ ದಾರಿ ಬಿಡದೆ ಇರುವ ಧೀರವ್ಯಕ್ತಿಯವರು ಗಳಿಸಿದ್ದು ಸ್ವಲ್ಪವಾದರೂ ಹೆಚ್ಚಿನದಾಗಿ ಪರಿಣಮಿಸುವುದು," ಎಂದು ಜ್ಞಾನಿಗಳು ಹೇಳುವ ಕಾರಣ ಇಂಥ ಪಥದಲ್ಲಿ ನಡೆವ ಧೀಮಂತಿಕೆಯೊಂದಿದ್ದರೆ ಸಾಕು. ಇಂಥ ಮಾರ್ಗದಲ್ಲಿ ಎಡಬಿಡದೆ ನಡೆಯುವ ಅಖಂಡ ಆತ್ಮಬಲವನ್ನು ನೀಡೆಂದು ವಿಶ್ವಗುರು ಬಸವಣ್ಣನಲ್ಲಿ ಬೇಡಿ. ಈ ಮಾತೃಪರಕೆಗೆ ಮಂಗಲ ಹಾಡುವೆ.

ಮಾತಾಜಿ.



ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು.

ಬಿತ್ತದ ಬೀಜದ ಫಲವು ವಿಪರೀತ ಚಾರಿತ್ರ್ಯನೋಡಾ !
ತನ್ನಲ್ಲಿ ತಾನೆಯಾಗಿ ಆಗಮವನ್ನೇರಿದಾತನೆ,
ಸ್ವಯಂಕೃತ ಸಹಜ
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನು

—ಚೆನ್ನಬಸವಣ್ಣ : ೩೦

ವಿಶ್ವಗುರು ಬಸವಣ್ಣನವರ ಸಮೀಪವರ್ತಿಯಾಗಿ, ರಕ್ತ ಬಂಧುವಾಗಿ, ನಂತರ ಅನುಗ್ರಹಿಸಲ್ಪಟ್ಟ ಶಿಷ್ಯೋತ್ತಮನಾಗಿ, ಸಮ್ಯಕ್ ಜ್ಞಾನಿಯಾಗಿ, ಷಟಸ್ಥಲ ದರ್ಶನದ ಕ್ರಮಯುಕ್ತ ತತ್ವಜ್ಞಾನ ನೀಡಿದವರು ಮಹಾನುಭಾವಿ ಚೆನ್ನಬಸವಣ್ಣನವರು. ಅವರ ವಚನಗಳು ಸಾಹಿತ್ಯ ಸೌಂದರ್ಯದೃಷ್ಟಿಯಿಂದಲ್ಲದಿದ್ದರೂ, ತತ್ತ್ವಜ್ಞಾನ ದೃಷ್ಟಿಯಿಂದ, ನಿಖರವಾದ, ಅಧಿಕೃತ ಅಭಿಪ್ರಾಯ ಉಳ್ಳವುಗಳು. ಮೇಲ್ಕಂಡ ವಚನದಲ್ಲಿ ಅವರು ಪ್ರತಿಪಾದಿಸುವುದು ಮಹಾಗುರು ಬಸವಣ್ಣನವರು ಸ್ವಯಂಕೃತರು, Self-made ಎಂಬುದನ್ನು.

ಲೋಕಾರೂಢಿಯಲ್ಲಿ ಬಿತ್ತಿಯೇ ಬೆಳೆ ತೆಗೆಯುತ್ತೇವೆ. ಬಿತ್ತದೆ ಬೆಳೆಯನ್ನು ತೆಗೆಯುವುದು ಅಸಾಧ್ಯ, ಅಸಂಭವನೀಯ. ಅದೇ ರೀತಿ ಗುರುಕಾರುಣ್ಯವನ್ನು ಪಡೆದು ಕೊಂಡು ಸಾಮಾನ್ಯವಾಗಿ ಸಾಧಕರು ಮುಂದುವರಿದು ಸಿದ್ಧಪುರುಷರಾಗು ವುದನ್ನು ಕಾಣುತ್ತೇವೆ. ಅಲ್ಲಮ ಪ್ರಭು ಅನಿಮಿಷಯ್ಯನವರಿಂದ, ಅಕ್ಕಮಹಾದೇವಿ

ಶ್ರೀಗುರುಲಿಂಗದೇವರಿಂದ, ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರಿಂದ- ಹೀಗೆ. ಆದರೆ ಬಸವಣ್ಣನವರಿಗೆ ಅನುಗ್ರಹಿಸಿದ ಗುರುವಿಲ್ಲ ; ಅಂತೆಯೇ ಬಿತ್ತಲ್ಪಡದ ಬೀಜ. ಆದರೂ ಅವರ ಚಾರಿತ್ರ್ಯ ವಿಪರೀತ. ತಳೆದ ಪುಷ್ಪ, ಫಲ ಎಲ್ಲವೂ ಅಪಾರ. ಇಂಥ ವ್ಯಕ್ತಿತ್ವ ಅಪೂರ್ವ, ಅಪರೂಪ. ಬುದ್ಧ, ಅರವಿಂದ, ಏಸು ಮುಂತಾದ (prophets) ಪ್ರವಾದಿಗಳಲ್ಲಿ, ಒಂದು ಹೊಸ ಧರ್ಮ, ಪರಂಪರೆಯ ಉಗಮ ಕರ್ತರಲ್ಲಿ ಮಾತ್ರ ಈ ವಿಶೇಷ ಪ್ರಸಂಗ ಕಾಣುತ್ತೇವೆ. ಹೇಗೆ ಪರಮಾತ್ಮನಿಗೆ ತಂದೆ ಇಲ್ಲವೋ, ಎಲ್ಲ ಕಾರ್ಯಕ್ಕೂ ಕಾರಣೀ ಭೂತನಾಗಿ ತಾನು ಮಾತ್ರ ಕಾರಣವೊಂದಿಲ್ಲ ದಿರುವ ಚಿದ್ವಸ್ತುವೋ (Uncaused cause of this Universe) ಅದೇ ರೀತಿ ಪ್ರವಾದಿ (prophet) ಗೆ ಗುರುವು ಇರನು. ಬುದ್ಧನಿಗೆ ದೀಕ್ಷಾಗುರುವು ಯಾರಿಲ್ಲ, ಅವನೇ ಆದ್ಯನು. ಏಸುವಿಗೆ ಜಾನ್, ದಿ ಬ್ಯಾಪ್ಟಿಸ್ಟ್ ದೀಕ್ಷಾಸ್ನಾನ ಮಾಡಿಸಿದ್ದು ನಿಜವಾದರೂ ಅವನು ನಿಮಿತ್ತ-ಮಾತ್ರನು. ಕ್ರೈಸ್ತರಿಗೆ ಆದ್ಯನು ಏಸುವಷ್ಟೆ. ಶ್ರೀ ಅರವಿಂದರಿಗೂ ವಿಶಿಷ್ಟ ಗುರುವಿಲ್ಲ.

ಹಾಗೆ ಬಸವಣ್ಣನವರು ಯಾವ ಲೌಕಿಕ ಗುರುವಿನಿಂದಲೂ ಬಿತ್ತಲ್ಪಟ್ಟವರಲ್ಲ ; " ತನ್ನಲ್ಲಿ ತಾನೆಯಾಗಿ ಆಗಮವನ್ನೇರಿದವರು. " ಅಂದರೆ ಸ್ವಯಂಸಿದ್ಧರಾಗಿ, ಶಾಸ್ತ್ರದೈವತವಾದರು. ಕಾವ್ಯಪುರುಷರಾದರು. ಮಂತ್ರಪುರುಷರಾದರು. ಅವರು ನಡೆದುದು ಬಟ್ಟೆಯಾಯಿತು. ನುಡಿದುದು ವೇದವಾಯಿತು. ಶಾಸ್ತ್ರಗಳನ್ನವಲಂಬಿಸಿ ಅವರು ನುಡಿಯ ರಚನೆ ಮಾಡಲಿಲ್ಲ. ಅವರು ನುಡಿದುವು ಶಾಸ್ತ್ರಗಳಾಗಿ ರೂಪು ಗೊಂಡವು. ಹೀಗೆ ಆಗಮವ (ಶಾಸ್ತ್ರಗಳ) ಏರಿದವರು ಬಸವಣ್ಣನವರು. ಅವರ ಸುತ್ತಲೂ ಅನೇಕ ಕಾವ್ಯಗಳು ರಚಿಸಲ್ಪಟ್ಟವು.

ಬಸವಣ್ಣನವರು ಸ್ವಯಂಕೃತರು. Self-made ;ಯಾರಿಂದಲೂ ಮಾಡಲ್ಪಟ್ಟವರಲ್ಲ. ಅಂದರೆ ಕೀರ್ತಿಯ, ಅಧಿಕಾರದ, ಮಠಾಧಿಪತ್ಯದ, ಭಕ್ತವೃಂದದಿಂದ ಸ್ತುತಿಸಿಕೊಳ್ಳುವ ಆಸೆಗಳಿಂದ ಪ್ರೇರಿತರಾಗಿ ಶಿವಪಥದಲ್ಲಿ ಅಡಿ ಇಟ್ಟವರಲ್ಲ. ದೇವರ ಕರೆಗೆ ಓಗೊಟ್ಟು, ಅಂತರಾತ್ಮದ ಹಂಬಲದ ಮೊರೆ ಕೇಳಿ, ಸತ್ಯಾನ್ವೇಷಕರಾಗಿ ಧರ್ಮಪಥವನು ಪ್ರವೇಶಿಸಿದವರು. ಅವರನ್ನು ಯಾರೂ ಗುರುವನ್ನಾಗಿ ಮಾಡಲಿಲ್ಲ ; ಗುರುವೇ ತಾವಾದರು. ಗುರುವಾದುದು ತಾವು ಜನ್ಮಿಸಿದ ಬ್ರಾಹ್ಮಣ ಮಠದ ಪ್ರಭಾವದ ಬಲದಿಂದಲ್ಲ, ಬ್ರಹ್ಮಜ್ಞಾನ ಪಡೆದು, ಸರ್ವಾಂಗ ಲಿಂಗತ್ವವನ್ನು ಹೊಂದಿದುದರ ಅರ್ಹತೆಯ ಮೇಲಿಂದ.

ನಾಭಿಷೇಕೋ ನ ಸಂಸ್ಕಾರಃ ಸಿಂಹಸ್ಯ ಕ್ರಿಯತೇ ವನೇ
ವಿಕ್ರಮಾರ್ಜಿತಸತ್ವಸ್ಯ ಸ್ವಯಮೇವ ಮೃಗೇಂದ್ರತಾ ॥

ಗರುಡ ಪುರಾಣವು ಹೇಳುತ್ತದೆ : 'ಸಿಂಹಕ್ಕೆ ಯಾರೂ ಸಂಸ್ಕಾರ ಮಾಡಿ ಪಟ್ಟಕಟ್ಟಲಿಲ್ಲ ತನ್ನ ಪರಾಕ್ರಮದಿಂದ ಅದು ಗೆದ್ದು ವನ ಪ್ರಪಂಚದಲ್ಲಿ ಮೃಗಗಳಿಗೆ ಅಧಿಪತಿಯಾಗಿದೆ. ಇದು ಸಿಂಹಕ್ಕೆ ಸ್ವತಃಸಿದ್ಧವಾಗಿ ಬಂದಿದೆ. ಸಿಂಹವು ತನ್ನ ಪರಾಕ್ರಮದಿಂದ ಮೃಗ ರಾಜನಾದಂತೆ ಬುದ್ಧ, ಬಸವಣ್ಣ, ಶಂಕರಾಚಾರ್ಯ, ರಾಮಾನುಜಾಚಾರ್ಯರಂತ ಹವರು ಸ್ವಯಂ ಜ್ಞಾನದಿಂದ ಗುರುತ್ವವನ್ನು ಹೊಂದಿದವರು.

ಬಸವಣ್ಣನವರು ಹೊಂದಿದ ಗುರುತ್ವವು ಸಹಜವಾಗಿ ವಿಕಾಸಗೊಂಡುದು; ಹೊರಗಡೆಯಿಂದ ಆರೋಪಿಸಲ್ಪಟ್ಟುದಲ್ಲ: Some are great, some are made great. ಕೆಲವರು ದೊಡ್ಡವರಿರುತ್ತಾರೆ. ಕೆಲವರು ದೊಡ್ಡವರಾಗಿ ಮಾಡಲ್ಪಡುತ್ತಾರೆ. ಹಣ-ಅಧಿಕಾರ ಉಳ್ಳವರನ್ನು, ಅಥವಾ ಆಶ್ರಿತರ ಸುಗ್ರಾಸ ಭೋಜನ ಸುಖಾದಿಗಳಿಗೆ ಅವಕಾಶ ಕಲ್ಪಿಸುವವರನ್ನು ಹೊಗಳಿ ಹೊಗಳಿ, ಇಲ್ಲದ ಮಹಿಮೆಗಳನ್ನು ಅಲಂಕರಿಸಿ ದೊಡ್ಡವರನ್ನು ಮಾಡುವ ಸಾಧ್ಯತೆ ಇದೆ. ಇನ್ನು ಕೆಲವರು ಸ್ವಭಾವತಃ ಪ್ರತಿಭಾವಂತರು. ಅವರ ಪ್ರತಿಭೆ ಕಾಗದದ ಹೂವಿಗೆ ಪರಿಮಳವನ್ನು ಸಿಂಪಡಿಸಿದಂತಹುದಲ್ಲ, ಒಳಗಿನ ಜ್ಞಾನ ಬಲದಿಂದ ಅರಳುತ್ತಾ ಬರುವುದು. ದೊಡ್ಡವರಾಗಿ ಮಾಡಲ್ಪಟ್ಟ ಈ ಕೃತಕ ಪುಷ್ಪಗಳನ್ನು ಆಶ್ರಯಿಸಲು ಮುಮುಕ್ಷುಗಳೆಂಬ ಭ್ರಮರಗಳು ಬರವು; ಸ್ವಾರ್ಥಿಗಳು, ಸಮಯಸಾಧಕರು, ಹೊಗಳು ಭಟ್ಟಂಗಿಗಳೆಂಬ ಕೀಟಗಳು ಬರುವುವು. ತಾವಾಗಿ ವಿಕಾಸಗೊಂಡ ಆಧ್ಯಾತ್ಮಜ್ಞಾನಿಗಳೆಂಬ ದೇವ ಪುಷ್ಪಗಳನ್ನಾಶ್ರಯಿಸಲು, ಸಾಧಕರೆಂಬ, ಜಿಜ್ಞಾಸುಗಳೆಂಬ ಭ್ರಮರಗಳು ಧಾವಿಸುವವು ಇಂತಹ ದೇವಪುಷ್ಪವಾಗಿ ಬಸವಣ್ಣನವರಿದ್ದರೆಂತಲೇ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವ್ಯಾಪಿಸಿದ್ದ ವಿಶಾಲ ಕ್ಷೇತ್ರಗಳಿಂದೆಲ್ಲ ಶರಣದುಂಬಿಗಳು ಹಾರಿಬಂದುವು, ಆಶ್ರಯ ಪಡೆದವು. ಜ್ಞಾನ ಅನುಗ್ರಹಗಳ ಮಕರಂದವನ್ನುಂಟಿ ದೇವಗಾನ ಹಾಡಿದವು.

ಹೀಗೆ ಸ್ವಯಂಕೃತ ಮಹಾಗುರು ಬಸವಣ್ಣನವರು ಉತ್ತುಂಗ ಸಿದ್ಧಿಯನ್ನು ಪಡೆದುದು ಆವಾವ ಬಲದಿಂದ ? ಕೂಡಲ ಚನ್ನಸಂಗಯ್ಯನೆಂಬ ಮಹಾವೃಕ್ಷದ ಆಶ್ರಯದಲ್ಲಿ.

ದಿವ್ಯಂ ಚೂತರಸಂ ಪೀತ್ವಾ ಗರ್ವಂ ನೋ ಯಾತಿ ಕೋಕಿಲಃ
ಪೀತ್ವಾ ಕರ್ದಮ ಪಾನೀಯಂ ಭೇಕೋ ರಟಿ ರಟಾಯತೇ ॥

ನೀತಿರತ್ನವು ಹೇಳುವಂತೆ (ಸಿಹಿಯಿಂದ ಕೂಡಿದ ದಿವ್ಯವಾದ ಮಾವಿನ ಹಣ್ಣಿನ ರಸವನ್ನು ಕುಡಿದು ಕೋಗಿಲೆ ಸುಸ್ವರವನ್ನು ಹಾಡುವುದು. ಕೆಸರನ್ನು ಕುಡಿದ ಕಪ್ಪೆ ಮಾತ್ರ ಬಿಂಕದಿಂದ ವಟಗುಟ್ಟುವುದು) ಜಾತಿವಾದ, ಸಂಪ್ರದಾಯ ಶರಣಾಗತಿಯ ಕೆಸರನ್ನು ಕುಡಿದು ಕಪ್ಪೆಯಂತೆ ವಟಗುಟ್ಟಿದೆ. ಮಹಾಗುರು ಬಸವಣ್ಣನವರು ಶಿವಕಾರುಣ್ಯ, ಸತ್ಯಸಾಕ್ಷಾತ್ಕಾರದ ಮಾವಿನ ರಸವನ್ನು ಕುಡಿದು ಶಿವಕೋಗಿಲೆಯಾಗಿ ದೈವೀ ಸಂದೇಶವನ್ನು ಹಾಡಿದರು.

ಸಮಸ್ಯೆ? ಸಮಾಧಾನ!

—ಕೆ. ಜಿ. ಮಾಶೆಟ್ಟಿ, ಬೀದರ

ಮಾನವ ಧರ್ಮ, ಶರಣ ಧರ್ಮ-ಇವೆರಡರಲ್ಲಿ ಯಾವುದರ ಅರ್ಥವ್ಯಾಪ್ತಿ ಹಿರಿದು ?

ಮಾನವ ಧರ್ಮ-ಇದು ಸಾಮಾನ್ಯಪದ(Common noun). ಶರಣ ಧರ್ಮ ಎಂಬುವುದು ನಾಮಪದ (Proper noun). ಶರಣರಿಂದ ಕೊಡಲ್ಪಟ್ಟ ಧರ್ಮ ಎಂಬರ್ಥದಲ್ಲಿ ಕೇವಲ ಅರ್ಥವ್ಯಾಪ್ತಿ ದೃಷ್ಟಿಯಿಂದ ಮಾನವಧರ್ಮಕ್ಕಿಂತ ಶರಣ ಧರ್ಮ ಹಿರಿದು. ಏಕೆಂದರೆ 'ಮರೆದೊಡೆ ಮಾನವ, ಅರಿದೊಡೆ ಶರಣ.' 'ಅಜ್ಞಾನದಲ್ಲಿರುವವನು ಮಾನವ ಸುಜ್ಞಾನಿಯಾದವನು ಶರಣ'. 'ಹುಟ್ಟುಗುಣಗಳಲ್ಲಿ ಬಾಳುವವನು ಮಾನವ. ದೈವೀಗುಣಗಳಲ್ಲಿ ಬಾಳುವವ ಶರಣ.' ಮಾನವ ಎಂದರೆ ಇದ್ದಂತಿರುವ. ಹುಟ್ಟಿದಾಗ ಇರುವಂತೆ ಇರುವ ಸ್ಥಿತಿ. ಶರಣ ಎಂದರೆ ಪರಿವರ್ತನೆ, ದೈವೀಕರಣ ಹೊಂದಿದ ವಿಶೇಷ ಸ್ಥಿತಿ. ಶರಣ (Saint) ನಾಗುವುದೇ ಧರ್ಮದ ಗುರಿಯಷ್ಟೇ!

—ಕೆ. ಜಿ. ಹೇಮಾವತಿ, ಹೆಚ್. ಎಂ. ಟಿ. ಬೆಂಗಳೂರು

ದೇವರು ಎಲ್ಲಿದ್ದಾನೆ ?

ಎಲ್ಲೆಲ್ಲಿಯೂ ಇದ್ದಾನೆ. ನಮ್ಮಲ್ಲಿ-ನಿಮ್ಮಲ್ಲಿ, ಎಲ್ಲೆಡೆಯಲ್ಲಿ : ಹಾಲಿನಲ್ಲಿ ತುಪ್ಪವು ಓತಪ್ರೋತವಾಗಿರುವಂತೆ ಸರ್ವವ್ಯಾಪಿಯಾಗಿದ್ದಾನೆ.

—ಕೆ. ಜಿ. ಮಂಜುನಾಥ, ಹೆಚ್. ಎಂ. ಟಿ. ಬೆಂಗಳೂರು

ನಾನು ಯಾರು. ಎಲ್ಲಿಂದ ಬಂದೆ ಮತ್ತು ಎಲ್ಲಿಗೆ ಹೋಗಬೇಕು ?

ನಾನು ಎಂದರೆ ಸತ್-ಚಿತ್-ಆನಂದ ಲಕ್ಷಣೀಭೂತವಾದ ದೇಹೇಂದ್ರಿಯಾದಿಗಳನ್ನಾಡಿಸುವ ಆತ್ಮ : ಪರಮಾತ್ಮ ಸಮುದ್ರವೆಂಬ ಭೂಮಿ ಚೈತನ್ಯದಿಂದ ಬೇರ್ಪಟ್ಟ ಬಿಂದು : ಸಾಧನೆಯಿಂದ ಪರಮಾತ್ಮ ಸಿಂಧುವನ್ನು ಬೆರೆಯುತ್ತದೆ.

—ಪನ್ನಗವೇಣಿ, ಮುಡಿಗುಂಡಂ

ಇತ್ತೀಚೆಗೊಬ್ಬ ಪೂಜ್ಯ ಮಾತಾಜಿಯವರು ಮಾಡುತ್ತಿರುವ ಅಪೂರ್ವ ಜನಜಾಗೃತಿ ಉನ್ನತ ಸೇವೆಗಳ ಬಗ್ಗೆ ಮಾತನಾಡಿದರೆ 'ನಿನಗೆಲ್ಲೋ ಭ್ರಮೆ. ಉದರ

ನಮಿತ್ತಂ ಬಹುಕೃತ ವೇಷಂ' ಎನ್ನುವನಲ್ಲಾ ಅವನ ಕಣ್ತೆರೆಸುವ ಬಗೆ ಹೇಗೆ ?

☫ ಒಟ್ಟಾರೆಯಲ್ಲಿ ಜಗತ್ತಿನ ಜನಗಳದೆಲ್ಲ ಉದರ ನಿಮಿತ್ತಕ್ಕಾಗಿ ಹಾಕಿದ ವೇಷಗಳೇ. ಏಕೆಂದರೆ ಹೊಟ್ಟೆಯನ್ನು ತೆಗೆದು ಯಾವ ಕಡೆಯಲ್ಲೂ ಇಡಲು ಬರದಷ್ಟು ಅದ್ಭುತವಾಗಿ ಸೃಷ್ಟಿಕರ್ತನು ನಿರ್ಮಾಣ ಮಾಡಿದ್ದಾನೆ. ಲೋಕವೆಲ್ಲವೂ ದಿಗ್ದರ್ಶಕನಾದ ಪರಮಾತ್ಮನಾಡಿಸುವ ನಾಟಕ. ಎಲ್ಲರೂ ಪಾತ್ರಧಾರಿಗಳು. ಆದರೆ ಕೆಲವರು ನಿಷ್ಠೆಯಿಂದ ತಮ್ಮ ವೇಷಕ್ಕನುಗುಣವಾದ ಪಾತ್ರ ಮಾಡಿ, ಅಸಂಖ್ಯಾತರ ಕಣ್ಣೀರು ಒರೆಸುವ, ನೊಂದವರನ್ನು ಸಾಂತ್ವನಿಸುವ, ಮುಗ್ಗರಿಸುವವರನ್ನು ಮೇಲಕ್ಕೆತ್ತುವ ಕಲ್ಯಾಣ ಮಾಡುತ್ತಾರೆ. ಇನ್ನು ಕೆಲವರು ಲೋಕಕಂಟಕರಾಗಿ ಬಾಳಿ, ಕೊಳಕು ಮಂಡಲವೆಂಬ ಹಾವಿನಂತೆ ತಾವು ಮುಟ್ಟಿದ್ದನ್ನೆಲ್ಲ ಕೊಳೆಸಿ ಹೊಲಸುಮಾಡಿ, ಹೆರವರ ಕಣ್ಣೀರ ಹೊಳೆಯಲ್ಲಿ ಸಂತೋಷದ ವಿಹಾರ ಮಾಡಬಯಸುತ್ತಾರೆ. ಆದ್ದರಿಂದ ಎಲ್ಲರೂ ಪಾತ್ರಧಾರಿಗಳೇ !

ಅವರ ಕಣ್ತೆರೆಸುವ ವ್ಯರ್ಥಸಾಹಸ ನೀವೇಕೆ ಮಾಡುವಿರಿ ? ನಿದ್ರೆಯ ನಟನೆ ಮಾಡುವವರಾದರೆ ಕಣ್ತೆಗೆಸುವುದು ಅಸಾಧ್ಯ. ನಿಜಕ್ಕೂ ನಿದ್ರೆ ಮಾಡುವವರಾದರೆ ಮಂಪರು ಹರಿದ ತಕ್ಷಣ ಕಣ್ಣು ತಾವಾಗಿಯೇ ಬಿಡುವರು.

—ಓರ್ವ ಹೆಣ್ಣು ಹೆತ್ತ ತಾಯಿ, ಬೆಂಗಳೂರು

✵ ಹೆಣ್ಣು ಹುಣ್ಣೋ ಅಥವಾ ಮನೆಯ ಕಣ್ಣೋ ?

☫ ಅವಿವಾಹಿತೆಯಾಗಿದ್ದಾಗ ತಾಯಿತಂದೆಯರ ಮಾತನ್ನು ಕೇಳದೆ, ಹಗಲಿರುಳೆನ್ನದೆ ಹೊಸ್ತಿಲ ಹೊರಗೆ ಅಲಂಕಾರ ಮಾಡಿಕೊಂಡು ತಿರುಗುವ ಮಗಳು ಹುಣ್ಣು. ತಾಯಿತಂದೆಯರನ್ನು ಗೌರವಿಸಿ ತನ್ನ ಕರ್ತವ್ಯ ತಾನು ಮಾಡುತ್ತ, ತನ್ನ ನೀತಿಯನ್ನು ತಾನು ಸಂರಕ್ಷಿಸಿಕೊಳ್ಳುತ್ತ ಇರುವ ಮಗಳು ಬಾಳಿನ ಕಣ್ಣು. ವಿವಾಹಿತೆಯಾದಾಗ ಪತಿ, ಹಿರಿಯರ ಮಾತಿನ ಕಟ್ಟಿಗೆ ಒಳಪಡದೆ, ಮೈಯನ್ನು ಪರಪುರುಷರೆದುರಿಗೆ ಪ್ರದರ್ಶಿಸುವಂತೆ ಶೃಂಗಾರ ಮಾಡಿಕೊಂಡು ಗಂಡ-ಮಕ್ಕಳ ಸುಖ ಲಕ್ಷಿಸದೆ ಅಂಡಲೆಯುವ ಹೆಣ್ಣು ಹುಣ್ಣು. ತನ್ನ ಪಾತಿವ್ರತ್ಯದ ಚೌಕಟ್ಟಿನಲ್ಲಿ ಭದ್ರವಾಗಿದ್ದು, ತನ್ನ ಸಾಂಸಾರಿಕ ಹಿತ ಚಿಂತನೆ ಗೈಯ್ಯುವ ಹೆಣ್ಣು ಬಾಳಿನ ಕಣ್ಣು.

—ಎಸ್. ಬಿ. ಪಾಟೀಲ, ಧಾರವಾಡ

✵ ನಾವು ನಿಮ್ಮ ಮತ್ತು ನಿಮ್ಮ ಪತ್ರಿಕೆಯ ಅಭಿಮಾನಿಗಳು. ಏನಾದರೂ ಮಹತ್ವಪೂರ್ಣ ಸುದ್ದಿಯನ್ನು ನಾವು ಕಳಿಸಿದರೆ ಕಲ್ಯಾಣಕಿರಣದಲ್ಲಿ ನೀವು ಹಾಕುವುದೇ ಇಲ್ಲವಲ್ಲ. ಏಕೆ ?

☫ ಕಲ್ಯಾಣಕಿರಣ ವಾರ್ತಾ ಪತ್ರಿಕೆ (News Paper) ಅಲ್ಲ ; ವೈಚಾರಿಕ ವಸ್ತುನಿಷ್ಠ ಪತ್ರಿಕೆ. ಇಲ್ಲಿ ಸುದ್ದಿಗೆ ಎಡೆಯಿಲ್ಲ. ತಾತ್ವಿಕ ಲೇಖನಗಳಿಗೆ ಮಾತ್ರ ಪ್ರಕಟಣಾವಕಾಶ. ಇದರ ಓದುಗರಲ್ಲಿ ಬಹುಪಾಲು ಜನ ಪೂಜ್ಯ ಗುರುಗಳ ಮತ್ತು ಮಾತಾಜಿಯವರ ಕಾರ್ಯ ಕ್ರಮ ವಿವರ ತಿಳಿಯಬಯಸುತ್ತಾರಾದ ಕಾರಣ ಅವಶ್ಯಕತೆಯೆಂದು ಸಂಸ್ಥೆಯ ಕಾರ್ಯಕ್ರಮ ಮಾತ್ರ ಪ್ರಕಟಿಸುತ್ತೇವೆ.

—ಶೈಲಜಾ, ಊರುಬೇಡ

✵ ಕೆಲವರು ಸ್ವಾಮಿಗಳಿಗೆ ಕಾಣಿಕೆ ಸಮರ್ಪಿಸಿದಾಗ ಅವರು ಮುಟ್ಟದೆ, ಅವರ ಏಜೆಂಟರು ತೆಗೆದುಕೊಳ್ಳುವರಲ್ಲ. ಮುಟ್ಟಿ ತಾವೇ ತೆಗೆದುಕೊಂಡರೆ ಸ್ವಾಮಿಗಳಿಗೆ ತಪ್ಪೇ ? ವೈರಾಗ್ಯಕ್ಕೆ ಚ್ಯುತಿಯೇ ? ಆ ಏಜೆಂಟರು ತೆಗೆದುಕೊಂಡದ್ದು ಸರಿಯಾಗಿ ಸ್ವಾಮಿಗಳಿಗೆ ಮುಟ್ಟುವ ಬಗ್ಗೆ ನಮಗೆ ವಿಶ್ವಾಸವೇನು ?

☫ ಕೆಲವು ಸ್ವಾಮಿಗಳಲ್ಲಿ ವಿರತಿಯ ಬಗ್ಗೆ ತಪ್ಪು ಕಲ್ಪನೆಯಿದೆ. ಹೊನ್ನು ಮಾಯೆಯಾಗುವುದು ಸ್ವಾರ್ಥಿಗೆ, ಹೊನ್ನು ತಾಯಿಯಾಗುವುದು ತ್ಯಾಗಿಗೆ. ಮುಟ್ಟದೆ ಯಾರ ಪಾಲೋ ಮಾಡುವುದಕ್ಕಿಂತ, ಅದನ್ನು ನಿರ್ಲಿಪ್ತನಾಗಿ ಸ್ವೀಕರಿಸಿ ಉದಾತ್ತ ಧ್ಯೇಯಕ್ಕೆ ಬಳಸುವುದು ಹೆಚ್ಚಿನ ಸಾಧನೆ. ಏಕೆಂದರೆ ಸದ್ಭಕ್ತರು ಬೆವರು ಸುರಿಸಿ ದುಡಿದು ಹಣವನ್ನು ಕಾಣಿಕೆ ರೂಪದಲ್ಲಿ ಕೊಡುವುದು ಏಜೆಂಟರು ಮನೆ ಕಟ್ಟಿಸಲಿಕ್ಕಲ್ಲ, ಸ್ವಾಮಿಗಳು ಸಾರ್ವಜನಿಕ ಸೇವೆ ಮಾಡಲಿಕ್ಕೆ ! ಇನ್ನು ಎರಡನೇ ಪ್ರಶ್ನೆ ; ಏಜೆಂಟರು ನಿಸ್ವಾರ್ಥಿಗಳು, ತ್ಯಾಗಿಗಳು ಇದ್ದರೆ ಮಾತ್ರ ಹಣವು ಮಠಕ್ಕೆ ಸೇರುತ್ತೆ. ಸ್ವಾಹಾ ಮಾಡಲೆಂದೇ ಬಂದವರಾದರೆ ಅವರ ಟ್ರೆಜರಿ ಸೇರುತ್ತದೆ.

—ದೇವರು, ಊರುಬೇಡ

✵ ನಾನೋರ್ವ ಮಠಾಧಿಕಾರಿ ಭಕ್ತರು ಕಾಣಿಕೆ ಕೊಟ್ಟಾಗ ತೆಗೆದುಕೊಂಡು ನಮ್ಮ ಏಜೆಂಟನ ಕೈಯಲ್ಲಿ ಕೊಡುವೆ. ಆದರಲ್ಲಿ ಬಂದ ಪ್ರಾಪ್ತಿಯೆಲ್ಲ ಮಠಕ್ಕೆ ಪ್ರಾಮಾಣಿಕವಾಗಿ ಸಂದಾಯವಾಗುತ್ತಿಲ್ಲ ಎಂಬ ಸಂಶಯ ಬಂದಿದೆ ಹೇಗೆ ತಡೆಗಟ್ಟಲಿ ?

☫ ದುಡ್ಡು ಅವರ ಬಳಿಯೇ ಕೊಟ್ಟರೂ ಚಿಂತೆಯಿಲ್ಲ, ಪಕ್ಕದಲ್ಲಿ ಓರ್ವರನ್ನು ನಿಲ್ಲಿಸಿ ಆಗಿಂದಾಗಲೇ ರಸೀತಿ ಬರೆಯಲು ತಿಳಿಸಿರಿ. ಒಂದು ಪುಸ್ತಕದಲ್ಲಿ ತಕ್ಷಣ ಆಯಾ ಸ್ಥಳದ ಕಾಣಿಕೆ ಬರೆದುಕೊಂಡು ಮಠಕ್ಕೆ ಹೋಗುತ್ತಿದ್ದಂತೆಯೇ ಲಿಸ್ಟ್ ಪ್ರಕಾರ ಎಣಿಸಿ ಖಚಿತಪಡಿಸಿಕೊಳ್ಳಿರಿ. ✵ ✵ ✵

ಮಾಯೆ—ಮಾತೆ

ಸದ್ಗುರು ಶ್ರೀ ಸ್ವಾಮಿ ಲಿಂಗಾನಂದರು.

ಅನುಭವ ಮಂಟಪದ ಭವ್ಯ ಪ್ರಾಂಗಣ. ಉನ್ನತಾಸನದಲ್ಲಿ ಪ್ರಭುದೇವ ಮಂಡಿಸಿದ್ದಾನೆ. ಅದೇ ಆಗ ತುಂಬು ಯೌವನದ ಮಹಾದೇವಿ ಬಾಗಿಲಿಗೆ ಬಂದು ನಿಂತಿದ್ದಾಳೆ. ಎಲ್ಲರ ಕಂಗಳಲ್ಲೂ ಭಕ್ತಿ, ಪ್ರೇಮ, ಕುತೂಹಲದ ಕಳೆ ಸೂಸುತ್ತಿದೆ. ಮಡಿವಾಳ ಮಾಚಿದೇವರು ಶುಭ್ರ ಧವಳ ನಡೆವ ಮಡಿಯನ್ನು ಬಾಗಿಲಲ್ಲಿ ಹಾಸಿದಾಗ ಆ 'ಯುವತಿ' ಅದನ್ನೇ ತೆಗೆದುಕೊಂಡು ದಿಗಂಬರ ದೇಹವನ್ನು ಮುಚ್ಚಿಕೊಂಡು ಒಳಗೆ ಬಂದು, ಅದನ್ನು ಬಿಚ್ಚಿ ಭಕ್ತಿಯಿಂದ ಕಣ್ಣಿಗೊತ್ತಿಕೊಂಡು ಸರಿಸಿ ಎಲ್ಲರ ಪಾದಾರವಿಂದಗಳಲ್ಲಿ ಪೊಡಮಡುತ್ತಿದ್ದಾಳೆ. ಎಲ್ಲರ ಕಿವಿಗಳು ಪ್ರಭುದೇವರ ನುಡಿ ಮುತ್ತುಗಳು ಯಾವಾಗ ಏನೆಂದು ಹೊರಬಿದ್ದಾವೋ ಎಂದು ಕಾತರಿಸುತ್ತಿವೆ. ಆದರೆ ಪ್ರಭುವಿಗೆ ಏನೋ ಅಸ್ಪಷ್ಟ ನೆನಪು : ನೆನಪು ಗರಿ ಕೆದರಿ ಹಾರತೊಡಗಿತ್ತು.

* * *

ಹೂಂ...ಏನೆಂದು, ಯಾರನ್ನು ನಂಬುವುದು ? ಹೆಣ್ಣು ಅದಾವಾವ ವೇಷ ಧರಿಸಿ ಪುರುಷನ ದುರ್ಬಲ ಮನವನ್ನು ಸೆಳೆದಾಳೋ ? ಅಂದೊಮ್ಮೆ ಜನ್ಮಸಿದ್ಧ ಬಳ್ಳಿಗಾವಿಯನ್ನು ತೊರೆದು ಬಂದಿದ್ದೆ. ಸುಜ್ಞಾನದ ಚಿದ್ಗರ್ಭದಲ್ಲಿ ನಿರಹಂಕಾರದ ಚಿದ್ಬೀಜ ಬಿದ್ದಾಗ ಜನಿಸಿದ ನಾನು ಪೂರ್ವಜನ್ಮದ ಪೊರೆ ಕಳಚಿ ಬಂದಿದ್ದೆನಷ್ಟೇ ? ಬಳ್ಳಿಗಾವಿ ಸುಂದರ-ರಮ್ಯ ತಾಣ. ಅದನ್ನು ದಾಟಿ ಅಷ್ಟೇ ಮಧುರ ಪ್ರಕೃತಿಯ ಸೆರೆಯಲ್ಲಿ ಸಿಕ್ಕ ಬನವಾಸಿಗೆ ಬಂದಿದ್ದೆ. ಅಂದು ಲೀಲೆಯನ್ನು ಮಾಡಲು ಹೋಗಿ ಜಾಲದಲ್ಲಿ ಸಿಕ್ಕಿದ್ದೆನಷ್ಟೇ ? ಅದೇನೂ ನನಗೆ ಜಾಲವಲ್ಲ ಲೀಲೆಯೇ ! ಇರಲಿ :

"ಉದಯದ ಯೌವನದ ಸತಿ ನೀನಿತ್ತಲೇಕೆ ಬಂದೆಯವ್ವಾ. ಪತಿ ಕುರುಹ ಹೇಳು ?" ಪರೀಕ್ಷಿಸಲೋಸುಗ ಪ್ರಭು ಪ್ರಶ್ನಿಸಿದ.

"ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗ...." ಉತ್ತರಿಸಿದಳು ಆಕೆ.

"ಹಾಂ...ಅಂದು ಆ 'ಮಾಯೆ' ಯೂ ಮದುವೆ ಏಕಾಗಿಲ್ಲವೆಂದಾಗ ಮಧುಕೇಶ್ವರನೇ ಗಂಡನೆಂದು ನುಡಿದಿರಲಿಲ್ಲವೇ ? ಆದರೆ ಈಕೆ 'ಮಾಯಾದೇವಿ'ಯಲ್ಲ—ಮಹಾದೇವಿ : ಛೇ ! ಇಂಥ ಸಂಶಯ ಬೇಡ. ಅದು ಮಮಕಾರ—ಮೋಹಿನಿಯ ಸಂಗದಿಂದುದಿಸಿ ಅಹಂಕಾರವೆಂಬ ಆಚಾರ್ಯನ ಕೈಕೆಳಗೆ ತಯಾರಾದ ಮೋಹದ ಮೂರ್ತಿ. ಇದು ಸುಮತಿ ನಿರ್ಮಲ ಸಂಗದಿಂದುದಿಸಿ ಗುರುಲಿಂಗ ದೇವರಲ್ಲಿ ಪ್ರಸಾದ ಪಡೆದ ವೈರಾಗ್ಯದ ಮೂರ್ತಿ. ಕಾಮವೇ ಮೂರ್ತಿಗೊಂಡ ಕಾಮಿನಿ ಆಕೆ ! ಭಕ್ತಿಯೇ ಮೈವೆತ್ತು ಬಂದಿಹ ಶಿವಯೋಗಿಣಿಯೀಕೆ !

ಇಡೀ ಜಗತ್ತನ್ನೇ ಗೆದ್ದನೆಂದು ಎದೆ ಸೆಟೆಸಿ ನಿಂದ ಉನ್ಮತ್ತಳಾಕೆ ! ಜಗತ್ತಿನ ಕೂಸು ನಾನು ಎಂದು ಶರಣರ ಪಾದದ ತೊಟ್ಟಿಲ ಬಾಸಿಂಗಕ್ಕೆ ಜೋಡಿ ರಲಿವಾಗಿದೆ

ಮುಗ್ಧ ಲಲನೆ ಈಕೆ ! ತಾಮಸ ಕಳೆಯ ತೋರಿಕೆಯಿಂದ ಪುರುಷ ಹೃದಯಗಳನ್ನು ತೋರ್ಬೆರಳ ಮೇಲೆ ಕುಣಿಸುತ್ತಿದ್ದ ತರಳೆ ಆಕೆ, ಸಾತ್ವಿಕ ಭಾವವೇ ಮೈವೆತ್ತು ಪುರುಷ ಹೃದಯದಲ್ಲಿ ವಾತ್ಸಲ್ಯ ಮಿಡಿಸುವ ಸೌಜನ್ಯ ಮೂರ್ತಿಯೀಕೆ ! ಕಾಮನ ಕೆರಳುವಿಕೆಯ ಮುಖ್ಯ ಸಾಧನವಾಕೆ !...ವಿಚಾರತರಂಗಗಳನ್ನು ಹರಿದು,

"ತಾಯೆ....ಕಾಮನ ನೀನೆಂತು ಗೆದ್ದೆಯವ್ವಾ ?" ಎಂದು ಪ್ರಭು ಪ್ರಶ್ನಿಸಿದ.

"ಚೆನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗೆಂದು ವರವನ್ನಿತ್ತುದು ನಿಜ ಪ್ರಭುವೆ ! ಆದರೆ ತಮ್ಮ ದಯದಿಂದ ನನ್ನ ಮನದಲ್ಲಿ ಕಾಮನೇ ಹುಟ್ಟಿಲ್ಲವಾದ ಕಾರಣ ಕಾಮನ ಹಣೆಯ ಬರಹವನ್ನೇ ತೊಡೆದೆ ಗುರುವೇ ?

"ಹಾಂ...." ಬೆಚ್ಚಿದ ಪ್ರಭುದೇವ. ಜಗತ್ತಿನಲ್ಲಿ ಕಾಮನ ಗೆದ್ದೆವೆಂದು ಹೇಳಿದವರುಂಟು : ಕಾಮನೇ ಹುಟ್ಟಲ್ಲಿಲ್ಲ ಎಂಬುದು ಅತಿ ವಿಚಿತ್ರ ! ಅಸಾಮಾನ್ಯ.

ಏನೀ ಆಶ್ಚರ್ಯ ! ದಿಗಂಬರಳಾಗಿ ಬಂದು ನಿಂತರೂ ಒಬ್ಬರಲ್ಲೂ ದುರ್ಭಾವನೆಯ ಸುಳಿಗಾಳಿ ಬೀಸಿಲ್ಲ. ಅಂದು ಮಾಯಾದೇವಿ ಅಂಗಾಂಗ ಪ್ರದರ್ಶಿಸಿ ನರ್ತಿಸಿದಾಗ ಇಡೀ ಸಭೆಯೇ ವಿಹ್ವಲಗೊಂಡಿತ್ತು : ಮೋಹದ ಬಿರುಗಾಳಿ ಬೀಸಿತ್ತು. ಆದರೆ ಮಹಾದೇವಿ ಪೂರ್ಣ ನಗ್ನಳಾಗಿ ನಿಂತರೂ ಎಲ್ಲರಲ್ಲೂ ವೈರಾಗ್ಯದ ಸತ್ಪ್ರಭಾವ ಪಸರಿಸಿದೆ. ತಾನು ಇನ್ನೊಬ್ಬರನ್ನು ಕಂಡಾಗ ಮನಚಂಚಲವಾಗದೇ ಇರಬಹುದು. ವಿರಕ್ತನಾದ ನಾನೂ ಹಾಗಿರುವೆ. ಆದರೆ ನೋಡಿದ ಇನ್ನೊಬ್ಬರಲ್ಲೂ ಕಾಮಭಾವನೆ ಕೆರಳದ ಸ್ಥಿತಿಗಳಿಸಿಕೊಂಡ ಈಕೆ ಪರಮ ವಿರಕ್ತೆ, ಓಹೋ ! ಪವಾಡ ಸದೃಶ್ಯ ಮೂರ್ತಿ. ಏನು ಸಾತ್ವಿಕತೆ, ಭಕ್ತಿಯ ಸೌರಭ ! ಕೇಳಿದ ಪ್ರಶ್ನೆಗೆ ಅಧೀರಳಾಗದೆ ಉತ್ತರಿಸಿದ ಜ್ಞಾನನಿಧಿ. ಗಂಡನ ಸ್ವರೂಪವನ್ನು ತಾತ್ವಿಕವಾಗಿ ನುಡಿದ ತತ್ವಜ್ಞಾನಿ. 'ಹೆಣ್ಣೆಂದರೆ ಕೇವಲ ಭೋಗದ ಗೊಂಬೆ, ವಿಲಾಸದ ಪುತ್ಥಳಿ', ಎಂದು ಭಾವಿಸಿದವರಿಗೆ ಸುಳ್ಳೆಂದು ತೋರಲು ಈಕೆಯೊಂದು ಸಾದೃಶ್ಯ ಮೂರ್ತಿ.

ಹೆಣ್ಣು ನಿಜವಾಗಿಯೂ ರಕ್ಕಸಿಯಲ್ಲ : ಅಂ ರಕ್ಕಸಿಯೂ ಹೌದು. ಮೋಹದ ಸೆರಗು ಬೀಸಿದಾಗ ಮಾಯಾದೇವಿ ! ವಾತ್ಸಲ್ಯ-ವೈರಾಗ್ಯದ ಮಡಿಲು ನೀಡಿದಾಗ ಮಹಾದೇವಿ...ಮಹಾದೇವಿಯದು ಮಗುವಿನಂತಹ ಭಾವ ನಿಲುವು ! ವಿರಕ್ತಿಯ ಉನ್ನತಾವಸ್ಥೆಗೇರಿ ವಿವೇಕದ ಶಿಶುವಾದ ಅನುಭವನಿಧಿ ಈಕೆ. ಹೆಣ್ಣು ಗಂಡೆಂಬ ಭಾವದ ಲಜ್ಜೆಯ ಮಾಣಿಸಿದ ಶಕ್ತಿಯ ಸ್ವರೂಪಿಣಿ.

ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲಾ, ಅಕ್ಕ !
ಗುಹೇಶ್ವರ ಲಿಂಗದಲ್ಲಿ ಉಭಯ ನಾಮವಳಿದ ಎನ್ನಕ್ಕಾ !

ಪ್ರಭುದೇವ ಹರ್ಷೋದ್ವೇಗದಿಂದ ಎದ್ದು ನಿಂತ, "ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಎನ್ನ ಹೆತ್ತ ತಾಯಿ ಮಹಾದೇವಿಯಕ್ಕಂಗೆ ನಮೋ...ನಮೋ...." ಎಂದು ನುಡಿಯುತ್ತ !

ನೇತ್ರಾವತಿಯ ನಿಲ್ದಾಣ

— ಜಗದ್ಗುರು ಮಾತೆಮಹಾದೇವಿ

ನಿಸರ್ಗದ ನಿರ್ಮಲ ಮಹಮನೆಯೊಳಗೆ
ಸತಿ ಪತಿ ಸಂಗಮ ಜರುಗುತ್ತಿದೆ. ||ಪ||
ಉಣ್ಣಲು ಬನ್ನಿರಿ ರಸಋಷಿಗಳೇನೀವ್
ಕಣ್ಮನ ತಣಿಸುವ ರಸದೌತಣವ ||ಅ.ಪ.||

ಎಳೆ ಬೆಳಗಿನಲಿ ಮಿರಿಮಿರಿ ಮಿರುಗುವ
ಸೊಗಸಾದ ನೀಲಿಯ ಪತ್ತಲವುಟ್ಟು
ಬಹುವಿಧ ಬಳುಕಿನ ಚಿತ್ತಾರದಲೆಗಳ
ಬೆಡಗಿನ ಬಣ್ಣದ ಕುಪ್ಪಸತೊಟ್ಟು ||೧||

ಮೂಡುವ ರವಿಯ ಕುಂಕುಮವಿಟ್ಟು
ಗಿರಿಗಳ ಕಂದರ ಬೈತಲೆಬೊಟ್ಟು
ಮೆಲ್ಲನೆ ಹಾಯುವ ಕುಳಿರ್ಗಾಳಿಗಳಿಂ
ದಲಗುವ ಸಸ್ಯದ ಮುಸುಕನು ತೊಟ್ಟು ||೨||

ಕನ್ನಡ ಜಿಲ್ಲೆಯ ನೇತ್ರಾವತಿಯು
ನಿಂತಿಹಳಿಲ್ಲಿ ಮದುವೆಗೆ ನೆರೆದು
ಅರಬಿಯ ರಾಜನು ಚೆಲುವಿನ ವರನು
ಮಂಗಳಾಂಬೆಯ ಮಮತೆಯ ಮಗನು ||೩||

ಹಾಸಿದೆ ಭುವಿಗೆ ಉಸುಕಿನ ಕಂಬಳಿ
ಹರಡಿದೆ ಬಾನಿನ ಸುಂದರ ಹಂದರ
ಬಗೆಬಗೆ ರೂಹಿನ ಮೋಹದ ಗೊಂಡೆಯು
ತೂರುವ ಕಿರಣದ ತೂಗುದೀಪಗಳು ||೪||

ಎರೆಯಲು ಧಾರೆಯ ಹರಿದಿವೆ ಝರಿಗಳು
ಸೂಸಲು ಅಕ್ಷತೆ ಮಂಗ್ಳೂರ ಮಲ್ಲಿಗೆ
ಕಂಠವ ತೆರೆದು ಮಂತ್ರವ ಪಠಿಸಲು
ಪುರೋಹಿತರಾಗಿವೆ ಶುಕ ಪಿಕ ಕೋಗಿಲೆ ||೫||

ತೆಂಗಿನ ಅಡಿಕೆಯ ಫಲ ತಾಂಬೂಲ
ಸುತ್ತಲು ಘಮಿಸುವ ಹಲಸಿನ ಸೌರಭ
ಹರಿಯುವ ಜಲವು ಉಲಿಯುವ ಹಕ್ಕಿ
ಬೀಸುವ ಗಾಳಿ ನಡೆಸಿವೆ ಗೋಷ್ಠಿ ||೬||

ಬನ್ನಿರಿ ಮದುವೆಯ ಸಂಭ್ರಮ ನೋಡಿ
ಜೀವ-ಪರಮರ ಬಂಧುರ ಬೆಸುಗೆಯ
ನೇತ್ರಾವತಿಯು ಆತ್ಮನ ಬಿಂಬಿಸೆ
ಶರಧಿಯು ಸಚ್ಚಿದಾನಂದದ ಮಂದಿರ ||೭||

ಮಾತು ಜ್ಯೋತಿರ್ಲಿಂಗ

ಸಂಗ್ರಹ : ಎಂ. ಗಂಗಮ್ಮ

ಎಲ್ಲರೊಡನೆ ಸೌಜನ್ಯದಿಂದಿರು. ಹಲವರೊಡನೆ ಸಲುಗೆಯಿಂದಿರು. ಕೆಲವರೊಡನೆ ಆತ್ಮೀಯನಾಗಿರು. ಒಬ್ಬನಿಗೆ ಸ್ನೇಹಿತನಾಗಿರು. ಯಾರಿಗೂ ಶತ್ರುವಾಗಬೇಡ.

—ಬೆಂಜಮಿನ್ ಫ್ರಾಂಕ್ಲಿನ್

ಕೆಲವರ ದೊಡ್ಡಸ್ತಿಕೆ ಸೀಮಿತವಾಗಿರುತ್ತದೆ. ಅವರು ದೊಡ್ಡವರಾಗಿ ಕಾಣುತ್ತಾರೆ. ಏಕೆಂದರೆ ಅವರ ಒಡನಾಡಿಗಳು ಸಣ್ಣವರಾಗಿರುವುದರಿಂದ.

—ಜಾನ್‌ಸನ್

ಟೀಕೆಯಿಂದ ತಪ್ಪಿಸಿಕೊಳ್ಳಬೇಕಾದರೆ ಏನನ್ನೂ ಮಾಡಬೇಡ. ಏನನ್ನೂ ಹೇಳಬೇಡ. ಇದ್ದೂ ಸತ್ತವನಂತಿರು.

—ಎಲ್ಬರ್ಟ್ ಹಬ್ಬರ್ಡ್

ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಬಲ್ಲವರು ಮಾತ್ರ ಅನ್ಯರನ್ನು ನಿಯಂತ್ರಿಸಬಲ್ಲರು.

—ಸಿಲಿಯಮ್ ಹಾಜ್ಲಿಟ್

ಸ್ನೇಹಿತನಿಗೆ ಒಂದು ಮುಗುಳ್ನಗೆ, ಜಗತ್ತಿಗೆ ಒಂದು ಗರ್ಜನೆ—ಇವೇ ಮಾನವ ಜನಾಂಗವನ್ನು ನಿಯಂತ್ರಿಸಬಲ್ಲ ಸಾಧನಗಳು.

—ಬೆಂಜಮಿನ್ ಡಿಸ್ರೇಲಿ

ನಮ್ಮ ಉನ್ನತ ಜೀವನವಿರುವುದು ಎಂದೂ ಎಡವದೆ ಇರುವುದರಲ್ಲಲ್ಲ, ಎಡವಿದಾಗಲೆಲ್ಲ ಮೇಲೇಳುವುದರಲ್ಲಿದೆ.

—ಆಲಿವರ್ ಗೋಲ್ಡ್‌ಸ್ಮಿತ್

ಸುಧಾರಣೆ ಅಂತರಂಗದಿಂದ ಬರಬೇಕು. ಹೊರಗಿನಿಂದ ಹೇರಲ್ಪಟ್ಟಲ್ಲ. ಒಳ್ಳೆಯವರನ್ನು ಮಾಡಲು ಶಾಸನ ವಿಧಿಸಲು ಬರದು.

—ಜೇಮ್ಸ್ ಗಿಬ್ಬನ್ಸ್

ಅನೇಕ ಸುಧಾರಿಸಿದ, ನಾಗರಿಕರು ನೊಣವನ್ನು ಕೊಲ್ಲಲು ಹಿಂಜರಿಯುತ್ತಾರೆ. ಆದರೆ ಎತ್ತನ್ನು ಸುಲಭವಾಗಿ ತಿನ್ನುತ್ತಾರೆ.

—ಐಸಾಕ್ ಲೋಯೆಬ್ / ಪಿರೆಟ್ಸ್

ಬುದ್ಧಿವಂತರಾದವರು ಪುಸ್ತಕ ಮತ್ತು ಜೀವನ ಎರಡನ್ನೂ ಓದುತ್ತಾರೆ.

—ಲಿನ್ ಯುಟಾಂಗ್

ನಾ ಕಂಡಂತೆ ಮಾತಾಜಿ

ಸೋದರಿ ಕುಮುದಾ

'ಹಾಲುಂಡ ತೌರಿಗೆ ಏನೆಂದು ಹಾಡಲಿ' ಎಂಬ ಜಾನಪದ ಗೀತೆಯಂತೆ, ಆಧ್ಯಾತ್ಮದ ತಾಯಿಯಾಗಿ, ಪುನರ್ಜನ್ಮ ನೀಡಿ, ಜ್ಞಾನಾಮೃತವನ್ನು ಧಾರೈಸುವ ಮಾತೆಯ ಬಗ್ಗೆ ಏನು ಹಾಡುವುದು, ಹೇಳುವುದು ? ಹೃದಯದಲ್ಲಿ ತುಂಬಿರುವ ಕೃತಜ್ಞತೆಯನ್ನು ಹೇಗೆ ವ್ಯಕ್ತಪಡಿಸುವುದು ? ಅವರ ನೆನಪೇ ಯಾವುದೋ ಮೃದು ಮಧುರತಮ ಭಕ್ತಿ ಭಾವಗಳಿಂದ ಮೈ-ಮನಗಳನ್ನು ಪುಳಕಿತಗೊಳಿಸುತ್ತದೆ. ಅವರ ಬಗ್ಗೆ ಬರೆಯಲು ಹೊರಟರೆ, ಈ ಅಪ್ರಬುದ್ಧ ಬುದ್ಧಿಗೆ ಪದಗಳ ಅಭಾವವಾಗುತ್ತದಾದರೂ ಆ ಭಕ್ತಿ ಸಿಂಚಿತ ಭಾವನೆಗಳನ್ನು ಕೆಲವೇ ಪದ-ಪುಂಜಗಳಲ್ಲಿ ಹಿಡಿದಿಡಲು ಪ್ರಯತ್ನಿಸುವೆ. ಪೂಜ್ಯ ಮಾತಾಜಿಯವರ ಪ್ರವಚನ ಕೇಳಿದವರು, ಅವರೊಬ್ಬ 'ಉತ್ತಮವಾಗ್ಮಿ' ಎನ್ನುವರು. ಅವರ ಸಾಹಿತ್ಯವನದಲ್ಲಿ ವಿಹರಿಸಿದವರು, 'ಇವರೊಬ್ಬ ಉತ್ತಮ ಸಾಹಿತಿ' ಎನ್ನಬಹುದು. ಆದರೆ ಬರೀ ಇಷ್ಟರಿಂದಲೇ ಅವರ ಪೂರ್ಣ ವ್ಯಕ್ತಿತ್ವದ ಪರಿಚಯ ಸಾಧ್ಯವಿಲ್ಲ. ಅನೇಕ ವಿಶಿಷ್ಟಗುಣಗಳ ಸುಂದರ ಸಂಗಮವಾಗಿರುವ ಅವರ ವ್ಯಕ್ತಿತ್ವ ಉಪಮಾತೀತ. ಇಂಥ ಮಾತಾಜಿಯವರ ದಿವ್ಯ, ಭವ್ಯ ವ್ಯಕ್ತಿತ್ವವನ್ನು ನಾನು ಪರಿಚಯಿಸುವೆ ಅನ್ನುವುದು "ಆಕಾಶದಲ್ಲಿರುವ ನಕ್ಷತ್ರಗಳನ್ನು ಎಣಿಸಿ ಹೇಳ್ತೀನಿ" ಎನ್ನುವಷ್ಟೇ ಅಸಾಧ್ಯತನ. ಬಹುಮುಖ ವ್ಯಕ್ತಿತ್ವ ಉಳ್ಳ ಅವರಲ್ಲಿ ನಾನರಿತ ಕೆಲವೇ ಮುಖಗಳ ಸೂಕ್ಷ್ಮ ಚಿತ್ರಣವನ್ನು ನಿಮ್ಮ ಮುಂದಿಡಲು ಬಯಸುವೆ. ಅವರ ಸಮೀಪವರ್ತಿಯಾಗಿ ಅವರೊಡನೆ ಕಳೆದ ರಸ ಘಳಿಗೆಗಳ ಸವಿನೆನಪನ್ನು ನಿಮ್ಮೊಡನೆಯೂ ಹಂಚಿಕೊಳ್ಳಲು ಇಚ್ಛಿಸುವೆ.

ತತ್ತ್ವಜ್ಞಾನಿ :— ವಿಜ್ಞಾನವನ್ನೇ ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಪದವಿಯನ್ನು ಪಡೆದ ಮಾತಾಜಿಯವರು ನಿರಂತರವಾಗಿದ್ದ ಆಂತರಿಕ ಬಯಕೆಯ ಒತ್ತಾಯಕ್ಕೆ ಮಣಿದು, ತತ್ತ್ವಶಾಸ್ತ್ರ ಅಧ್ಯಯನಕ್ಕೆ ತೊಡಗಿದರು. ಎಲ್ಲ ಧರ್ಮಗಳ ಸಾರವನ್ನೂ ಅರಿತು, ತಮ್ಮನ್ನು ಅಪಾರವಾಗಿ ಆಕರ್ಷಿಸಿದ ವಚನ ಶಾಸ್ತ್ರಕ್ಕೆ ತಮ್ಮ ಮನಕೊಟ್ಟು ಅಭ್ಯಸಿಸಿದರು. ಹೀಗೆ ಎಲ್ಲಾ ಧರ್ಮ ಶಾಸ್ತ್ರಗಳಿಂದ ತಿಳಿದ ಜ್ಞಾನವನ್ನು ಭಟ್ಟಿ ಇಳಿಸಿದರೋ ಎಂಬಂತೆ, 'ಬಸವ ತತ್ತ್ವದರ್ಶನ' ಎಂಬ ಗ್ರಂಥವನ್ನೂ ರಚಿಸಿದರು. ಆಗ ಅವರ ವಯಸ್ಸು ಕೇವಲ ೧೯. ಆಧ್ಯಾತ್ಮಪಿಪಾಸು

ವಾಗಿದ್ದ ಮಾತಾಜಿಯವರು, ಇಷ್ಟಕ್ಕೇ ತೃಪ್ತರಾಗದೆ ತತ್ತ್ವಜ್ಞಾನವನ್ನೇ ಮುಖ್ಯ ವಿಷಯವನ್ನಾಗಿ ಆರಿಸಿಕೊಂಡು ಎಂ. ಎ. ಗೆ ಸೇರಿದರು. ಅವರು ಮೊದಲ ವರ್ಷದ ವಿದ್ಯಾರ್ಥಿನಿಯಾಗಿದ್ದಾಗಲೇ ಪ್ರಕಟಗೊಂಡ 'ಬಸವ ತತ್ತ್ವದರ್ಶನ' ಎರಡನೆ ವರ್ಷದ 'ವೀರಶೈವಿಸಮ್' ಮೇಜರ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕ ಪುಸ್ತಕವಾಗಿತ್ತೆಂದರೆ, ಅವರ ಜ್ಞಾನದಾಳದ ಪರಿಚಯ ಎಲ್ಲರಿಗೂ ಆದೀತು.

ತತ್ತ್ವಾಭಿಮಾನಿ : ಪೂ. ಮಾತಾಜಿಯವರು ತತ್ತ್ವಜ್ಞಾನವನ್ನು ಎಷ್ಟು ಆಳವಾಗಿ ತಿಳಿದಿರುವರೋ ಅಷ್ಟೇ ತತ್ತ್ವಾಭಿಮಾನಿಯೂ ಹೌದು. ತರ್ಕಜ್ಞಾನಿಯಿರಲಿ, ವಿತಂಡವಾದಿಯಿರಲಿ, ಚಾರ್ವಾಕನಿರಲಿ ಯಾರೇ ಬಂದರೂ ಎಲ್ಲರಿಗೂ ಸಮಾಧಾನ ಸಿಗುವಂತೆ, ತತ್ತ್ವವನ್ನು ಪ್ರತಿಪಾದಿಸುವರು. ಧರ್ಮವನ್ನೇ ಉಸಿರಾಗಿಸಿಕೊಂಡಿರುವ ಇವರು, ತಾವು ಹಿಡಿದಿರುವ ತತ್ತ್ವಕ್ಕಾಗಿ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಲೂ ಸಿದ್ಧ. ಎಂಥಾ ಆಸೆ-ಆಮಿಷಗಳಿಗೂ ಬಲಿಯಾಗದಂಥಹ ತತ್ತ್ವನಿಷ್ಠೆ ಹೊತ್ತಿಟ್ಟ ಮನ ಅವರದು. ಹಿಂದೂಧರ್ಮ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಬಗ್ಗೆ ಅವರಿಗೆ ಎಷ್ಟು ಅಭಿಮಾನವಿದೆಯೋ ಅಷ್ಟೇ ಗೌರವ ಅನ್ಯಧರ್ಮಗಳಲ್ಲಿ. ಸತ್ಯ ಎಲ್ಲಿದ್ದರೂ ಒಪ್ಪಿಕೊಳ್ಳುವ ಸ್ವಚ್ಛಮನ. ತತ್ತ್ವವನ್ನು ಆಚರಣೆಗೆ ಇಳಿಸುವ ಪ್ರಯತ್ನದಲ್ಲಿ ವಿಫಲವಾಗಿರುವ ಸಂಪ್ರದಾಯದ (ಸತ್ತ) ವಿರುದ್ಧ ಸದಾ ಹೋರಾಡುತ್ತಿರುವ ಸತ್ ಸಂಪ್ರದಾಯಿನಿ ಮಾತಾಜಿಯವರು.

ಅನುಭಾವಿ : ಉನ್ನತ ಅನುಭಾವಿಯಾದ ಮಾತಾಜಿಯವರು, ಸತ್ - ಚಿತ್ - ಆನಂದ, ನಿತ್ಯಪರಿಪೂರ್ಣನಾದ ಆ ಪರಾತ್ಪರ ವಸ್ತುವನ್ನು ಕಂಡುಂಡ ಮುಕ್ತ ಚೇತನ. ಬರೀ ಆಧ್ಯಾತ್ಮ ರಂಗಕ್ಕಷ್ಟೇ ಸೀಮಿತವಾಗದ ಇವರ ಅನುಭವ ವೈವಿಧ್ಯಮಯ ಜೀವನದ ಎಲ್ಲ ರಂಗಗಳಲ್ಲಿ ಅಸಾಮಾನ್ಯ ಅನುಭವ ಪಡೆದಿದೆ. ಯಾವುದೇ ಸಮಸ್ಯೆ ಜೀವನದ ಯಾವುದೇ ರಂಗದ್ದಾಗಿರಲಿ, ಕ್ಷಣಮಾತ್ರದಲ್ಲಿ ಪರಿಹಾರ ಸೂಚಿಸುವುದನ್ನು ಕಂಡಾಗ, ಎ ೦ ಥ ವ ರಿ ಗೂ ಇವರಲ್ಲಿನ ಜ್ಞಾನ ಕಕ್ಷೆಯ ಅಸೀಮತೆ ಅರಿವಾಗದಿರದು.

ದಾರ್ಶನಿಕರು : ಉತ್ತಮ ದಾರ್ಶನಿಕರಾದ ಮಾತಾಜಿಯವರು, ತಾವು ಕಂಡುಂಡ ಅನುಭವವನ್ನು ಬರವಣಿಗೆಯ ಮೂಲಕ, ಮಾತಿನ ಮೂಲಕ, ಎಲ್ಲರ ಹೃನ್ಮನಗಳಿಗೆ ತಲುಪಿಸುವ ಕಲೆಯಲ್ಲಿ ಬಲ್ಲಿದರಾಗಿರುವರು. ನಿತ್ಯನೂತನವೂ, ನಿತ್ಯಚೇತಕವೂ, ನಿತ್ಯಬೋಧಕವೂ ಆಗಿರುವ ಪ್ರಕೃತಿಯ ಒಡಲ ಕಣಕಣದಲ್ಲಿ ಆ ದೇವನ ಅಂಶವನ್ನೇ

ಕಾಣುವ ದಾರ್ಶನಿಕ ದೃಷ್ಟಿ ಇವರದು. ಪ್ರತಿಯೊಂದಕ್ಕೂ ಆಧ್ಯಾತ್ಮಿಕ ಹಿನ್ನೆಲೆ ಕೊಡುವ ಮಾತಾಜಿಯವರ ದಾರ್ಶನಿಕತೆಗೆ ಇದೊಂದು ಪುಟ್ಟ ಉದಾಹರಣೆ.

ಒಮ್ಮೆ ಪ್ರವಚನಕ್ಕೆಂದು ಕಾರಿನಲ್ಲಿ ಹೊರಟಿದ್ದಾಗ, ತಲೆತಗ್ಗಿಸಿ ನಿಂತ ಸೂರ್ಯಕಾಂತಿ ಹೂವನ್ನು ನೋಡಿ, "ಸೂರ್ಯಕಾಂತಿ ಹೂವು ಸದಾ ಸೂರ್ಯನ ಕಡೆ ಮುಖ ಮಾಡಿರುತ್ತೆ ಆದರೆ, ಇದೇಕೆ ಹೀಗೆ ?" ಎಂದು ಪ್ರಶ್ನಿಸಿದ್ದೆ. ಆಗ ಮಾತಾಜಿಯವರು, ಅದನ್ನು ನೋಡಿ, "ನೋಡಮ್ಮಾ, ಅದೇ ಆಗ ಅರಳಿದ ಹೂ, ಸೂರ್ಯ ಎತ್ತ ಕಡೆ ಚಲಿಸುವನೋ ಅದರಂತೆ ತಾನೂ ಚಲಿಸುವದು, ಅದೇ ಪರಿಪಕ್ವವಾಗಿ ಒಣಗಿದಾಗ ತನ್ನಷ್ಟಕ್ಕೆ ತಲೆತಗ್ಗಿಸಿ ನಿಲ್ಲುತ್ತೆ. ಅದೇ ರೀತಿ, ಸಾಧನಾವಸ್ಥೆಯಲ್ಲಿರುವ ಸಾಧಕ ದೇವರನ್ನರಸಿಕೊಂಡು ಕಾರುಣ್ಯ ಕಿರಣಕ್ಕಾಗಿ ಹಂಬಲಿಸುತ್ತಾ ಸಾಗುತ್ತಾನೆ. ಮುಂದೆ ಸಿದ್ಧಪುರುಷನಾದ ವ್ಯಕ್ತಿ ತನ್ನಲ್ಲೇ ಇರುವ ಪರಮ ಸತ್ಯವನ್ನು ಅಂತರಾವಲೋಕನ ಮಾಡಿ ಕಂಡುಕೊಳ್ಳುವನು" ಎಂದು ಹೇಳಿದರು. ಮಾತಾಜಿಯವರಿಗೆ ಈ ರೀತಿಯ 'ಸ್ಫುರಣ - ಕಿರಣ'ಗಳು ತುಂಬಾ ಹೊಳೆಯುವುವು.

ಅಪೂರ್ವವಾಗ್ಮಿ : 'ಭಾಷಣವೆಂದರೆ ಬೇಸರದ ಬುಗ್ಗೆ' ಎಂದು ಆಳವಾಗಿ ಬೇರೂರಿದ್ದ ಜನಮನದ ನಂಬುಗೆಗೆ ಕೊಡಲೀಪೆಟ್ಟು, ಪೂ. ಮಾತಾಜಿಯವರ ಪ್ರವಚನ. ಅವರು ತಮ್ಮ ವಾಣಿಯಿಂದ, ಶ್ರೋತೃಗಳನ್ನು ಮೈಮರೆಯುವಂತೆ ಮಾಡಿ, ದಿವ್ಯಾನುಭವದ ಪ್ರಶಾಂತ ಮಂದಿರಕ್ಕೆ ಕೊಂಡೊಯ್ಯುತ್ತಾರೆ. ಪ್ರಚಂಡ ರೀತಿಯಲ್ಲಿ ಜನತೆಯನ್ನು ಆಕರ್ಷಿಸಿ, ಮುದಗೊಳಿಸಿ, ಚೇತನಿಸುವ ಅವರ ದಿವ್ಯವಾಣಿಯಲ್ಲಿ, ಸರಸ್ವತಿಯ ಮಂಗಳ, ಮಧುರ, ವೀಣಾನಿನಾದ ಅಲೆಯಲೆಯಾಗಿ ತೇಲಿ ಬರುತ್ತದೆ. ಮಾತಾಜಿಯವರ ವಾಗ್ಝರಿ ಅಪೂರ್ವವಾದುದು. ಸಾಹಿತ್ಯಮಯವಾಗಿ, ಸ್ಫುಟವಾಗಿ, ತಾರ್ಕಿಕವಾಗಿ, ಪುಂಖಾನುಪುಂಖವಾಗಿ ಹೊರಹೊಮ್ಮುವ ಆ ವೀರ—ಗಂಭೀರವಾಣಿ ಎಂಥವರನ್ನು ಮಂತ್ರಮುಗ್ಧರನ್ನಾಗಿರಿಸದಿರದು. 'ಮಾತಾಜಿಯವರ ಜಿಹ್ವೆಯ ಮೇಲೆ ಕನ್ನಡ ಸಾಹಿತ್ಯ ಸರಸ್ವತಿ ನಾಟ್ಯವಾಡುತ್ತಾಳೆ' ಎಂದು ಶ್ರೀ ದೇ. ಜವರೇಗೌಡರು ಒಮ್ಮೆ ಹೇಳಿದುದು ಉತ್ಪ್ರೇಕ್ಷೆಯಲ್ಲ. ಅವರ ಪ್ರವಚನ ರಾಷ್ಟ್ರಪ್ರಜ್ಞೆ, ಧರ್ಮಪ್ರಜ್ಞೆಗಳನ್ನು ಉದ್ದೀಪಿಸಬಲ್ಲುದು. ರಾಷ್ಟ್ರಪ್ರಜ್ಞೆಯ ಬಗ್ಗೆ ಒತ್ತಿ ಹೇಳುವಾಗ, ಅವರ ವಾಣಿ ಭೋರ್ಗರೆಯುತ್ತ ಧುಮ್ಮಿಕ್ಕುವ ಜಲಪಾತದಂತಿದ್ದರೆ, ಧರ್ಮನಿಷ್ಠೆಯ ಬಗ್ಗೆ ಹೇಳುವಾಗ ಅಭಿಮಾನದಲೆಗಳಿಂದ ಕೂಡಿದ ಗಂಭೀರ ಸಮುದ್ರ. ಭಕ್ತಿ ಪ್ರಧಾನವಾಗಿ ಹೇಳುವಾಗ, ಶ್ರೋತೃಗಳಿಗೆಲ್ಲಾ ಯಾವುದೋ ಮಧುರ ಭಾವನೆಯ ತುಂತುರು ಹನಿಯಲ್ಲಿ ಮಿಂದು ಪುನೀತರಾದ ಅನುಭವ.

ಗಾಯಕಿ : ಸಾಮಾನ್ಯವಾಗಿ, ವಾಗ್ಮಿಗಳಿಗೂ ಸಂಗೀತಕ್ಕೂ ಬಹು ದೂರ. ಆದರೆ, ಮಾತಾಜಿಯವರು ಇದಕ್ಕೆ ಹೊರತಾಗಿದ್ದಾರೆ. ಅವರ ವಾಕ್ ಚತುರತೆ ಜನರನ್ನು ಹೇಗೆ ರಂಜಿಸಬಲ್ಲುದೋ ಅಷ್ಟೇ ಆಕರ್ಷಿಸಬಲ್ಲದು, ಅವರ ಸುಮಧುರ ಕಂಠದಿಂದ ಹೊರಡುವ ನಾದ - ನಿನಾದ. ತಾವೇ ಸ್ವತಃ ಅನೇಕ ಭಾವಗೀತೆಗಳಿಗೆ ರಾಗ ಸಂಯೋಜಿಸಿ ಹಾಡುವರು. ಯಾವುದೇ ಹಾಡನ್ನಾಗಲಿ, ಭಾವತುಂಬಿ ಹಾಡುತ್ತಿದ್ದರೆ, ಕೇಳುಗರಿಗೆ, ಹೃದಯ ತುಂಬಿ ಬಂದು, ಹಾಡಿನಲ್ಲೇ ಮೈಮರೆಯುವರು ಅವರು.

ಸಾಹಿತಿ : 'ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ, ಬಲ್ಲವರು ಇದ್ದು ಬಲವಿಲ್ಲ. ಸಾಹಿತ್ಯ ಎಲ್ಲರಿಗೂ ಇಲ್ಲ' ಎಂಬ ಸರ್ವಜ್ಞನ ಉಕ್ತಿಯಂತೆ, ಸಾಮಾನ್ಯವಾಗಿ ಸಾಹಿತ್ಯಸಿದ್ಧಿ ಅಪರೂಪ. ಆದರೆ ಮಾತಾಜಿಯವರಿಗೆ ಸಾಹಿತ್ಯ ದೈವೀದತ್ತ ದೇಣಿಗೆ. ವಿದ್ವಾಂಸರಾದಿಯಾಗಿ ಎಲ್ಲರನ್ನೂ ಮೋಡಿಮಾಡುವ, ಯಾವುದೋ ಕಲಿತ ಲೇಖನಿಕೆಗೆ ಇದೆ. ಯಾವುದೇ ರಂಗದ ವಿಷಯವನ್ನು ಕುರಿತು ಬರೆದರೂ ಪ್ರಬುದ್ಧವಾದ ಸುಸ್ಪಷ್ಟ ಚಿತ್ರಣವನ್ನು ಎಳೆಎಳೆಯಾಗಿ ಓದುಗರ ಮುಂದೆ ಹರವಬಲ್ಲರು. ಸೂತ್ರಬದ್ಧವಾದ ನಿರೂಪಣೆಯಲ್ಲಿ ಅವರ ಅಚ್ಚುಕಟ್ಟುತನ ಎದ್ದು ಕಾಣುವುದು.

ಕವಯಿತ್ರಿ : ಮಾತಾಜಿಯವರು ರಚಿಸಿದ ಕವನಗಳನ್ನು, ಭಾವಗೀತೆಗಳನ್ನು ಓದುತ್ತಿದ್ದರೆ, ಭಾವನೆಗಳ ಸಮರ್ಪಕ ನಿರೂಪಣೆ ಅವುಗಳನ್ನು ಪರಿಪುಷ್ಟಗೊಳಿಸುವ ಸೂಕ್ತ ಉಪಮೆಗಳ ಸುಂದರ ಜೋಡಣೆ, ಅವರ ಮಾನಸಿಕ ಸ್ಥಿತಿಯ ಔನ್ನತ್ಯಕ್ಕೆ ಕನ್ನಡಿ ಹಿಡಿದಂತಹ (ಇನ್ನೂ ಒಳಹೊಕ್ಕು ನೋಡಿದಾಗ) ಅನುಭವ. ಅಂತೆಯೇ ಅವರು ಕವಯಿತ್ರಿಯರಲ್ಲೂ ಅಗ್ರಗಣ್ಯರೆನಿಸಿದ್ದಾರೆ. ಆಶು ಕವಿತ್ವ ಅವರಿಗೆ ಸಿದ್ಧಿಸಿದೆ. ಸಚ್ಚಿದಾನಂದ ಅವರ ಮುದ್ರಿಕೆ.

ಕಾದಂಬರಿಕಾರ್ತಿ : ಬರೀ ವಚನ, ಭಾವಗೀತೆ, ಪ್ರಬಂಧ, ಶಾಸ್ತ್ರೀಯವಾದ ಉದ್ಗ್ರಂಥ ಇವುಗಳಿಗೇ ಮೀಸಲಾಗದೆ ಮಾತಾಜಿಯವರ ಲೇಖನಿ, ಇಂದಿನ ಜನಜೀವನಕ್ಕೆ ಅಪೇಕ್ಷಣೀಯ ಮಾಧ್ಯಮವಾದ, ಕಾದಂಬರಿಯಲ್ಲೂ ಹರಿದಿದೆ. ಕಾದಂಬರಿ ಪ್ರಪಂಚಕ್ಕೆ ಮಾತಾಜಿಯವರ ಕೊಡುಗೆ ಅಪೂರ್ವ. ನಮ್ಮಲ್ಲಿ ಸಾಕಷ್ಟು ಜನ ಕಾದಂಬರಿಕಾರರಿದ್ದರೂ, ಮಾತಾಜಿಯವರು ಕಾದಂಬರಿಯ ಮಾಧ್ಯಮವನ್ನೂ ಏಕೆ ಆರಿಸಿಕೊಂಡರು ಎನ್ನುವುದು ನಮ್ಮನ್ನು ಚಿಂತನೆಗೆ ತೊಡಗಿಸುವ ಪ್ರಶ್ನೆ.

ಇಂದಿನ ಯುವಜನಾಂಗ, ಧರ್ಮ - ಸಾಹಿತ್ಯದ ಕಡೆ ನಿರ್ಲಕ್ಷ್ಯದಿಂದಿರುವುದನ್ನು ಕಂಡು ಮನದಲ್ಲೇ ಮರುಗಿ, ಧರ್ಮ - ಸಾಹಿತ್ಯ ಅವರೆಡೆಗೆ ತಲುಪಿಸಲು ಯುವ ಪೀಳಿಗೆಯ ಅಚ್ಚುಮೆಚ್ಚಿನ ಮಾಧ್ಯಮವಾದ ಕಾದಂಬರಿಯನ್ನೇ ಸಾಧನವಾಗಿರಿಸಿಕೊಂಡರು. ಸೊಸೆಯಿಂದ ಪ್ರಚೋದಿಸಲ್ಪಟ್ಟು ತನ್ನಿಂದ ದೂರಾದ ಮಗನ ಬಗ್ಗೆ ತಾಯಿಯು ಸದಾ ಚಿಂತಿಸುತ್ತಾ ಇರುವಂತೆ, ವಿಷಯಾಸಕ್ತಿಯಿಂದ ಪ್ರಚೋದಿತರಾಗಿ ಧರ್ಮ - ಸಾಹಿತ್ಯ- ಆಧ್ಯಾತ್ಮಗಳಿಂದ ದೂರ ಸರಿಯುತ್ತಿರುವ ಲೌಕಿಕ ಮಕ್ಕಳ ಬಗ್ಗೆ ಅಪಾರ ಕಳಕಳಿಯಿಂದ ಆಧ್ಯಾತ್ಮದ ಒಲವು ಮೂಡಿಸಲು ಕಾದಂಬರಿ ಮೂಲಕ ಪ್ರಯತ್ನಿಸಿದರು. ಅಂತೆಯೇ ಅವರ ಮೊಟ್ಟಮೊದಲ ಕಾದಂಬರಿ. ' ಹೆಪ್ಪಿಟ್ಟ ಹಾಲು ' ಕಾದಂಬರಿ ಲೋಕದಲ್ಲಿ ಹೊಸ ಕ್ಷಿತಿಜವನ್ನೇ ತೆರೆಯಿತು. ಪ್ರತಿ ಪಾತ್ರದ ಒಳಹೊಕ್ಕು. ಮನಸ್ಸನ್ನು ಪದರ ಪದರವಾಗಿ ಬಿಚ್ಚಿ ಓದುಗನ ಮುಂದಿಡುವ ಕಲೆಯಲ್ಲಿ, ಅವರ ಲೇಖನಿ ಅತಿ ಸೂಕ್ಷ್ಮ. ಭಾವನೆಗಳ ತುಮುಲ, ತಳಮಳ, ವಿವೇಕ ಮನಗಳಿಗೆ ನಡೆಯುವ ಹೋರಾಟ - ಹೊಯ್ದಾಟ, ಎಲ್ಲವನ್ನೂ ಚಿತ್ರಿಸುವಲ್ಲಿ ಮನೋವಿಜ್ಞಾನಿಯ ಚತುರತೆಯಿದೆ. ಈ ಕಾದಂಬರಿಯು ವಿದ್ವನ್ಮಣಿಗಳಿಂದ ಪ್ರಶಂಶಿಸಲ್ಪಟ್ಟು, ಅನೇಕ ಸಾಹಿತಿಗಳಿಂದ ವಿಮರ್ಶಿಸಲ್ಪಟ್ಟು, ಕನ್ನಡ ಸಾಹಿತ್ಯ ಅಕ್ಯಾಡಮಿಯ ಪ್ರಶಸ್ತಿಯನ್ನೂ ಪಡೆದಿರುವುದರಿಂದ. ಹೆಚ್ಚು ಬರೆಯಲು ನಾನು ಶಕ್ತಳಲ್ಲ.

ಮಾತಾಜಿಯವರ ಮತ್ತೊಂದು ಮೇರುಕೃತಿಯಾದ, ' ತರಂಗಿಣಿ 'ಯಲ್ಲಿ ಮಿಂದಾಗ, ಅಕ್ಕಮಹಾದೇವಿ ಎಂಬ ಜೀವತರಂಗಿಣಿಯಲ್ಲಿ ಮಿಂದ ಅನುಭವ. ಪ್ರತಿಯೊಂದು ಪಾತ್ರಗಳೂ ಜೀವತುಂಬಿ, ನಮ್ಮ ಮನೋರಂಗದಲ್ಲಿ ಚೊಕ್ಕದಾಗಿ ಪಾತ್ರವಹಿಸಿ ನಿರ್ಗಮಿಸುವಂತೆ ಭಾಸವಾಗುತ್ತದೆ. ಅಕ್ಕಮಹಾದೇವಿಯ ಚಿತ್ರಣವಂತೂ ಮಾತಾಜಿಯವರ ಸಾಧನೆ - ಸಿದ್ಧಿ, ಜ್ಞಾನ - ವೈರಾಗ್ಯ ಎಲ್ಲವುಗಳ ಸಾಕಾರವೋ ಎಂಬಂತಿದೆ. ಸುಲಲಿತವಾಗಿ ಹರಿವ ಲೇಖನಿಯಿಂದ ಅಕ್ಕನೊಡನೆ ಬಸವಕಲ್ಯಾಣ, ಅನುಭವ ಮಂಟಪ, ಕದಳೀಬನ ಎಲ್ಲವುಗಳ ಸಂದರ್ಶನ ಓದುಗರಿಗೆ ಮಾಡಿಸುತ್ತಾರೆ. ಕಾದಂಬರಿಯ ಉತ್ತರಾರ್ಧ ಭಾಗವಾದ ಸಂಗಮ - ಸಮಾಗಮ ಎರಡೂ ಮಾತಾಜಿಯವರ ಯೌಗಿಕ ಜೀವನದ ನಿಲುವಿನ ಮೇಲೆ ಬೆಳಕು ಚೆಲ್ಲುವಂಥದ್ದಾಗಿದೆ. ಕದಳಿಯಲ್ಲಿ ಅಕ್ಕ ತನ್ನ ಭೌತಿಕ ಶರೀರವನ್ನು ಕರ್ಪೂರದಂತೆ ಆ ದಿವ್ಯ ಮಂಗಳ ಬೆಳಕಿನಲ್ಲಿ ಸಮರ್ಪಿಸಿಕೊಂಡು ಅದರಲ್ಲೆ ಲೀನವಾದಾಗ, ನಾವೇ ಅವಳ ವ್ಯಕ್ತಿತ್ವದಲ್ಲಿ ಕರಗಿಹೋದೆವೊ, ಅವಳ ವ್ಯಕ್ತಿತ್ವವೇ ನಮ್ಮಲ್ಲಿ ಕರಗಿಹೋಯಿತೋ ಎಂಬ ದಿಗ್ಭ್ರಾಂತಿ ; ಯಾವುದೋ ಅಪೂರ್ವ ವಸ್ತುವನ್ನು ನಮ್ಮದಾಗಿಸಿಕೊಂಡ ಹೆಮ್ಮೆ.

ಧೀರಯೋಗಿಣಿ : ಕತ್ತಿಯ ಅಲಗಿನ ಮೊನೆಯ ಮೇಲೆ ನಡೆಯುವುದು ಎಷ್ಟು ಕಷ್ಟವೋ ಅಷ್ಟೇ ಸಾಹಸಮಯ ವೈರಾಗ್ಯಪೂರ್ಣ ಆಧ್ಯಾತ್ಮದ ಹಾದಿ. ದಿಟ್ಟೆದೆಯಿಂದ ಎಡರು - ತೊಡರುಗಳನ್ನು ಎದುರಿಸಿ ನಿಂತ ಧೀರ ಸಂನ್ಯಾಸಿನಿ, ಮಾತಾಜಿ. ಸ್ತುತಿ - ನಿಂದೆ, ಮಾನಾಪಮಾನ, ಯಾವುದಕ್ಕೂ ಹಿಗ್ಗದೆ - ಕುಗ್ಗದೆ ಇರುವ ಸ್ಥಿತಪ್ರಜ್ಞತ್ವ ಪಡೆದಿರುವರು. ಧರ್ಮಪ್ರಸಾರಕ್ಕಾಗಿ ಹೊರದೇಶಕ್ಕೂ ಹೊರಟುನಿಂತ ಧೀರೆ. ಅಪರಿಚಿತ ದೇಶ, ಅಪರಿಚಿತ ಜನ ಇವುಗಳ ಮಧ್ಯೆ ಏಕಾಂಗಿನಿಯಾಗಿ ಸಂಚರಿಸಿ, ಭಾರತೀಯ ಧರ್ಮ - ಸಂಸ್ಕೃತಿಗಳ ಭವ್ಯತೆಯ ಅರಿವು ಪಾಶ್ಚಾತ್ಯರಿಗೂ ಮಾಡಿಕೊಡಲು ನಿರ್ಭೀತ ನಿಲುವಿನಿಂದ ಪಣತೊಟ್ಟು ಯಶಸ್ವಿಯಾದರು.

ಮಾತೃಹೃದಯಿ : ಮಹಾತ್ಮರ ಮನಸ್ಸು, ' ವಜ್ರಕ್ಕಿಂತಲೂ ಕಠೋರ, ಹೂವಿಗಿಂತ ಮೃದು ' ಎನ್ನುವಂತೆ, ಮಾತಾಜಿಯವರ ಮನಸ್ಸು ತತ್ತ್ವನಿಷ್ಠೆ ಹಾದಿಯನ್ನು ತುಳಿಯುವಾಗ, ಎಷ್ಟು ಕಠೋರತೆಯಿಂದ ತುಂಬಿರುವುದೋ ಅಷ್ಟೇ ಮೃದುವಾಗುವುದು, ದೀನ -ದಲಿತರನ್ನು ಕಂಡಾಗ. ಬಡತನದ ಬೇಗೆಯಲ್ಲಿ ಬೇಯುತ್ತಿರುವವರನ್ನು ಕಂಡಾಗ ಬೆಣ್ಣೆಯಂತೆ ಕರಗುವ, ಅವರ ಮನಸ್ಸು, ತನ್ನಿಂದಾಗುವ ಎಲ್ಲಾ ಸಹಾಯವನ್ನು ಮಾಡಲು ಸಿದ್ಧವಾಗುವುದು. ಅಂದೊಮ್ಮೆ ಆಶ್ರಮದಲ್ಲಿ ಅಲ್ಲಮಪ್ರಭುಗಳ ಜಯಂತ್ಯೋತ್ಸವ ಸಂಭ್ರಮದಿಂದ ನಡೆದಿತ್ತು. ಸಾಮೂಹಿಕ ಪೂಜೆಯ ನಂತರ, ಪ್ರಸಾದ ವಿತರಣೆ ಇನ್ನೇನು ಮುಗಿಯಲಿತ್ತು. ಆ ವೇಳೆಗೆ ಹಸಿದು ಕಂಗಾಲಾದ ಭಿಕ್ಷುಕರು, ' ಅಮ್ಮಾ ಭಿಕ್ಷೆ ನೀಡಿ ' ಎಂದು ಕೂಗಿದಾಗ, ಆ ಆರ್ತನಾದಕ್ಕೆ ಅವರ ಮನ ವಿಲಿ ವಿಲಿ ಒದ್ದಾಡಿತ್ತೇನೋ ಆ ಕ್ಷಣವೇ ಸ್ವತಃ ಎಲೆಯಲ್ಲಿ ಪ್ರಸಾದ ಬಡಿಸಿಕೊಂಡು, ಆ ಭಿಕ್ಷುಕರಿಗೆ ನೀಡಿದರು, ಹಸಿವು ಆಧ್ಯಾತ್ಮಿಕವಾಗೇ ಇರಲಿ, ದೈಹಿಕವಾಗೇ ಇರಲಿ, ಹಸಿದವರ ಬಗೆಗೆ ಅವರಿಗಿರುವ ಅನುಕಂಪೆಗೆ ಇದು, ನಾ ಕಂಡ ಪುಟ್ಟ ಉದಾಹರಣೆ.

ಆಧ್ಯಾತ್ಮಪಥದಲ್ಲಿ ಮುಂಬರಿಯಲಿಚ್ಛಿಸಿ, ಅವರ ಆಶ್ರಯದಲ್ಲಿರಲು ಬರುವ ಸಾಧಕರಿಗೆ ವಾತ್ಸಲ್ಯದ, ಹೊನಲನ್ನೇ ಹರಿಸುವ ಇವರ ಮಮತೆಯ ಮಡಿಲು, ಹೆತ್ತೊಡಲನ್ನು ಮರೆಯುವಂತೆ ಮಾಡುತ್ತದೆ. ಮಗು ಬೇಡಿದ್ದನ್ನು ಕೊಡದೆ, ಅದರ ಆರೋಗ್ಯಕ್ಕೆ ಒಳ್ಳೆಯದನ್ನು ಕೊಡುವ ತಾಯಿಯಂತೆ, ಮಾತಾಜಿಯವರು ಸಾಧಕರ ಹಾದಿಗೆ ಮುಳ್ಳಾಗುವಂಥಾ ಯಾವುದೇ ಪ್ರವೃತ್ತಿ ಅವರಲ್ಲಿದ್ದರೂ ನಿರ್ದಾಕ್ಷಿಣ್ಯವಾಗಿ ಖಂಡಿಸಿ, ಉತ್ತಮವಾದ ಮಾರ್ಗದರ್ಶನ ಮಾಡುವರು. ಸಾಧಕರ ಆಸಕ್ತಿ, ಒಲವು ಎತ್ತಕಡೆ ಇದೆಯೆಂದು ಅರಿತು ಅವರಲ್ಲಿ ಆ ಶಕ್ತಿಯನ್ನು ಜಾಗ್ರತಗೊಳಿಸಿ, ಅದೇ ದಿಶೆಯಲ್ಲಿ ಮುಂಬರಿಯಲು ಸೂಕ್ತ ನಿರ್ದೇಶನ ಮಾಡುವರು. ಸಾಹಿತ್ಯದ ಕಡೆ

ಒಲವಿದ್ದಲ್ಲಿ ಅದಕ್ಕೆ ಬೇಕಾದ ಸ್ಫೂರ್ತಿ. ಪ್ರವಚನ ಮಾಡಬೇಕೆಂಬ ಹಂಬಲವಿದ್ದವರಿಗೆ ಪ್ರೋತ್ಸಾಹ, ಸಂಗೀತದಲ್ಲಿ ಆಸಕ್ತಿಯಿದ್ದವರಿಗೆ ಸಹಜಾನುಕೂಲ ಕಲ್ಪಿಸುವಿಕೆ. ಅಂತೆಯೇ ಅವರ ವ್ಯಕ್ತಿತ್ವವು ಸಾಹಿತಿಗಳಿಗೆ ಸ್ಫೂರ್ತಿಧಾಮ. ಭಾಕ್ತಿಕ ಹೃದಯಿಗಳಿಗೆ ಶಾಂತಿಧಾಮ, ಆಧ್ಯಾತ್ಮ ಪಿಪಾಸುಗಳಿಗೆ ಆನಂದಧಾಮ, ಜ್ಞಾನದಾಹಿಗಳಿಗೆ ಜ್ಯೋತಿಧಾಮ, ಲೌಕಿಕರ ಸಮಸ್ಯೆಗಳಿಗೆ ತೃಪ್ತಿಧಾಮ.

ಸೂರ್ಯನು ತನ್ನ ಕಿರಣಗಳನ್ನು ಎಲ್ಲೆಡೆಯಲ್ಲೂ ಒಂದೇ ಸಮನಾಗಿ ಚೆಲ್ಲುವಂತೆ, ಮಾತಾಜಿಯವರು ತಮ್ಮ ಕಾರುಣ್ಯ ದೃಷ್ಟಿಯನ್ನು ಬಡವ-ಬಲ್ಲಿದ, ಮೇಲು-ಕೀಳು ಎಂಬ ಯಾವ ಭೇದವಿಲ್ಲದೆ ಎಲ್ಲ ಮಾನವರ ಮೇಲೂ ಹರಿಸುವರು. ಸಿರಿವಂತರಿರಲಿ ಬಡವರಿರಲಿ ಇಬ್ಬರಿಗೂ ತುಂಬು ಹೃದಯದ ಆಶೀರ್ವಾದ. ಭಕ್ತಿಯಿಂದ ಏನೇ ತಂದರೂ ಸ್ವೀಕರಿಸುವ ವಿಶಾಲ ಹೃದಯ.

ಕಾಯಕಕಲಿ : 'ಗುರುವಾದರೂ ಕಾಯಕದಿಂದ ಮುಕ್ತಿ, ಜಂಗಮವಾದರೂ ಕಾಯಕದಿಂದ ಮುಕ್ತಿ ಎಂಬ ಶರಣೋಕ್ತಿಯನ್ನು ಆಚರಣೆಯಲ್ಲಿ ಕಾಣಬೇಕಾದರೆ ಬಹುಶಃ ನನಗನಿಸುವಂತೆ. ವಿಶ್ವಕಲ್ಯಾಣ ಮಿಷನ್ನಿನಲ್ಲಿ ಮಾತ್ರ. ಕಾಯಕದ ಘನತೆಯನ್ನರಿತ ಪೂಜ್ಯ ಮಾತಾಜಿಯವರು ಯಾವುದೇ ಕಾಯಕ ಮಾಡಲು ಸಿದ್ಧ. ಕಾಯಕದ ಬದಲಾವಣೆಯೇ ವಿಶ್ರಾಂತಿ (Change of work is Rest) ಎಂದು ಹೇಳುವ ಇವರು, ಅವಿಶ್ರಾಂತವಾಗಿ ಸಮಾಜಕ್ಕಾಗಿ ದುಡಿಯುತ್ತಿರುವ ಚೇತನ. ಬಸವ ಮಂಟಪದ ಕಟ್ಟಡ ಕೆಲಸ ನಡೆಯುತ್ತಿದ್ದಾಗ, ಮಾತಾಜಿಯವರು 'ತರಂಗಿಣಿ' ಕಾದಂಬರಿಯ ರಚನೆಯಲ್ಲಿ ತಲ್ಲೀನರಾಗಿದ್ದರು. ಬೆಳಗಿನ ಪೂಜೆ ಮುಗಿಸಿ, ಬರೆಯುತ್ತಾ ಕುಳಿತಿರುತಿದ್ದ ಮಾತಾಜಿಯವರು, ಬರೆಯುವುದು ಸಾಕೆನಿಸಿದಾಗ, ಹೊರಬಂದು ಕಟ್ಟಡದ ಕೆಲಸದ ಮೇಲ್ವಿಚಾರಣೆ ಮಾಡುತ್ತಿದ್ದರು. ಅಷ್ಟೇ ಅಲ್ಲದೆ, ಕೆಲಸದವರ ಜೊತೆಯಲ್ಲಿ ತಾವೂ ಕೆಲಸಮಾಡುತ್ತಿದ್ದರು. 'ಮಾತಾಜಿ ನೀವು ಈ ಕೆಲಸ ಮಾಡಬಾರದು, ವಿಶ್ರಾಂತಿ ತೆಗೆದುಕೊಳ್ಳಿ'. ಎಂದು ಯಾರಾದರೂ ಹೇಳಿದರೆ. 'ಗುರುಗಳಾದವರು ಈ ಕೆಲಸ ಮಾಡಬಾರದು ಎಂದು ಯಾವ ಶಾಸ್ತ್ರದಲ್ಲೂ ಬರೆದಿಲ್ಲವಲ್ಲಾ' ಎಂದು ಉತ್ತರಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ವಿಶ್ರಾಂತಿ ತೆಗೆದುಕೊಂಡು ಸಮಯ ಹಾಳುಮಾಡುವುದಕ್ಕಿಂತ ಕೆಲಸ ಮಾಡಿ, ದೈಹಿಕ ವ್ಯಾಯಾಮದ ಜೊತೆಗೆ ಮನಸ್ಸನ್ನು ಪ್ರಫುಲ್ಲಿತಗೊಳಿಸುವುದೇ ಮಹತ್ವಪೂರ್ಣ. 'ಕಾಯಕದಿಂದ ಬಂದ ಬೆವರ ಹನಿಗಳಿಂದಲೇ ದೇವರಿಗೆ ಮಜ್ಜನ. ಸದ್ವಿಚಾರ ಚಿಂತನೆಯೇ ಪುಷ್ಪ' ಎಂದು ಹೇಳುತ್ತಿದ್ದರು. 'ಬೇಸರ' ಎಂಬುದು ಅವರ ನಿಘಂಟಿನಲ್ಲೇ ಇಲ್ಲ. ವರ್ಷದ ಮುನ್ನೂರರವತ್ತೈದು ದಿನಗಳನ್ನೂ ಸಮಾಜಸೇವೆಗಾಗಿಯೇ ಉಪಯೋಗಿಸಿ, ಹಗಲು - ರಾತ್ರಿ, ಊಟ - ನಿದ್ರೆ ಮರೆತು ಸಮಾಜಕ್ಕಾಗಿ ದುಡಿಯುವುದನ್ನು ಕಂಡಾಗ ಅವರ ತ್ಯಾಗ-ನಿಸ್ವಾರ್ಥತೆಯ ಅರಿವಾಗದಿರದು, ಆದರೆ. ಈ ತ್ಯಾಗ-ನಿಸ್ವಾರ್ಥ ದುಡಿಮೆಯನ್ನು ನಮ್ಮ ಸಮಾಜ ಎಷ್ಟರ ಮಟ್ಟಿಗೆ ತಿಳಿಯಬಲ್ಲದು?

ಶಿವಸಮರ್ಪಿತ ಚೇತನ : ಜಾಗ್ರತ್-ಸ್ವಪ್ನ ಸುಷುಪ್ತಾವಸ್ಥೆಯಲ್ಲೂ ಮಾತಾಜಿಯವರಿಗೆ ಬರೀ ದೈವೀ ಚಿಂತನೆಯೇ. ಶರಣಾಗತಿ ಭಾವದಿಂದ ತಮ್ಮನ್ನೇ ದೇವನಡಿಗೆ ಅರ್ಪಿಸಿಕೊಂಡಿರುವ ಮಾತಾಜಿಯವರು. ಅವನು ನುಡಿಸಿದಂತೆ ನುಡಿವ ದೇವ ವೀಣೆ, ಪರಮಾತ್ಮನೆಂಬ ನಿಷ್ಣಾತ, ನಿಪುಣ ಕಲೆಗಾರನ ಕೈಲಿರುವ ಕುಂಚ. ವಿದ್ಯುತ್ ಹರಿಯಲು ಮಾಧ್ಯಮ ವಾಗಿರುವ ತಂತಿಯಂತೆ, ಪರಮಾತ್ಮನ ಕಾರುಣ್ಯ ಹರಿಯಲು ಸಾಧನವಾಗಿರುವ ಇವರು ಸದಾ ಆ ದೇವನ ಧ್ಯಾನದಲ್ಲಿರುವರೆಂದು ನಾನರಿತುದು, ಆಕಸ್ಮಿಕವಾಗಿ ಅವರಿಗೆ ಕಾರಿನ ಅಪಘಾತ ಸಂಭವಿಸಿದಾಗ. ಅನಿರೀಕ್ಷಿತವಾಗಿ ನಡೆದ ಆ ಅಪಘಾತದಲ್ಲಿ ಅವರ ತಲೆಗೆ ಬಹಳ ಪೆಟ್ಟಾಗಿದ್ದ ಕಾರಣ, ಅಪಘಾತ ಸಂಭವಿಸಿದ ನಂತರ ೨೪ ಗಂಟೆಗಳ ಕಾಲ ಪ್ರಜ್ಞೆ ಇರಲಿಲ್ಲ, ಅವರಿಗೆ ಗ್ಲೂಕೋಸ್ ಕೊಡಲು ಬಂದ ಡಾಕ್ಟರ್‌ಗೆ ಪ್ರಜ್ಞಾಹೀನ ಸ್ಥಿತಿಯಲ್ಲಿಯೇ ಬಡಬಡಿಸಿದರು, "ತಾಂಡೂರಿಗೆ ಪ್ರವಚನಕ್ಕೆ ಹೋಗಬೇಕಾಗಿದೆ. ನಾನು ಸರಿಯಾಗಿಯೇ ಇರುವೆ ನನಗೆ ಗ್ಲೂಕೋಸ್ ಬೇಡ". ವೈದ್ಯರು ಒತ್ತಾಯಿಸಿ ಇಂಜೆಕ್ಷನ್ ಕೊಡಲು ಬಂದಾಗ, ಕೈ ಸರಿಯಾಗಿ ಕೊಡದೆ ಕತ್ತಿನ ಬಳಿ ಏನನ್ನೋ ಹುಡುಕುವಂತೆ ತಡಕಾಡುತ್ತಿದ್ಧರು. ಅಲ್ಲಿದ್ದ ನಾವು, ಅವರ ಇಷ್ಟಲಿಂಗಕ್ಕೆ ಕೈ ತಗುಲಿಸಿದಾಗ, ಅದನ್ನು ಬಿಗಿಯಾಗಿ ಹಿಡಿದುಕೊಂಡರು. ಆ ನೋವಿನಲ್ಲೂ ಬಸವನ ನಾಮ ಸ್ಮರಣೆ ಮಾಡುತ್ತಿದ್ದುದನ್ನು ಕಂಡು ನಾವೆಲ್ಲಾ ಮಾತಾಜಿಯವರಿಗೆ ಪ್ರಜ್ಞೆ ಮರುಕಳಿಸಿದೆ ಎಂದೇ ತಿಳಿದಿದ್ದೆವು. ಆದರೆ ಅವರನ್ನು, ಪೂರ್ಣವಾಗಿ ಪ್ರಜ್ಞೆ ಮರುಕಳಿಸಿದ ನಂತರ ಕೇಳಿದಾಗ, 'ನಾನು ಮಾತಾಡಿದ್ದು, ಇಷ್ಟಲಿಂಗವನ್ನು ಹುಡುಕಾಡಿದ್ದು, ಬಸವಣ್ಣನನ್ನು ಸ್ಮರಿಸಿದ್ದು, ಏನೂ ಗೊತ್ತಿಲ್ಲ' ಎಂದರು ಇವರು ಸುಷುಪ್ತಾವಸ್ಥೆಯಲ್ಲೂ ದೈವ ಚಿಂತನೆಯಲ್ಲೇ ತೊಡಗಿರುವರೆಂಬುದನ್ನು ಆಗಲೇ ನಾವು ಮನಗಂಡುದು

ಪೂ. ಮಾತಾಜಿಯವರ ಮನಸ್ಸು ಟೆಲಿಫೋನಿನಂತೆ ಕೆಲಸ ಮಾಡುವುದು. ಅವರ ಯೋಚನಾ ತರಂಗಗಳು ಎಷ್ಟು ವೇಗ ಕೆಲಸ ಮಾಡುವುವೆಂದರೆ, ಸಂಕಲ್ಪ ಮಾಡಿದ ಕೆಲವಾರು ಕ್ಷಣಗಳಲ್ಲೇ ಕಾರ್ಯಗತವಾಗುತ್ತದೆ. ಇದಕ್ಕೆ ಅವರ ಜೀವನದಲ್ಲಿ ಸಾಕಷ್ಟು ಘಟನೆಗಳನ್ನು ಉದಾಹರಿಸಬಹುದು. ಒಮ್ಮೆ ಅವರು, ನನಗಾವುದೋ ಲೇಖನ ಬರೆಯಲು ಹೇಳಿದ್ದರು. ಐದಾರು ದಿನಗಳಾದರೂ ನಾನು ಕೊಟ್ಟಿರಲಿಲ್ಲ.

'ಲೇಖನ ಬರೆದಿದ್ದರೆ. ತಂದುಕೊಡು ಎಂದು ಅವರ ಮನೆಗೆ ಹೇಳಿಕಳಿಸೋಣ' ಅಂದುಕೊಂಡರಂತೆ. ಅವರ ಏನನ್ನೋ ಬರೆಯುತ್ತಾ ನನಗೆ ಹೇಳಿ ಕಳಿಸುವುದನ್ನೇ ಮರೆತರು. ನನಗೆ ಆದಿನ ಏಕೆಂದೇ ತಿಳಿಯುತ್ತಿಲ್ಲ, ಅವರನ್ನು ಆದಷ್ಟು ಬೇಗ ನೋಡಬೇಕು ಅನ್ನಿಸುತ್ತಿತ್ತು. ಅವರು ಹೇಳಿದ್ದ ಲೇಖನ ಬರೆದು ಮುಗಿಸಿದ್ದ ಕಾರಣ, ಒಂದರ್ಧ ಗಂಟೆಯಲ್ಲಿ ಅದನ್ನು ತೆಗೆದುಕೊಂಡೇ ಆಶ್ರಮಕ್ಕೆ ಹೋದೆ. ಮಾತಾಜಿಯವರಿಗೆ ಆಶ್ಚರ್ಯವಾಯ್ತು. 'ಈಗ ಹೇಳಿಕಳಿಸೋಣ ಎಂದಿದ್ದೆ. ಅಷ್ಟರಲ್ಲಿ ನೀನೇ ಬಂದೆಯಲ್ಲಮ್ಮಾ' ಎಂದರು. ಆಗ ನಾನು 'ನೀವೇ ಬಂದು (ಮಾನಸಿಕವಾಗಿ) ನನ್ನನ್ನು ಕರೆದಿದ್ದೀರ. ಆದ್ದರಿಂದಲೇ ನಾನು ಕರೆಕಳುಹಿಸಿದಂತೆ ಓಡಿ ಬಂದೆ' ಎಂದು ಮನಸ್ಸಿನಲ್ಲಿ ಅಂದುಕೊಂಡು. ಅವರ ಆಧ್ಯಾತ್ಮಿಕ ಶಕ್ತಿಗೆ ಬೆರಗಾದೆ.

ಗುರುದೇವರ ಕರುಣೆಯ ಕಂದ : ಯಾವುದೇ ನಳನಳಿಸುವ ವೃಕ್ಷವನ್ನಾಗಲಿ, ಅಥವಾ ಭವ್ಯವಾದ ಕಟ್ಟಡವನ್ನಾಗಲೀ ನೋಡಿದಾಗ, ಎಲ್ಲರೂ ಸಂತೋಷಪಟ್ಟು, ಹೊಗಳುವವರೇ. ಆದರೆ, ಅದರ ಭಾರವನ್ನೆಲ್ಲಾ ಹೊತ್ತು, ಆಧಾರವಾಗಿ ನಿಂತ ಆ ವೃಕ್ಷದ ಬೇರನ್ನಾಗಲಿ, ಅಥವಾ ಭವ್ಯ ಕಟ್ಟಡದ ಅಡಿಪಾಯವನ್ನಾಗಲೀ ಮರೆತೇಬಿಟ್ಟಿರುತ್ತೇವೆ. ಬೇರಿಲ್ಲದೆ ಆ ವೃಕ್ಷಕ್ಕೆ ಅಸ್ತಿತ್ವವೇ ಇಲ್ಲ. ಅಡಿಪಾಯವಿಲ್ಲದ ಕಟ್ಟಡಕ್ಕೆ ಭದ್ರತೆಯೇ ಇಲ್ಲ. ಅದೇ ರೀತಿ ಪರಮ ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು ತಮ್ಮ ವ್ಯಕ್ತಿತ್ವವನ್ನೇ 'ಮಾತಾಜಿ' ಎಂಬ ಫಲಪುಷ್ಪಭರಿತ ವೃಕ್ಷಕ್ಕೆ ಪೋಷಕವಾಗಿ ಮೂಲ ಚೈತನ್ಯವಾಗಿ, ಸ್ಫೂರ್ತಿಯ ಚಿಲುಮೆಯಾಗಿ, ತಾಯಿ ಬೇರನ್ನಾಗಿಸಿದ್ದಾರೆ. ತ್ಯಾಗ-ತಪಸ್ಸುಗಳ ಧಾರೆಯನ್ನು ಎರೆದಿದ್ದಾರೆ. ನುರಿತ ರೂಹಾರಿಯ ಕೈಲಿ ಹದವಾದ ಕಲ್ಲು ಹೇಗೆ ಸುಂದರ ರೂಪ ತಳೆದು. ಮೂರ್ತಿಯಾಗುತ್ತದೆಯೋ ಅದರಂತೆ, ಪೂ. ಮಾತಾಜಿಯವರು. ಪೂಜ್ಯ ಸದ್ಗುರುಗಳವರ ತಪಸ್ಸಿನ ಶಿಲ್ಪಾಗಾರದಲ್ಲಿ ಕಡೆಯಲ್ಪಟ್ಟ. ಸುಂದರ ಆಧ್ಯಾತ್ಮಿಕ ಮೂರ್ತಿ.

ಆಧ್ಯಾತ್ಮದ ಅವಿರಳ ಜ್ಯೋತಿ : ಪೂ. ಸ್ವಾಮೀಜಿಯವರು ಹೊತ್ತಿದ್ದ ವಿಶ್ವಧರ್ಮ ಪ್ರಸಾರದ ಮಣೆಹಕ್ಕೆ ತಾವೂ ಹೆಗಲುಕೊಟ್ಟು, ಅದಕ್ಕಾಗಿಯೇ ಹಗಲಿರುಳು ಶ್ರಮಿಸುತ್ತಿರುವ ಪೂಜ್ಯ ಮಾತಾಜಿಯವರಿಂದ ಇನ್ನೂ ಹೆಚ್ಚಿನ ಸೇವೆ ಸಮಾಜಕ್ಕೆ ದೊರೆಯಲಿ. ಅವರ ಪ್ರತಿಭೆಯ ಕುಂಚದಿಂದ ಅರಳಿದ ಸಾಹಿತ್ಯ ಕೃತಿಗಳೆಂಬ ಪುಷ್ಪಗಳು ಸುಂದರ ಮಾಲೆಯಾಗಿ ಕನ್ನಡ ಸಾಹಿತ್ಯ ಸರಸ್ವತಿ ಕೊರಳನ್ನಲಂಕರಿಸಿ, ಅವಳ ಭವ್ಯತೆಯನ್ನು ಹೆಚ್ಚಿಸಲಿ; ಮಹಾಮಾತ್ಯ ಶಕ್ತಿಯಿಂದ ಇನ್ನೂ ಸಹಸ್ರ ಸಹಸ್ರ ಜನರು ಪುನರ್ಜನ್ಮ ಪಡೆದು. ತಮ್ಮ ಬಾಳಬನ್ನಗಳನ್ನು ತೊಡೆದು, ಶಿವನೆಡೆಗೆ ನಡೆದು, ಸಾರ್ಥಕತೆ ಪಡೆಯಲಿ ಎಂಬುದೇ ನನ್ನಂತರಂಗದ ಪ್ರಾರ್ಥನೆ.

ಸಂಸ್ಕೃತ ಕಾವ್ಯಗಳಲ್ಲಿ ಶಿವನ ವರ್ಣನೆ



ಲೇಖಕರು :-

ಡಾ|| ದಯಾನಂದ ನರಸಿಂಹ ಶಾನಭಾಗ. ಎಂ. ಎ. ಪಿಎಚ್. ಡಿ.
ಸಂಸ್ಕೃತ ರೀಡರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಸ್ಕೃತ ಕಾವ್ಯಗಳನ್ನು ಅವಲೋಕಿಸಿದರೆ ಕವಿಗಳು ಶಿವನನ್ನು ಅನೇಕ ರೀತಿ ಬಣ್ಣಿಸಿದ್ದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಕವಿ ಕುಲತಿಲಕ ಕಾಲಿದಾಸನಿಗೆ ಶಿವನು ಆರಾಧ್ಯದೈವತವೇ ಆಗಿದ್ದಿರಬೇಕು. ಅವನ ಮೂರೂ ನಾಟಕಗಳು ಶಿವನ ಸ್ತುತಿಯಿಂದಲೇ ಆರಂಭವಾಗುತ್ತವೆ ; 'ರಘುವಂಶ'ದ ಮಂಗಲ ಶ್ಲೋಕದಲ್ಲಿ ಕಾಲಿದಾಸನು ಶಿವನನ್ನೇ ನಮಸ್ಕರಿಸಿದ್ದಾನೆ. 'ಕುಮಾರ ಸಂಭವ'ವಂತೂ ಶಿವನ ಜೀವನ ಬಣ್ಣಿಸುತ್ತದೆ. ಶತಕತ್ರಯಗಳನ್ನು ರಚಿಸಿ ಪ್ರಸಿದ್ಧನಾದ ಭರ್ತೃಹರಿಯು ತನ್ನ ಭಕ್ತಿಯು ಶಿವನಿಗೇ ಮೀಸಲಾಗಿದೆಯೆಂದು 'ವೈರಾಗ್ಯಶತಕ'ದಲ್ಲಿ ಸಾರಿದ್ದಾನೆ :

ಮಹೇಶ್ವರೆ ವಾ ಜಗತಾಂ ಮಹೇಶ್ವರೇ
ಜನಾರ್ದನೇ ವಾ ಜಗದಂತರಾತ್ಮನಿ ।
ನ ಭೇದಹೇತುಃ ಪ್ರತಿಪತ್ತಿರಸ್ತಿ ಮೇ
ತಥಾಪಿ ಭಕ್ತಿಸ್ತರುಣೇಂದುಶೇಖರೇ ॥

(ಜಗತ್ತಿಗೆ ಒಡೆಯನಾದ ಈಶ್ವರ ಮತ್ತು ಜಗತ್ತಿನ ಅಂತರಾತ್ಮನಾದ ಜನಾರ್ದನ ಇವರಿಬ್ಬರಲ್ಲಿ ಅಂತರವನ್ನು ಹೇಳಲು ನನಗೆ ಸಾಧ್ಯವಿಲ್ಲ. ಆದರೂ ನನ್ನ ಭಕ್ತಿಯು ನೆತ್ತಿಯ ಮೇಲೆ ಬಾಲಚಂದ್ರನನ್ನು ಧರಿಸಿದ ದೇವರಿಗೇ (ಶಿವನಿಗೆ) ಮೀಸಲು.)

ಇತರ ಕವಿಗಳೂ ತಮ್ಮ ಗ್ರಂಥಗಳಲ್ಲಿ ಶಿವನನ್ನು ಬಣ್ಣಿಸಿದ್ದಾರೆ. ಭಾರವಿಯ 'ಕಿರಾತಾರ್ಜುನೀಯ', ಪುಷ್ಪದಂತನ 'ಶಿವಮಹಿಮ್ನ ಸ್ತೋತ್ರ' ಬಾಣನ 'ಹರ್ಷಚರಿತ' 'ಕಾದಂಬರಿ'ಗಳೂ, ಭಟ್ಟನಾರಾಯಣನ 'ವೇಣೀ ಸಂಹಾರ' ವಿಶಾಖದತ್ತನ 'ಮುದ್ರಾರಾಕ್ಷಸ' ನಾರಾಯಣ ಪಂಡಿತನ 'ಹಿತೋಪದೇಶ'. ವಿಷ್ಣುಶರ್ಮನ 'ಪಂಚತಂತ್ರ'. 'ಪಂಡಿತರಾಜ ಕಾವ್ಯಸಂಗ್ರಹ'. 'ನೀಲಕಂಠ ವಿಜಯ'. 'ಶಾರ್ಙ್ಗಧರಪದ್ಧತಿ' ಮೊದಲಾದ ಕೃತಿಗಳಲ್ಲಿ ಶಿವನ ವರ್ಣನೆ ಬಂದಿವೆ. ಶಿವನ ವರ್ಣನೆ ನಾನಾವಿಧವಾಗಿರುವಂತೆ ರೋಚಕವೂ ಆಗಿದೆ. ಕೆಲವು ಕವಿಗಳು ಶಿವನನ್ನು ಪರಬ್ರಹ್ಮನನ್ನಾಗಿ ಬಣ್ಣಿಸಿದ್ದಾರೆ. ಪುಷ್ಪದಂತನು ತನ್ನ 'ಶಿವಮಹಿಮ್ನ ಸ್ತೋತ್ರ'ದಲ್ಲಿ ಶಿವನ ಕಲ್ಪನಾತೀತವಾದ ಐಶ್ವರ್ಯವನ್ನು ನಿರೂಪಿಸಲು ಪ್ರಯತ್ನಿಸಿ ಆಧ್ಯಾತ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೇಳಿದ್ದಾನೆ :—

ಕಿಮೀಹಃ ಕಿಂ ಕಾಯಃ ಸ ಖಲು ಕಿಮುಪಾಯಸ್ತ್ರಿಭುವನಂ
ಕಿಮಾಧಾರೋ ಧಾತಾ ಸೃಜತಿ ಕಿಮುಪಾದಾನ ಇತಿ ಚ।
ಅತರ್ಕ್ಯೈಶ್ವರ್ಯೇ ತ್ವಯ್ಯನವಸರದುಃಸ್ಥೋ ಹತಧಿಯಃ
ಕುತರ್ಕೋಽಯಂ ಕಾಂಶ್ಚಿನ್ಮುಖರಯತಿ ಮೋಹಾಯ ಜಗತಃ ॥

(ಮೂರೂ ಲೋಕಗಳನ್ನು ಸೃಷ್ಟಿಕರ್ತನು ಯಾವ ಇಚ್ಛೆಯಿಂದ ಸೃಷ್ಟಿಸುತ್ತಾನೆ.? ಆಗ ಅವನ ಶರೀರವು ಯಾವದು? ಸಾದನಗಳು ಯಾವುವು? ಅವನಿಗೆ ನಿಲ್ಲಲಿಕ್ಕೆ ಆಧಾರ ಯಾವುದು? ಉಪಾದಾನಕಾರಣ ಯಾವದು ? ಶಿವನೇ, ಕಲ್ಪನಾತೀತವಾದ ನಿನ್ನ ಐಶ್ವರ್ಯದ ವಿಷಯದಲ್ಲಿ ಇಂತಹ ಕುತರ್ಕಕ್ಕೆ ಅಸ್ಪದವಿಲ್ಲ. ಮತ್ತು ಈ ಕುತರ್ಕವು ತುಚ್ಛವಾಗಿದೆ. ಜಗತ್ತನ್ನು ಮೋಹಗೊಳಿಸುವುದಕ್ಕೆ ಇದು ಕೇವಲ ಕೆಲವು ಬುದ್ಧಿಹೀನರನ್ನು ವಾಚಳಿಗಳನ್ನಾಗಿ ಮಾಡುತ್ತದೆ.)

ಇದೇ ರೀತಿ ಪರಶಿವನು ಒಬ್ಬನೇ ; ಅವನನ್ನು ತಲುಪುವ ಮಾರ್ಗಗಳು ಅನೇಕ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವ ಈ ಶ್ಲೋಕವೂ ಪುಷ್ಪದಂತನದು:-

ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ।
ರುಚೀನಾಂ ವೈಚಿತ್ರ್ಯಾದೃಜುಕುಟಿಲನಾನಾಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥

(ವೇದ, ಸಾಂಖ್ಯ, ಯೋಗ.ಪಾಶುಪತ ಮತ್ತುವೈಷ್ಣವ ಮತಗಳು ಎಂಬ ಭಿನ್ನ-ಭಿನ್ನ ಮೋಕ್ಷ ಮಾರ್ಗಗಳಿವೆ, ಇವುಗಳಲ್ಲಿ ಇದು ಉತ್ತಮವಾಗಿದೆ, ಅದು ಹಿತಕರವಾಗಿದೆ. ಎಂದು ಸರಳವಿರಲಿ, ವಕ್ರವಿರಲಿ ಬೇರೆ ಬೇರೆ ಮಾರ್ಗಗಳನ್ನು ಜನರು ಅನುಸರಿಸುತ್ತಾರೆ. ಇದಕ್ಕೆ ಜನರ ಇಚ್ಛೆಗಳ ವೈಚಿತ್ರವೇ ಕಾರಣವಾಗಿದೆ. ಆದರೆ ಎಲ್ಲ ನೀರುಗಳಿಗೆ ಸಮುದ್ರವು ಗಮ್ಯಸ್ಥಾನವಾಗಿರುವಂತೆ ಈ ಎಲ್ಲ ಜನರಿಗೆ ನೀನೆ ಪ್ರಾಪ್ಯಸ್ಥಾನವಾಗಿರುತ್ತೀ) ಪುಷ್ಪದಂತನ ಅಭಿಪ್ರಾಯದಲ್ಲಿ ಶಿವನ ಮಹಿಮೆಯನ್ನಾಗಲಿ ಐಶ್ವರ್ಯವನ್ನಾಗಲಿ ಅಳೆಯಲು ಸಾಧ್ಯವೇ ಇಲ್ಲ :—

ತವೈಶ್ವರ್ಯಂ ಯತ್ನಾದ್ಯದುಪರಿ ವಿರಿಂಚಿರ್ಹರಿರಧಃ
ಪರಿಚ್ಛೇತ್ತುಂ ಯಾತಾವನಲಮನಲಸ್ಕಂಧವಪುಷಃ ।
ತತೋ ಭಕ್ತಿಶ್ರದ್ಧಾಭರಗುರುಗೃಣದ್ಭ್ಯಾಂ ಗಿರಿಶ ಯತ್
ಸ್ವಯಂ ತಸ್ಥೇ ತಾಭ್ಯಾಂ ತವ ಕಿಮನುವೃತ್ತಿರ್ನ ಫಲತಿ॥

(ಅಗ್ನಿಯ ರಾಶಿಯಂತೆ ತೇಜೋಮಯ ಶರೀರವುಳ್ಳ ನಿನ್ನ ಐಶ್ವರ್ಯವನ್ನು ಅಳೆಯಬೇಕೆಂದು ಪ್ರಯತ್ನ ಪೂರ್ವಕವಾಗಿ ಬ್ರಹ್ಮನು ಮೇಲ್ಗಡೆ ಮತ್ತು ವಿಷ್ಣು ಕೆಳಗಡೆ ಹೋದರು. ಆದರೆ ಅವರಿಗೆ ಅದು ಸಾಧ್ಯವಾಗಲಿಲ್ಲ. ಅನಂತರ ಗಿರೀಶನೇ, ಬಹಳ ಭಕ್ತಿ ಮತ್ತು ವಿಶ್ವಾಸಗಳಿಂದ ಕೂಡಿ ಅವರು ನಿನ್ನನ್ನು ಸ್ತುತಿಸಿದರು. ಆದರಿಂದ ನೀನೇ

ಸ್ವತಃ ಅವರ ಮುಂದೆ ಪ್ರಕಟನಾದೆ. ಅಂದ ಮೇಲೆ ನಿನ್ನ ಸೇವೆಯು ಯಾವ ಫಲವನ್ನು ಕೊಡಲಾರದು?)

ಕಾಲಿದಾಸನು ಸಹ ತನ್ನ "ವಿಕ್ರಮೋರ್ವಶೀಯ" ನಾಟಕದ ನಾಂದೀ ಪದ್ಯದಲ್ಲಿ ಶಿವನನ್ನು ಪರಮ ಪುರುಷನೆಂದು ಸ್ತುತಿಸಿದ್ದಾನೆ:-

ವೇದಾಂತೇಷು ಯಮಾಹುರೇಕಪುರುಷಂ ವ್ಯಾಪ್ಯ ಸ್ಥಿತಂ ರೋದಸೀ
ಯಸ್ಮಿನ್ನೀಶ್ವರ ಇತ್ಯನನ್ಯವಿಷಯಃ ಶಬ್ದೋ ಯಥಾರ್ಥಾಕ್ಷರಃ।
ಅಂತರ್ಯಶ್ಚ ಮುಮುಕ್ಷುಭಿರ್ನಿಯಮಿತಪ್ರಾಣಾದಿಭಿರ್ಮೃಗ್ಯತೇ
ಸ ಸ್ಥಾಣುಃ ಸ್ಥಿರಭಕ್ತಿಯೋಗಸುಲಭೋ ನಿಃಶ್ರೇಯಸಾಯಾಸ್ತು ವಃ॥

(ಆ ಶಿವನು ನಿಮಗೆ ಮೋಕ್ಷವನ್ನು ಕರುಣಿಸಲಿ - ಉಪನಿಷತ್ತುಗಳಲ್ಲಿ ಅವನನ್ನು ಪರಮಪುರುಷನೆಂದಿದ್ದಾರೆ: ಭೂಮಿ ಆಕಾಶಗಳನ್ನು ಅವನು ವ್ಯಾಪಿಸಿದ್ದಾನೆ: 'ಈಶ್ವರ' (ಪ್ರಭು) ಎಂಬ ಪದದೊಳಗಿನ ಪ್ರತಿಯೊಂದು ಅಕ್ಷರವು ಅವನಿಗೆ ಯಥಾರ್ಥವಾಗಿ ಅನ್ವಯಿಸುತ್ತದೆ: ಮೋಕ್ಷವನ್ನು ಬಯಸುವವರು ಪ್ರಾಣಾದಿಗಳನ್ನು ಒಳಗಡೆಯೇ ನಿಯಂತ್ರಿಸಿ ಅವನನ್ನು ಹುಡುಕುತ್ತಾರೆ: ಮತ್ತು ಅವನು ಸ್ಥಿರವಾದ ಭಕ್ತಿಯಿಂದ ಸುಲಭವಾಗಿ ಲಭಿಸುವನು.)

ಶಂಕರಚಾರ್ಯರು ತಮ್ಮ 'ಶಿವಮಾನಸಪೂಜಾ' ದಲ್ಲಿ ತಾವು ಮಾಡುವುದೆಲ್ಲವೂ ಪರಶಿವನ ಪೂಜೆಯೇ ಎಂದು ಸಾರಿದ್ದಾರೆ :—

ಆತ್ಮಾ ತ್ವಂ ಗಿರಿಜಾ ಮತಿಃ ಪರಿಜನಾಃ ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ।
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್॥

(ಶಿವನೇ ನನ್ನ ಆತ್ಮ ನೀನು : ಬುದ್ಧಿ ಗಿರಿಜೆ: ಪ್ರಾಣಗಳು ಪರಿವಾರ: ಶರೀರ ಮನೆ: ವಿಷಯೋಪಭೋಗಗಳು ಪೂಜೆ: ನಿದ್ರೆ ಸಮಾಧಿ; ಸಂಚಾರ ಪ್ರದಕ್ಷಿಣೆ: ಮಾತುಗಳೆಲ್ಲ ಸ್ತೋತ್ರಗಳು. ಹೀಗೆ ನಾನು ಮಾಡುವ ಕರ್ಮಗಳೆಲ್ಲ. ಶಿವನೇ. ನಿನ್ನ ಪೂಜೆಯೇ ಆಗಿದೆ)

ಶಿವನ ಅಷ್ಟರೂಪಗಳೂ ಪ್ರಸಿದ್ಧಿ ಪಡೆದಿವೆ. ಅವೆಂದರೆ-ಪೃಥಿವೀ, ಜಲ, ತೇಜಸ್ಸು. ವಾಯು ಆಕಾಶ. ಸೂರ್ಯ. ಚಂದ್ರ ಮತ್ತು ಯಜ್ಞದ ಹೋತೃ. ಇವುಗಳನ್ನು ನಿರ್ದೇಶಿಸುವ ಅಷ್ಟಮೂರ್ತಿಯ ವರ್ಣನೆ ಕಾಲಿದಾಸನ 'ಶಾಕುಂತಲ'ದ ನಾಂದೀ ಶ್ಲೋಕದಲ್ಲಿ ಬಂದಿದೆ:—

ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿಧಿಹುತಂ ಯಾ ಹವಿರ್ಯಾ ಚ ಹೋತ್ರೀ
ಯೇ ದ್ವೇ ಕಾಲಂ ವಿಧತ್ತಃ ಶ್ರುತಿವಿಷಯಗುಣಾ ಯಾ ಸ್ಥಿತಾ ವ್ಯಾಪ್ಯ ವಿಶ್ವಮ್।
ಯಾಮಾಹುಃ ಸರ್ವಬೀಜಪ್ರಕೃತಿರಿತಿ ಯಯಾ ಪ್ರಾಣಿನಃ ಪ್ರಾಣವಂತಃ
ಪ್ರತ್ಯಕ್ಷಾಭಿಃ ಪ್ರಪನ್ನಸ್ತನುಭಿರವತು ವಸ್ತಾಭಿರಷ್ಟಾಭಿರೀಶಃ॥

(ಜಗತ್ತನ್ನು ಸೃಷ್ಟಿಸಿದ ಬ್ರಹ್ಮನ ಮೊದಲ ಕೃತಿಯೆನಿಸಿದ ನೀರು. ಯಜ್ಞದಲ್ಲಿ ವಿಧಿವತ್ತಾಗಿ ಅರ್ಪಿಸಿದ ಹವಿಸ್ಸನ್ನು ದೇವತೆಗಳಿಗೆ ಒಯ್ದು ಮುಟ್ಟಿಸುವ ಬೆಂಕಿ. ಯಜ್ಞದಲ್ಲಿ ದೇವತೆಗಳನ್ನು ಆಹ್ವಾನಿಸುವ ಹೋತೃ. ಕಾಲವನ್ನು ನಿಯಮಿಸುವ ಸೂರ್ಯ-ಚಂದ್ರರಿಬ್ಬರು. ಶಬ್ದವನ್ನು ಕಿವಿಯು ಗ್ರಹಿಸಲು ವಿಷಯವಾಗುವ ಗುಣವುಳ್ಳ ಮತ್ತು ಇಡಿಯ ವಿಶ್ವವನ್ನು ತುಂಬಿರುವ ಆಕಾಶ, ಎಲ್ಲ ಬೀಜಗಳಿಗೂ ಕ್ಷೇತ್ರವೆನಿಸಿದ ಭೂಮಿ ಮತ್ತು ಪ್ರಾಣಗಳನ್ನು ಜೀವಂತವಾಗಿಡುವ ಗಾಳಿ-ಎಂಬ ಈ ಎಂಟು ಪ್ರತ್ಯಕ್ಷ ದೇಹಗಳಿಂದ ಕೂಡಿದ ಶಿವನು ನಿಮ್ಮನ್ನು ಕಾಪಾಡಲಿ)

ಶಿವನ ವಾಯು. ಅಗ್ನಿ ಜಲ ಮತ್ತು ಆಕಾಶ ರೂಪಗಳನ್ನು ಭಾರವಿಯು 'ಕಿರಾತಾರ್ಜುನೀಯ'ದ ಕೊನೆಯ ಸರ್ಗದಲ್ಲಿ ಬಹು ಭಕ್ತಿಭಾವದಿಂದ ಸ್ತುತಿಸಿದ್ದಾನೆ. ಅದರಲ್ಲಿ ವಾಯುರೂಪದ ಸ್ತುತಿ ಹೀಗಿದೆ:—

ತರಸಾ ಭುವನಾನಿ ಯೋ ಬಿಭರ್ತಿ
ಧ್ವನತಿ ಬ್ರಹ್ಮ ಯತಃ ಪರಂ ಪವಿತ್ರಮ್।
ಪರಿತೋ ದುರಿತಾನಿ ಯಃ ಪುನೀತೇ
ಶಿವ ತಸ್ಮೈ ಪವನಾತ್ಮನೇ ನಮಸ್ತೇ॥

(ಪವನಾತ್ಮಕನಾದ ಶಿವನಿಗೆ ನಮಸ್ಕಾರ - ಪವನವು ಪ್ರಾಣವಾಗಿ ಇಡಿಯ ಜಗತ್ತಿನ ಧಾರಣೆ ಮಾಡುತ್ತದೆ; ಅದರ ಪ್ರೇರಣೆಯಿಂದಲೇ ಪವಿತ್ರವಾದ ಪರಬ್ರಹ್ಮದ ನಾದ ಹಬ್ಬುತ್ತದೆ, ಮತ್ತು ಅದು ಸುತ್ತಲಿನ ಪಾಪಗಳ ನಾಶ ಮಾಡುತ್ತದೆ.)

ಶಿವನ ವೇಷ-ಭೂಷಣಗಳು ವಿಚಿತ್ರವಾದವೆಂಬುದು ನಮಗೆಲ್ಲ ಗೊತ್ತು. ಅವನ ವಾಹನ-ಮುದಿ ಎತ್ತು. ಆಭರಣ-ಸರ್ಪಗಳು. ಅವನು ತೊಡುವುದು-ಆನೆಯ ತೊಗಲು, ಮೈಗೆ ಬಳಿದು ಕೊಳ್ಳುವುದು-ಬೂದಿ, ಅವನ ಕಂಠಹಾರದಲ್ಲಿ-ತಲೆಬುರುಡೆಗಳು, ವಾಸ--ಸ್ಮಶಾನದಲ್ಲಿ, ಉದ್ಯೋಗ-ಭಿಕ್ಷಾವೃತ್ತಿ-ಆದರೂ ಶಿವನು ಪರಿಶುದ್ಧ, ಎಲ್ಲರಿಗೂ ವರ ಕೊಡುವವ ಮತ್ತು ಸರ್ವಶ್ರೇಷ್ಠ. ಈ ವಿರೋಧಾಭಾಸವನ್ನು ಅನೇಕ ಕವಿಗಳು ಬಣ್ಣಿಸಿದ್ದಾರೆ, ಈ ಶ್ಲೋಕ ಪ್ರಸಿದ್ಧವಾದುದು :—

ಭಿಕ್ಷುಕೋಽಪಿ ಸಕಲೇಪ್ಸಿತದಾತ
ಪ್ರೇತಭೂಮಿನಿಲಯೋಽಪಿ ಪವಿತ್ರಃ ।
ಭೂತಮಿತ್ರಮಪಿ ಯೋಽಭಯಸತ್ರೀ
ತಂ ವಿಚಿತ್ರ ಚರಿತಂ ಶಿವಮೀಡೆ ॥

(ಸ್ವತಃ ಭಿಕ್ಷುಕನಾಗಿದ್ದರೂ ಎಲ್ಲರ ಇಚ್ಛೆಗಳನ್ನು ಪೂರೈಸುತ್ತಾನೆ. ಸ್ಮಶಾನದಲ್ಲಿದ್ದರೂ ಪವಿತ್ರನಾಗಿದ್ದಾನೆ: ಭೂತ ಪಿಶಾಚಿಗಳೇ ಗೆಳೆಯರಾಗಿದ್ದರೂ ಎಲ್ಲರಿಗೂ ಅಭಯಂ ಕೊಡುತ್ತಾನೆ. ಅಂತಹ ವಿಚಿತ್ರ ನಡತೆಯ ಶಿವನನ್ನು ನಾನು ಸ್ತುತಿಸುತ್ತೇನೆ.)

ಈ ಸಂಗತಿ ಇನ್ನೊಂದು ವಿಧದಲ್ಲಿ ಕಾಲಿದಾಸನ 'ಮಾಲವಿಕಾಗ್ನಿಮಿತ್ರ'ದ ನಾಂದೀ ಪದ್ಯದಲ್ಲಿ ಬಂದಿದೆ:—ಶಿವನು ಬೇಡಿದವರಿಗೆ ಸಕಲವನ್ನೂ ಪೂರೈಸುತ್ತಾನೆ; ಆದರೆ ತಾನು ಮಾತ್ರ ಚರ್ಮ ತೊಟ್ಟಿದ್ದಾನೆ. ಹೆಂಡತಿಯನ್ನು ತನ್ನ ಮೈಯಲ್ಲೇ ಸೇರಿಸಿಕೊಂಡಿದ್ದರೂ, ಯತಿಗಳಿಗೆ ಬಹಳ ಮೀರಿದವನು. ಅಷ್ಟರೂಪಗಳಿಂದ ಜಗತ್ತನ್ನೇ ಪೋಷಿಸುವವನಾದರೂ ಎಳ್ಳಷ್ಟೂ ಅಭಿಮಾನವಿಲ್ಲ.-ಎಂಬುದಾಗಿ ಕಾಲಿದಾಸನು ಶಿವನನ್ನು ಸ್ತುತಿಸಿ ಅವನು ಎಲ್ಲರಿಗೂ ಸನ್ಮಾರ್ಗವನ್ನು ತೋರಿಸಲಿ ಎಂದು ಬೇಡಿಕೊಂಡಿದ್ದಾನೆ:—

ಏಕೈಶ್ವರ್ಯೇ ಸ್ಥಿತೋಽಪಿ ಪ್ರಣತಬಹುಫಲೇ ಯಃ ಸ್ವಯಂಕೃತ್ತಿ ವಾಸಾಃ
ಕಾಂತಸಮ್ಮಿಶ್ರದೇಹೋಽಪ್ಯವಿಷಯಮನಸಾಂ ಯಃ ಪರಸ್ತಾದ್ಯತೀನಾಮ್ ।
ಅಷ್ಟಾಭಿರ್ಯಸ್ಯ ಕೃತ್ಸ್ನಂ ಜಗದಪಿ ತನುಭಿರ್ಬಿಭ್ರತೋ ನಾಭಿಮಾನಃ
ಸನ್ಮಾರ್ಗಾಲೋಕನಾಯ ವ್ಯಪನಯತು ಸ ವಸ್ತಾಮಸೀಂ ವೃತ್ತಿಮೀಶಃ ॥

ಶಿವನಲ್ಲಿರುವ ಈ ವಿರೋಧಾಭಾಸವನ್ನು ಭಾರವಿಯೂ 'ಕಿರಾತಾರ್ಜುನೀಯ'ದಲ್ಲಿ ಹಾಡಿರುವ ಶಿವನ ಸ್ತುತಿಯಲ್ಲಿ ನಿರೂಪಿಸಿದ್ದಾನೆ:—

ಅಣೀಯಸೇ ವಿಶ್ವವಿಧಾರಿಣೇ ನಮೋ
ನಮೋಽಂತಿಕಸ್ಥಾಯ ನಮೋ ದವೀಯಸೇ ।
ಅತೀತ್ಯ ವಾಚಾ ಮನಸಾಂ ಚ ಗೋಚರಂ
ಸ್ಥಿತಾಯ ತೇ ತತ್ಪತಯೇ ನಮೋ ನಮಃ

(ಶಿವನೇ ನಿನಗೆ ಅನಂತ ನಮಸ್ಕಾರಗಳು. ನೀನು ಸೂಕ್ಷ್ಮತಮನು, ಆದರೂ ಇಡಿಯ ವಿಶ್ವದ ಧಾರಣೆ ನಿನ್ನಿಂದಾಗುತ್ತದೆ. ನೀನು ಅಂತರ್ಯಾಮಿಯಾಗಿ ಬಹಳ ಸಮೀಪ ವಿರುವಿ ; ಆದರೂ ನಿನ್ನನ್ನು ಪಡೆಯುವದು ಕಠಿಣವಾದ್ದರಿಂದ ನೀನು ಬಹಳ ದೂರ

ಇರುವಿ. ನೀನು ವಾಕ್ಕು ಮತ್ತು ಮನಸ್ಸುಗಳ ಒಡೆಯನಾಗಿರುವಿ : ಆದರೂ ಅವುಗಳಿಗೆ ಅಗೋಚರನಾಗಿರುವಿ ಅಂತಹ ನಿನಗೆ ನಮೋನಮಃ)

ಶಿವನ ವಿಚಿತ್ರ ವೇಷ-ಭೂಷಣಗಳ ಅಪಹಾಸ್ಯವನ್ನು ಕಾಲಿದಾಸನು ತನ್ನ 'ಕುಮಾರ ಸಂಭವ'ದಲ್ಲಿ ಶಿವನ ಬಾಯಿಂದಲೇ ಮಾಡಿಸಿದ್ದಾನೆ. ಕಾಮದಹನವಾದ ಬಳಿಕ ಶಿವನನ್ನು ಪತಿಯನ್ನಾಗಿ ಪಡೆಯಲು ಪಾರ್ವತಿಯು ಘೋರ ತಪಸ್ಸನ್ನಾಚರಿಸಲು ತೊಡಗುತ್ತಾಳೆ. ಅವಳನ್ನು ಪರೀಕ್ಷಿಸಲು ಬ್ರಹ್ಮಚಾರಿಯ ವೇಷ ಧರಿಸಿ ಶಿವನೇ ಬರುತ್ತಾನೆ. ಮತ್ತು ಶಿವನ ವೇಷ-ಭೂಷಣಗಳ ಅನೌಚಿತ್ಯವನ್ನು ಬಣ್ಣಿಸ ತೊಡಗುತ್ತಾನೆ:—"ಪಾರ್ವತಿಯೇ, ನಿನ್ನ ಕೈ ಮದುವೆಯ ಕಂಕಣ ಕಟ್ಟಿಕೊಂಡಾಗ ಅದು ಹಾವು ಸುತ್ತಿಕೊಂಡಿರುವ ಶಿವನ ಕೈಯನ್ನು ಹೇಗೆ ಹಿಡಿದೀತು? ನೀನು ಉಟ್ಟುಕೊಳ್ಳುವುದು ನವವಧುವಿನ ಪೀತಾಂಬರ; ಅವನೋ ತೊಡುವದು ರಕ್ತ ತೊಟ್ಟಿಕ್ಕುವ ಆನೆಯ ಚರ್ಮ; ನಿಮ್ಮಿಬ್ಬರಲ್ಲಿ ಹೊಂದಿಕೆ ಹೇಗೆ ಸಾಧ್ಯ? ನೀನು ಓಡಾಡುವದು ಹೂಗಳನ್ನು ಹರಡಿದ ಅರಮನೆಯ ಅಂಗಳದಲ್ಲಿ. ಅವನೋ ಹೆಣದ ಕೂದಲು ಹರಡಿದ ಮಸಣದ ನೆಲದ ಮೇಲೆ ಸದಾ ಓಡಾಡುವವನು: ನಿನಗೆ ಅದು ಸಾಧ್ಯವೇ? ನೀನು ಮೈಗೆ ಹಚ್ಚಿಕೊಳ್ಳುವುದು ಚಂದನದ ಲೇಪ : ಅವನ ಮೈ ತುಂಬ ಬೂದಿ. ನೀನು ಅವನನ್ನು ಆಲಿಂಗಿಸಿದಾಗ ಆ ಬೂದಿ ನಿನ್ನ ಮೈಗೆ ಅಂಟಿಕೊಂಡರೆ ಎಷ್ಟು ಅಸಹ್ಯ! ನೀನೊ ಮದುವೆಯಾದ ಮೇಲೆ ಗಜರಾಜನ ಮೇಲೆ ಕುಳಿತು ಮೆರವಣಿಗೆ ಮಾಡಿಸಿಕೊಳ್ಳುವ ಯೋಗ್ಯತೆಯವಳು. ಆದರೆ ಶಿವನನ್ನು ಮದುವೆಯಾದರೆ ಅವನ ಮುದಿ ಎತ್ತಿನ ಮೇಲೆ ಕುಳ್ಳಿರಬೇಕಾಗುತ್ತದೆ. ಅಗ ನಿನ್ನನ್ನು ನೋಡಿ ಜನ ನಗುವುದಿಲ್ಲವೇ?"

ಈ ರೀತಿ ಶಿವನ ಕುಂದುಗಳನ್ನೆಲ್ಲ ಬಣ್ಣಿಸಿ ಕೊನೆಯಲ್ಲಿ ಶಿವನು ಪಾರ್ವತಿಗಷ್ಟೇ ಅಲ್ಲ, ಯಾವ ಕನ್ಯೆಗೂ ಯೋಗ್ಯವರನಾಗಲಾರನೆಂಬ ಅಭಿಪ್ರಾಯ ಸಾರುತ್ತಾನೆ:—

ವಪುರ್ವಿರೂಪಾಕ್ಷ್ಯಮಲಕ್ಷ್ಯಜನ್ಮತಾ
ದಿಗಂಬರತ್ವೇನ ನಿವೇದಿತಂ ವಸು ।
ವರೇಷು ಯದ್ಬಾಲಮೃಗಾಕ್ಷಿ ಮೃಗ್ಯತೇ
ತದಸ್ತಿ ಕಿಂ ವ್ಯಸ್ತಮಪಿ ತ್ರಿಲೋಚನೇ ॥

ವರನಲ್ಲಿರಬೇಕಾದ ಗುಣಗಳೆಂದರೆ ಸುಂದರರೂಪ, ಸತ್ಕುಲದಲ್ಲಿ ಜನ್ಮ ಮತ್ತು ಐಶ್ವರ್ಯ. ಇವುಗಳಲ್ಲಿ ಒಂದಾದರೂ ಶಿವನಲ್ಲಿದೆಯೆ? ಒಂದೂ ಇಲ್ಲ. ವಿಕೃತ ಕಣ್ಣುಗಳಿಂದ ರೂಪ ಕೆಟ್ಟಿದೆ, ಅವನ ಜನ್ಮ ಯಾವ ಕುಲದಲ್ಲಾಯಿತೆಂಬುದು

ಯಾರಿಗೂ ಗೊತ್ತಿಲ್ಲ. ಅವನ ಐಶ್ವರ್ಯ ಎಷ್ಟೆಂದರೆ ಅವನಿಗೆ ಉಡಲು ಸರಿಯಾದ ಬಟ್ಟೆಯೆ ಇಲ್ಲ.

ಶಿವನ ರೌದ್ರಾವತಾರವನ್ನು ಬಣ್ಣಿಸಿದ ಕವಿಗಳೂ ಇದ್ದಾರೆ. ಭಟ್ಟ ನಾರಯಣನ 'ವೇಣಿಸಂಹಾರ' ನಾಟಕದ ಮೂರನೆಯ ನಾಂದೀ ಪದ್ಯದಲ್ಲಿ ಶಿವನು ತ್ರಿಪುರದಹನದಲ್ಲಿ ತೊಡಗಿದಾಗ ಯಾರ್‍ಯಾರು ಹೇಗೆ ಹೇಗೆ ಅವನ ಕಡೆಗೆ ನೋಡಿದರೆಂಬ ವರ್ಣನೆ ಬಂದಿದೆ:—

ದೃಷ್ಟಃ ಸಪ್ರೇಮ ದೇವ್ಯಾ ಕಿಮಿದಮಿತಿ ಭಯಾತ್ಸಂಭ್ರಮಾದಾಸುರೀಭಿ:
ಶಾಂತಾಂತಸ್ತತ್ತ್ವಸಾರೈಃ ಸಕರುಣಮೃಷಿಭಿರ್ವಿಷ್ಣು ನಾ ಸಸ್ಮಿತೇನ ।
ಆದಾಯಸ್ತ್ರಂ ಸಗರ್ವೈರುಪಶಮಿತವಧೂಸಂಭ್ರಮೈರ್ದೈತ್ಯವೀರೈಃ
ಸಾನಂದಂ ದೇವತಾಭಿರ್ಮಯಪುರದಹನೇ ಧೂರ್ಜಟಿಃ ಪಾತು ಯುಷ್ಮಾನ್ ॥

ತಾರಕನೆಂಬ ರಾಕ್ಷಸನ ಮಕ್ಕಳಾದ ತಾರಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿಗಳು ಮಯ ನಿರ್ಮಿತವಾದ ಬಂಗಾರ, ಬೆಳ್ಳಿ ಮತ್ತು ಕಬ್ಬಿಣದ ಚಲಿಸುವ ಪಟ್ಟಣಗಳಲ್ಲಿ ನೆಲೆಸುತ್ತ ಜಗತ್ತನ್ನು ಪೀಡಿಸುತ್ತಿದ್ದಾಗ ಶಿವನು ಆ ಮೂರು ಪಟ್ಟಣಗಳನ್ನು ಸುಟ್ಟು ಭಸ್ಮ ಮಾಡಿದನು. ಇದೇ 'ತ್ರಿಪುರದಹನ. ಆಗ ಶಿವನನ್ನು ಪಾರ್ವತಿಯು ಪ್ರೀತಿಯಿಂದ ನೋಡಿದಳು; ರಾಕ್ಷಸ ಸ್ತ್ರೀಯರು ಭಯಭೀತರಾಗಿ ಏನು ನಡೆದಿದೆಯೆಂದು ಅರಿಯಲಾರದೆ-ನೋಡತೊಡಗಿದರು; ಶಾಂತ ಮನಸ್ಸಿನ ಋಷಿ-ಮುನಿಗಳೆಲ್ಲ ಕರುಣೆಯಿಂದ ನೋಡಿದರು; ಮಹಾ ವಿಷ್ಣುವು ಮುಗುಳುನಗುತ್ತ ನೋಡಿದನು; ಸೊಕ್ಕಿಗೆದ್ದ ದೈತ್ಯವೀರರು ಗಾಬರಿಗೊಂಡ ತಮ್ಮ ಹೆಂಡಂದಿರನ್ನು ಸಂತೈಸಿ ತಮ್ಮ ಶಸ್ತ್ರಗಳನ್ನು ಹಿರಿಯುತ್ತ ನೋಡಿದರು; ಮತ್ತು ದೇವತೆಗಳೆಲ್ಲ ಆನಂದಭರಿತರಾಗಿ ಶಿವನನ್ನು ನೋಡಿದರು. ಅಂತಹ ಶಿವನು ಎಲ್ಲರನ್ನೂ ಕಾಯಲೆಂದು ನಾಟಕಕಾರನು ಬೇಡಿಕೊಂಡಿದ್ದಾನೆ.

ಶ್ರೀ ಹರ್ಷನು ಬರೆದ 'ರತ್ನಾವಲಿ' ಎಂಬ ನಾಟಕದ ಒಂದು ನಾಂದಿಪದ್ಯದಲ್ಲಿ ದಕ್ಷಯಜ್ಞ ಧ್ವಂಸ ಮಾಡಿದ ಘಟನೆಯನ್ನು ಶಿವನು ಪಾರ್ವತಿಗೆ ಗಹಗಹಿಸಿ ನಗುತ್ತ ಬಣ್ಣಿಸಿದನೆಂದು ನಿರೂಪಿಸಲಾಗಿದೆ:-

ಕ್ರೋಧೇದ್ಧೈರ್ದೃಷ್ಟಿ ಪಾತ್ರೈಸ್ತ್ರಿಭಿರುಪಶಮಿತಾ
ವಹ್ನಯೋಽಮೀ ತ್ರಯೋಽಪಿ
ತ್ರಾಸಾರ್ತಾ ಋತ್ವಿಜೋಽಧಶ್ಚಪಲಗಣಹೃತೋಷ್ಣೀಷಪಟ್ಟಾ: ಪತಂತಿ ।

ದಕ್ಷಃ ಸ್ತೌತ್ಯಸ್ಯ ಪತ್ನೀ ವಿಲಪತಿ ಕರುಣಂ ವಿದ್ರುತಂ ಚಾಪಿ ದೇವೈಃ
ಶಂಸನ್ನಿತ್ಯಾತ್ತಹಾಸೋ ಮಖಮಥನವಿಧೌ ಪಾತು ದೇವ್ಯೈ ಶಿವೋ ವಃ॥

("ಪ್ರಿಯೆ, ದಕ್ಷಯಜ್ಞನಾಶದ ಸಮಯದಲ್ಲಿ ಗಾರ್ಹಪತ್ಯ-ಆಹವನೀಯ - ದಕ್ಷಿಣಾಗ್ನಿಗಳೆಂಬ ಈ ಮೂರೂ ಅಗ್ನಿಗಳು ನನ್ನ ಮೂರೂ ಕಣ್ಣುಗಳಿಂದ ಹೊರ ಸೂಸಿದ ಬೆಂಕಿಗಳಿಂದ ಆರಿಸಲ್ಪಟ್ಟವು. ಹುಡುಗಾಟಿಕೆಯ ಸ್ವಭಾವದ ನನ್ನ ಗಣಗಳು ಭಯಭೀತರಾದ ಋತ್ವಿಜರ ರುಮಾಲುಗಳನ್ನು ಎಳೆದದ್ದರಿಂದ ನೆಲಕ್ಕೆ ಬಿದ್ದು ಬಿಟ್ಟರು; ದಕ್ಷನು ನನ್ನನ್ನು ಸ್ತುತಿಸಲು ಆರಂಭಿಸಿದನು; ಅವನ ಹೆಂಡತಿ ಕರುಣಾಜನಕವಾಗಿ ಅಳತೊಡಗಿದಳು; ದೇವತೆಗಳು ಕೂಡ ದಿಕ್ಕಾಪಾಲಾಗಿ ಓಡಿಹೋದರು." ಹೀಗೆ ಅಟ್ಟಹಾಸದಿಂದ ಪಾರ್ವತಿಗೆ ಶಿವನು ಬಣ್ಣಿಸಿದನು. ಆ ಶಿವನು ನಿಮ್ಮನ್ನು ಕಾಪಾಡಲಿ)

'ಹಿತೋಪದೇಶ' ವನ್ನು ರಚಿಸಿದ ನಾರಾಯಣ ಪಂಡಿತನು ತನ್ನ ರಚನೆಯ ಪ್ರಾರಂಭದಲ್ಲಿ ಶಿವನನ್ನು ಸ್ತುತಿಸುತ್ತ ಶಿವನ ತಲೆಯ ಮೇಲಿನ ಚಂದ್ರಬಿಂಬವು ಗಂಗೆಯ ನೀರಿನ ನೊರೆಯ ರೇಖೆಯಂತಿದೆಯೆಂದು ಬಣ್ಣಿಸಿದ್ದಾನೆ:—

ಸಿದ್ಧಿ: ಸಾಧ್ಯೇ ಸತಾಮಸ್ತು ಪ್ರಸಾದಾತ್ತಸ್ಯ ಧೂರ್ಜಟೇಃ ।
ಜಾಹ್ನವೀಫೇನಲೇಖೇವ ಯನ್ಮೂರ್ಧ್ನಿ ಶಶಿನಃ ಕಲಾ ॥

(ಯಾರ ತಲೆಯ ಮೇಲಿನ ಚಂದ್ರನ ಕಲೆಯು ಗಂಗೆಯ ನೊರೆಯ ರೇಖೆಯಂತಿದೆಯೋ ಆ ಶಿವನ ಪ್ರಸಾದದಿಂದ ಸಜ್ಜನರ ಉದ್ದೇಶಗಳೆಲ್ಲ ಫಲಿಸಲಿ)

ಶಿವನು ಇಡಿಯ ವಿಶ್ವಕ್ಕೆ ಮೂಲಾಧಾರನೆಂದು ಬಾಣನು ತನ್ನ "ಹರ್ಷಚರಿತ"ದ ಮಂಗಳ ಶ್ಲೋಕದಲ್ಲಿ ನಿರೂಪಿಸಿದ್ದಾನೆ :—

ನಮಸ್ತುಂಗಶಿರಶ್ಚುಂಬಿಚಂದ್ರ ಚಾಮರಚಾರವೇ ।
ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ॥

(ಶಿವನ ತಲೆ ಉನ್ನತವಾದುದು; ಅದನ್ನು ಧವಲಚಂದ್ರನು ಚುಂಬಿಸಿದ್ದಾನೆ, ಆದರಿಂದ ಅದು ಸುಂದರವಾಗಿದೆ. ಮೂರು ಲೋಕಗಳೆಂಬ ನಗರದ ರಚನೆಗೆ ಶಿವನು ಆಧಾರ ಸ್ತಂಭನು. ಅಂತಹ ಶಿವನಿಗೆ ನಮಸ್ಕಾರವು)

ಶಿವನನ್ನು ಕುರಿತು ತಮಾಷೆ ಮಾಡಿದ ಕವಿಗಳೂ ಇದ್ದಾರೆ. ಶಿವನು ಅರ್ಧನಾರೀಶ್ವರನು. ಇದು ಕಾವ್ಯದಲ್ಲಿ ಶಬ್ದ ಮತ್ತು ಅರ್ಥ ಒಂದಕ್ಕೊಂದು ಅಭಿನ್ನ

ವಾಗಿ ಕೂಡಿಕೊಂಡಿರುವುದಕ್ಕೆ ಸಮಾನವೆಂದು ಕಾಲಿದಾಸನು 'ರಘುವಂಶ'ದ ಪ್ರಾರಂಭದ ಶ್ಲೋಕದಲ್ಲಿ ಬಣ್ಣಿಸಿದ್ದಾನೆ :—

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥

ಶಬ್ದಾರ್ಥದ ಅರಿವಾಗಲು ನಾನು ಜಗತ್ತಿನ ತಾಯಿ - ತಂದೆಯರಾದ ಪಾರ್ವತೀ ಪರಮೇಶ್ವರರನ್ನು ನಮಿಸುತ್ತೇನೆ ; ಅವರು ಶಬ್ದ ಮತ್ತು ಅರ್ಥಗಳಂತೆ ಕೂಡಿರುವರು.)

ಆದರೆ "ಶಾರ್ಙ್ಗಧರ ಪದ್ಧತಿ"ಯು ಶಿವನು ಯಾಕೆ ಅರ್ಧನಾರೀಶ್ವರನಾದ ಎಂಬ ಪ್ರಶ್ನೆಗೆ ಹೀಗೆ ಉತ್ತರ ಕೊಟ್ಟಿದೆ :—

ಉದರದ್ವಯಭರಣಭಯಾದರ್ಧಾಂಗಾಹಿತದಾರಃ ।
ಯದಿ ನೈವಂ ತಸ್ಯ ಸುತಃ ಕಥಮದ್ಯಾಪಿ ಕುಮಾರಃ ॥

ತನ್ನ ಮತ್ತು ಹೆಂಡತಿಯ-ಹೀಗೆ ಎರಡು ಹೊಟ್ಟೆಗಳನ್ನು ತುಂಬಬೇಕಾಗುವ ಹೆದರಿಕೆಯಿಂದ ಶಿವನು ಅರ್ಧನಾರೀಶ್ವರನಾದನಂತೆ. ಈ ಕಾರಣವು ಸರಿಯಾಗಿಲ್ಲವಾದರೆ ಅವನ ಮಗ ಇನ್ನೂ ಬ್ರಹ್ಮಚಾರಿಯಾಗಿಯೇ ಯಾಕೆ ಉಳಿದಿದ್ದಾನ ? ಎಂದು ಕವಿ ನಮಗ ಮರುಪ್ರಶ್ನೆ ಕೇಳಿದ್ದಾನೆ.

ಶಿವನು ದಿಗಂಬರನೂ ಅಹುದು. ಇದನ್ನು ಗಮನಿಸಿದ ಓರ್ವ ಕವಿಯು ಒಂದು ಚಮತ್ಕಾರಿಕ ಘಟನೆಯನ್ನು ಬಣ್ಣಿಸಿದ್ದಾನೆ. ಒಮ್ಮೆ ವಿಷ್ಣುವು ಶಿವನನ್ನು ಕಾಣಲು ಹೊರಟನಂತೆ. ತನ್ನ ಮನೆಗೆ ವಿಷ್ಣು ಬರುವ ಸುದ್ದಿ ಕೇಳಿದ ಶಿವನು ವಿಷ್ಣುವನ್ನು ಸ್ವಾಗತಿಸಲು ಮನೆಯ ಹೊರಗೆ ಬರಲು ಸೊಂಟಕ್ಕೆ ಹಾವನ್ನು ಉಡದಾರದಂತೆ ಸುತ್ತಿಕೊಂಡು. ಮತ್ತು ಆನೆಯ ಚರ್ಮವನ್ನು ಕೌಪೀನವಾಗಿ ಉಟ್ಟುಕೊಂಡ. ಆದರೂ ಹೊರಗೆ ಬಂದು ಅವನು ವಿಷ್ಣುವನ್ನು ಸ್ವಾಗತಿಸುವಾಗ ಪುನಃ ದಿಗಂಬರನೇ ಆಗಿಬಿಟ್ಟ! ಏಕೆಂದರೆ ವಿಷ್ಣುವಿನ ವಾಹನವಾದ ಗರುಡನನ್ನು ನೋಡಿದ ಕೂಡಲೇ ಉಡದಾರವಾಗಿದ್ದ ಸರ್ಪ ಭೀತಿಯಿಂದ ನಡುಗಿ ನೆಲಕ್ಕೆ ಬಿದ್ದು ಬಿಟ್ಟಿತು ಮತ್ತು ಅದರ ಸಂಗಡವೇ ಕೌಪೀನವೂ ಬಿಚ್ಚಿ ಕೆಳಗೆ ಬಿತ್ತು :—

ವಿಷ್ಣೋರಾಗಮನಂ ನಿಶಮ್ಯ ಸಹಸಾ ಕೃತ್ವಾ ಫಣೀಂದ್ರಂ ಗುಣಂ
ಕೌಪೀನಂ ಪರಿಧಾಯ ಚರ್ಮ ಕರಿಣಃ ಶಂಭುಃ ಪುರೋ ಧಾವತಿ।

ದೃಷ್ಟ್ವಾ ವಿಷ್ಣುರಥಂ ಸಕಂಪಹೃದಯಃ ಸರ್ಪೋऽಪತದ್ಭೂತಲೇ
ಕೃತ್ತಿರ್ವಿಸ್ಖಲಿತಾ ಹ್ರಿಯಾನತಮುಖೋ ನಗ್ನೋ ಹರಃ ಪಾತು ವಃ ॥

ಈ ಶ್ಲೋಕ 'ಸುಭಾಷಿತ ರತ್ನ ಭಾಂಡಗಾರ'ದಲ್ಲಿ ಸಂಗ್ರಹಿತವಾಗಿದೆ. ಆಗ ನಾಚಿಕೆಯಿಂದ ತಲೆ ತಗ್ಗಿಸಿದ ಶಿವನು ಎಲ್ಲರನ್ನೂ ರಕ್ಷಿಸಲೆಂದು ಕವಿಯು ಪ್ರಾರ್ಥಿಸಿದ್ದಾನೆ.

ಶಿವನ ಹೆಸರುಗಳಿಗೆ ಎರಡೆರಡು ಅರ್ಥಗಳಿರುವುದನ್ನು ಗಮನಿಸಿ "ಶಾರ್ಙ್ಗಧರ ಪದ್ಧತಿ"ಯು ಶಿವಪಾರ್ವತಿಯರಲ್ಲಿ ಒಂದು ಮನೋರಂಜಕ ಸಂವಾದ ಹೆಣೆದಿದೆ. ರಾತ್ರಿ ತಡವಾಗಿ ಮನೆಗೆ ಬಂದ ಶಿವನಿಗೆ ಯಾರೆಂದು ಕೇಳಿದಾಗ ಅವನು ಕೊಟ್ಟ ಉತ್ತರಗಳ ಅಪಾರ್ಥ ಮಾಡಿ ಅವಳು ಅವನನ್ನು ಮಾತಿನಲ್ಲಿ ಸೋಲಿಸಿದಳೆಂದು ಕವಿ ಊಹಿಸಿದ್ದಾನೆ :—

'ಕಸ್ತ್ವಂ' 'ಶೂಲೀ' 'ಮೃಗಯ ಭಿಷಜಂ' 'ನೀಲಕಂಠಃ ಪ್ರಿಯೇऽಹಂ,
'ಕೇಕಾಮೇಕಾಂ ಕುರು' 'ಪಶುಪತಿಃ' 'ನೈವ ದೃಶ್ಯೇ ವಿಷಾಣೇ' ।
'ಸ್ಥಾಣುರ್ಮುಗ್ಧೇ' 'ನ ವದತಿತರುಃ' 'ಜೀವಿತೇಶಃ ಶಿವಾಯಾಃ'
'ಗಚ್ಛಾಟವ್ಯಾಂ' ಇತಿ ಹತವಚಾಃ ಪಾತು ವಶ್ಚಂದ್ರ ಚೂಡಃ ॥

ಪಾರ್ವತಿ 'ನೀನು ಯಾರು?' ಎಂದು ಕೇಳಿದಾಗ ಶಿವ "ನಾನು, ಶೂಲಿ" ಎ. ಶೂಲಿ ಎಂದರೆ ಹೊಟ್ಟೆಶೂಲಿ ಬಂದವನು ಎಂದೂ ಅರ್ಥವಾಗುತ್ತದೆ ಅದಕ್ಕಾಗಿ ಅವಳು 'ವೈದ್ಯರ ಬಳಿ ಹೋಗು' ಎನ್ನುತ್ತಾಳೆ. ಅವನು "ಪ್ರಿಯೇ, ನಾನು ನೀಲಕಂಠ" ಎಂದಾಗ ಈಕೆ ನೀಲಕಂಠ ಎಂದರೆ ನವಿಲು ಎಂದು ಅರ್ಥ ಮಾಡಿ "ಒಂದು ಕೇಕೆ ಹಾಕು" ಎನ್ನುತ್ತಾಳೆ. "ಪಶುಪತಿ" ಎಂದಾಗ ಎತ್ತೆಂದು ಅರ್ಥ ಮಾಡಿ "ಕೋಡು ಕಾಣಿಸುವುದಿಲ್ಲವಲ್ಲ" ಎನ್ನುತ್ತಾಳೆ "ಮುಗ್ಧೇ ನಾನು ಸ್ಥಾಣು"ಎಂದಾಗ ಸ್ಥಾಣು ಎಂದರೆ ಮರವೆಂದು ಅರ್ಥಮಾಡಿ "ಮರ ಮಾತನಾಡುತ್ತದೆಯೆ ?" ಎಂದು ಕೇಳುತ್ತಾಳೆ. ಆಗ ಶಿವನು "ನಾನು ಶಿವೆಯ ವಲ್ಲಭ" ಎನ್ನುತ್ತಾನೆ. ಶಿವೆ ಎಂದರೆ ಹೆಣ್ಣು ನರಿ ಎಂದೂ ಅರ್ಥವಿದೆ. ಅದಕ್ಕಾಗಿ ಅವಳು "ಅಡವಿಗೆ ಹೋಗು" ಎಂದು ಬಿಡುತ್ತಾಳೆ. ಈ ರೀತಿ ಮಾತಿನಲ್ಲಿ ಸೋತ ಶಿವನು ಎಲ್ಲರನ್ನೂ ಕಾಪಾಡಲೆಂದು ಕವಿ ಬೇಡಿಕೊಂಡಿದ್ದಾನೆ.

ಆದರೆ ವಿಶಾಕದತ್ತನ 'ಮುದ್ರಾ ರಾಕ್ಷಸ' ಎಂಬ ನಾಟಕದ ನಾಂದೀ ಪದ್ಯದಲ್ಲಿ ಪಾರ್ವತಿಯೇ ಸೋತಿದ್ದಾಳೆ. ಮಾತಿನಲ್ಲಿ ಶಿವನು ಗೆದ್ದಿದ್ದಾನೆ. ಶಿವನ

ತಲೆಯ ಮೇಲಿನ ಗಂಗೆಯನ್ನು ನೋಡಿದಾಗಲೆಲ್ಲ ಪಾರ್ವತಿಗೆ ಅಸೂಯೆ ಹೆಚ್ಚಾಗಿ ತ್ತದೆ.. ಒಮ್ಮೆ ಆವಳು "ನೀನು ತಲೆಯ ಮೇಲಿಟ್ಟು ಕೊಂಡು ಗೌರವಿಸುವ ಆಕೆ ಯಾರು ?" ಎಂದು ಶಿವನಿಗೆ ಕೇಳುತ್ತಾಳೆ. ಆದರೆ ಶಿವನು ಚಂದ್ರನನ್ನು ತೋರಿಸಿ ಚಮತ್ಕಾರಿಕವಾಗಿ ಪಾರ್ವತಿಯನ್ನು ಸುಮ್ಮನಾಗಿಸುತ್ತಾನೆ :—

'ಧನ್ಯಾ ಕೇಯಂ ಸ್ಥಿತಾ ತೇ ಶಿರಸಿ' 'ಶಶಿಕಲಾ'
'ಕಿನ್ನು ನಾಮೈತದಸ್ಯಾ :'
'ನಾಮೈವಾಸ್ಯಾಸ್ತದೇತತ್ ಪರಿಚಿತಮಪಿ ತೇ
ವಿಸ್ಮೃತಂ ಕಸ್ಯ ಹೇತೋಃ ?' ।
'ನಾರೀಂ ಪೃಚ್ಛಾಮಿ ನೇಂದುಂ' 'ಕಥಯತು
ವಿಜಯಾ ನ ಪ್ರಮಾಣಂ ಯದೀಂದುಃ'
ದೇವ್ಯಾ ನಿಹ್ನೋತುಮಿಚ್ಛೋರಿತಿ ಸುರಸರಿತಂ
ಶಾಠ್ಯಮವ್ಯಾದ್ವಿಭೋರ್ವಃ ॥

ತಾನು ಪರಮ ಪ್ರೇಯಸಿಯಾಗಿದ್ದರೂ ತನ್ನನ್ನು ಶಿವನು ಎಡಮಗ್ಗುಲಲ್ಲಿ ಇಟ್ಟುಕೊಂಡು ಗಂಗೆಯನ್ನು ಮಾತ್ರ ತಲೆಯ ಮೇಲೆ ಧರಿಸಿರುವನಲ್ಲ ? ಎಂದು ಪಾರ್ವತಿಗೆ ಯಾವಾಗಲೂ ಗಂಗೆಯ ಬಗ್ಗೆ ಅಸೂಯೆ. ಅದಕ್ಕಾಗಿ ಅವಳು ಶಿವನಿಗೆ ಕೇಳುತ್ತಾಳೆ; ". ನಿನ್ನ ತಲೆಯ ಮೇಲೆ ವಾಸಿಸುವ ಈ ಧನ್ಯಳು ಯಾರು ?" ಪಾರ್ವತಿಯು ಗಂಗೆಯ ಬಗೆಗೇ ಕೇಳುತ್ತಾಳೆಂಬುದು ಶಿವನಿಗೆ ಗೊತ್ತು. ಆದರೆ ಗಂಗೆಯ ಉಲ್ಲೇಖ ಮಾಡುವ ಮನಸ್ಸು ಆವನಿಗಿಲ್ಲ. ಅದಕ್ಕಾಗಿ ಆವನು ಸ್ತ್ರೀ ಲಿಂಗ ವಾಚಕವಾದ 'ಶಶಿಕಲಾ' ಶಬ್ದದಿಂದ ಉತ್ತರಿಸಿ ಚಂದ್ರನನ್ನು ನಿರ್ದೇಶಿಸುತ್ತಾನೆ. ಆಗ ಪಾರ್ವತಿಯು "ಏನು? ಅದು ಅವಳ ಹೆಸರೇ?" ಎಂದು ಪುನಃ ಕೇಳುತ್ತಾಳೆ. ಅದಕ್ಕೆ ಶಿವನು "ಹೌದು ಅದು ಅವಳ ಹೆಸರೇ. ನಿನಗೆ ಅದು ಪರಿಚಯದ್ದಾಗಿದ್ದರೂ ಹೇಗೆ ಮರೆತು ಬಿಟ್ಟೆ?" ಎಂದು ಉತ್ತರಿಸುತ್ತಾನೆ. ಚಂದ್ರನನ್ನು ನಿರ್ದೇಶಿಸಿ, ತಾನು ಕೇಳಿದ ಸ್ತ್ರೀಯನ್ನು ಮರೆ ಮಾಚಲು ಶಿವನು ಪ್ರಯತ್ನಿಸುತ್ತಿದ್ದಾನೆಂದು ಪಾರ್ವತಿಗೆ ಅರ್ಥವಾಗುತ್ತದೆ. ಆದರಿಂದ ಸಿಟ್ಟುಬರುತ್ತದೆ. ಮತ್ತು ಅವಳು "ನಾನು ಕೇಳಿದ್ದು ಸ್ತ್ರೀಯನ್ನು, ಚಂದ್ರನನ್ನಲ್ಲ" ಎಂದು ನುಡಿಯುತ್ತಾಳೆ. ಅವಳ ಅರ್ಥ "ನಾನು ಕೇಳಿದ್ದು ಸ್ತ್ರೀಯನ್ನು ಕುರಿತು, ಚಂದ್ರನನ್ನು ಕುರಿತಲ್ಲ" ಎಂಬುದು. ಆದರೆ ಶಿವನು ಮಾಡಿದ ಅರ್ಥ "ನಾನು ಪ್ರಶ್ನೆ ಕೇಳಿದ್ದು ಸ್ತ್ರೀಯಳಿಗೆ (ಏಕೆಂದರೆ ಸ್ತ್ರೀಯರು ವಿಶ್ವಾಸ ಪಾತ್ರರು), ಚಂದ್ರನಿಗಲ್ಲ. (ಏಕೆಂದರೆ ಪುರುಷರು ವಿಶ್ವಾಸಪಾತ್ರರಲ್ಲ)." ಆದ್ದರಿಂದ ಆವನು ಉತ್ತರಿಸುತ್ತಾನೆ: "ಚಂದ್ರನನ್ನು ನೀನು ನಂಬುವದಿಲ್ಲವಾದರೆ ನಿನ್ನ

ಗೆಳತಿ ವಿಜಯಾಳಿಗೆ ಕೇಳು"—ಈ ರೀತಿ ಪಾರ್ವತಿಯಿಂದ ಗಂಗೆಯನ್ನು ಬಚ್ಚಿಡುವ ಶಿವನ ಮಾತಿನ ಚಾತುರ್ಯವು ಎಲ್ಲರನ್ನೂ ಕಾಪಾಡಲಿ ಎಂದು ವಿಶಾಖದತ್ತನು ಪ್ರಾರ್ಥಿಸಿದ್ದಾನೆ.

'ಮೃಚ್ಛಕಟಿಕ' ನಾಟಕವನ್ನು ಬರೆದ ಶೂದ್ರಕನಿಗೆ ಮೆಚ್ಚುಗೆಯಾದದ್ದು ಶಿವನ ಯೋಗ ನಿದ್ರಾಸ್ಥಿತಿ. ಅದನ್ನೇ ಅವನು ನಾಟಕದ ನಾಂದೀ ಪದ್ಯದಲ್ಲಿ ನಿರೂಪಿಸಿದ್ದಾನೆ:

ಪರ್ಯಂಕಗ್ರಂಥಿಬಂಧದ್ವಿಗುಣಿತಭುಜಗಾಶ್ಲೇಷಸಂವೀತಜಾನೋ—
ರಂತಃಪ್ರಾಣಾವರೋಧವ್ಯುಪರತಸಕಲಜ್ಞಾನರುದ್ಧೇಂದ್ರಿಯಸ್ಯ।
ಆತ್ಮನ್ಯಾತ್ಮಾನಮೇವ ವ್ಯಪಗತಕರಣಂ ಪಶ್ಯತಸ್ತತ್ತ್ವದೃಷ್ಟ್ಯಾ
ಶಂಭೋರ್ವಃ ಪಾತು ಶೂನ್ಯೇಕ್ಷಣಘಟಿತಲಯಬ್ರಹ್ಮಲಗ್ನಃ ಸಮಾಧೀಃ॥

(ಯಾವುದೇ ಇಂದ್ರಿಯ ಜ್ಞಾನವಿಲ್ಲದೆ ಪೂರ್ಣವಾಗಿ ಬ್ರಹ್ಮನಲ್ಲೇ ಕೇಂದ್ರೀಕೃತವಾದ ಶಿವನ ಸಮಾಧಿ ಸ್ಥಿತಿಯು ನಿಮ್ಮನ್ನು ಕಾಪಾಡಲಿ: ಈ ಸ್ಥಿತಿಯಲ್ಲಿ ಶಿವನು ಪರ್ಯಂಕಾಸನದಲ್ಲಿ ಕುಳಿತಿರುವದರಿಂದ ಸರ್ಪಗಳು ಮೊಣಕಾಲುಗಳನ್ನು ಎರಡು ಬಾರಿ ಸುತ್ತಿ ಕೊಂಡಿವೆ, ಅವನು ಒಳಗಡೆಯೇ ಪಂಚಪ್ರಾಣಗಳನ್ನು ತಡೆ ಹಿಡಿದಿರುವದರಿಂದ ಎಲ್ಲ ವಿಧದ ಜ್ಞಾನವು ನಿಂತು ಹೋಗಿ ಇಂದ್ರಿಯಗಳ ದಾರಿ ಮುಚ್ಚಿ ಹೋಗಿದೆ, ಅವನು ಆಧ್ಯಾತ್ಮದೃಷ್ಟಿಯಿಂದ ತನ್ನಲ್ಲಿಯೇ ಪರಮಾತ್ಮನನ್ನು ಕಾಣುತ್ತಿದ್ದಾನೆ ಮತ್ತು ಅದರಿಂದ ಜ್ಞಾನೇಂದ್ರಿಯಗಳು ತಮ್ಮ ಕಾರ್ಯವನ್ನು ನಿಲ್ಲಿಸಿ ಬಿಟ್ಟಿವೆ.)

ಮತ್ತೊಬ್ಬ ಕವಿಯ ಅಭಿಪ್ರಾಯದಲ್ಲಿ ಶಿವನಿಗೆ ಒಮ್ಮೆ ನಮಸ್ಕಾರ ಮಾಡಿದರೆ ಸಾಕು, ಮೋಕ್ಷನಿಶ್ಚಿತ. ಅದಕ್ಕಾಗಿ ಅವನ ಕಲ್ಪನೆ ಏನೆಂದರೆ ತಾನು ಹಿಂದಿನ ಜನ್ಮದಲ್ಲಿ ಶಿವನನ್ನು ನಮಸ್ಕರಿಸಲಿಲ್ಲವಾದ್ದರಿಂದ ಈ ಜನ್ಮ ಬಂದಿದೆ ಮತ್ತು ಈ ಜನ್ಮದಲ್ಲಿ ಶಿವನನ್ನು ನಮಸ್ಕರಿಸುವದರಿಂದ ಮುಂದೆ ಜನ್ಮವೇ ಇಲ್ಲ. ಹೀಗಾಗಿ ಅವನು ಎರಡು ಅಪರಾಧಗಳನು ಮಾಡುತ್ತಿದ್ದಾನೆ, ಮೊದಲನೆಯದು ಹಿಂದಿನ ಜನ್ಮದಲ್ಲಿ ಶಿವನನ್ನು ನಮಸ್ಕರಿಸದೇ ಹೋದದ್ದು; ಎರಡನೆಯದು ಮುಂದಿನ ಜನ್ಮದಲ್ಲಿಯೂ ನಮಸ್ಕರಿಸದೇ ಇರುವದು, ಮತ್ತು ಈ ಎರಡೂ ಅಪರಾಧಗಳಿಗಾಗಿ ತನ್ನನು ಕ್ಷಮಿಸಲು ಶಿವನ ಬಳಿ ಪ್ರಾರ್ಥಿಸುತ್ತಾನೆ:—

ವಪುಃಪ್ರಾದುರ್ಭಾವಾದನುಮಿತಮಿದಂ ಜನ್ಮನಿ ಪುರಾ
ಪುರಾರೇ ನ ಕ್ವಾಪಿ ಕ್ವಚಿದಪಿ ಭವಂತಂ ಪ್ರಣತವಾನ್ ।
ನಮನ್ ಮುಕ್ತಃ ಸಂಪ್ರತ್ಯಹಮತನುರಗ್ರೇಽಪ್ಯನತಿಮಾನ್
ಇತೀಶ ಕ್ಷಂತವ್ಯಂ ತದಿದಮುಪರಾಧದ್ವಯಮಪಿ ॥

(ಶಿವನೇ ಹಿಂದಿನ ಜನ್ಮದಲ್ಲಿ ನಾನು ಎಂದಿಗೂ ಎಲ್ಲಿಯೂ ನಿನ್ನನ್ನು ನಮಸ್ಕರಿಸಲಿಲ್ಲ ವೆಂಬುದು ಈ ಜನ್ಮ ಲಾಭದಿಂದಲೇ ಸಿದ್ಧವಾಗುತ್ತದೆ. ಈಗ ನಿನ್ನನ್ನು ನಮಸ್ಕರಿಸಿ ಮುಕ್ತಿ ಹೊಂದುವದರಿಂದ ಶರೀರ ಪ್ರಾಪ್ತಿಯಿಲ್ಲವಾಗಿ ನಮಸ್ಕರಿಸಲು ಅಸಾಧ್ಯವಾಗು ವದು. ಈ ಎರಡೂ ಅಪರಾಧಗಳನ್ನು ಕ್ಷಮಿಸು.)

ಶಿವನು ಹಾಲಾಹಲ ವಿಷವನ್ನು ಕುಡಿದ ಸಂಗತಿ ಲೋಕ ಪ್ರಸಿದ್ಧ. ಆದರೆ ಅವನು ವಿಷವನ್ನು ಏಕೆ ಕುಡಿದನೆಂಬುದು ನಿಮಗೆ ಗೊತ್ತಿದೆಯೆ? ಗೊತ್ತಿಲ್ಲವಾದರೆ 'ಪಂಚತಂತ್ರ' ವನ್ನು ರಚಿಸಿ ಪ್ರಖ್ಯಾತನಾಗಿರುವ ವಿಷ್ಣು ಶರ್ಮನನ್ನು ಕೇಳಿರಿ; ಅವನು ಆ ಕಾರಣವನ್ನು ಕಂಡು ಹಿಡಿದಿದ್ದಾನೆ. ಅದೆಂದರೆ:— ಮನೆಯೊಳಗಿನ ನಿತ್ಯಜಗಳದಿಂದ ರೋಸಿ ಹೋಗಿ ಶಿವ ಹಾಲಾಹಲ ಕುಡಿದನಂತೆ. ಆ ನಿತ್ಯ ಜಗಳ ಎಂತಹದು? ಒಂದು ಕಡೆ ಶಿವನ ಆಭರಣ ವಾದ ಸರ್ಪವು ಗಣಪತಿಯ ವಾಹನವಾದ ಇಲಿಯನ್ನು ತಿನ್ನಲು ಓಡುತ್ತದೆ. ಆಗ ಇನ್ನೊಬ್ಬ ಮಗ ಷಣ್ಮುಖನ ವಾಹನವಾದ ನವಿಲು ಆ ಸರ್ಪವನ್ನು ತಿನ್ನಲು ಹಾರಿ ಬರುತ್ತದೆ. ಇನ್ನೊಂದು ಕಡೆ ಪಾರ್ವತಿಯ ವಾಹನವಾದ ಸಿಂಹವು ಗಣಪತಿಯ ಆನೆ ಮುಖಕ್ಕೆ ಬಾಯಿ ಹಾಕಲು ಹೋಗುತ್ತದೆ. ಮತ್ತೊಂದೆಡೆ ಪಾರ್ವತಿಗೆ ಶಿವನ ತಲೆಯ ಮೇಲಿನ ಗಂಗೆಯ ಬಗ್ಗೆ ಹೊಟ್ಟೆಕಿಚ್ಚು. ಆದರಿಂದ ಯಾವಾಗಲೂ ಆಕೆಯ ಗೊಣಗಾಟ. ಹಾಗೆಯೇ ಶಿವನ ಕಪಾಲದಲ್ಲಿರುವ ಬೆಂಕಿಗೆ ಶಿವನ ತಲೆಯ ಮೇಲಿರುವ ಚಂದ್ರನ ಬಗೆಗೆ ಅಸೂಯೆ.—ಈ ನಿತ್ಯ ಜಗಳ ವನ್ನು ಸಹಿಸಲಾರದೆ ಶಿವನು ಹಾಲಾಹಲ ವಿಷವನ್ನು ಕುಡಿದನಂತೆ. !

ಅತ್ತುಂ ವಾಂಛತಿ ವಾಹನಂ ಗಣಪತೇರಾಖುಂ ಕ್ಷುಧಾರ್ತಃ ಫಣೀ
ತಂ ಚ ಕ್ರೌಂಚಪತೇಃ ಶಿಖೀ ಚ ಗಿರಿಜಾಸಿಂಹೋಽಪಿ ನಾಗಾನನಮ್ ।
ಗೌರೀ ಜಹ್ನುಸುತಾಮಸೂಯತಿ ಕಲಾನಾಥಂ ಕಪಾಲಾನಲೋ
ನಿರ್ವಿಣ್ಣಃ ಸ ಪಪೌ ಕುಟುಂಬಕಲಹಾದೀಶೋಽಪಿ ಹಾಲಾಹಲಮ್ ॥

ಆದರೆ "ನೀಲಕಂಠವಿಜಯ" ಕಾವ್ಯದಲ್ಲಿ, ಶಿವನು ಹಾಲಾಹಲವನ್ನು ಕುಡಿದು ದೇವತೆಗಳಿಗೆ ಬಹು ದೊಡ್ಡ ಉಪಕಾರ ಮಾಡಿದ್ದಾನೆಂದು ಕೃತಜ್ಞತೆ ತೋರಿ ಸಿದೆ. ಅಷ್ಟೇ ಅಲ್ಲ, ಶಿವನು ಸ್ಮಶಾನವಾಸಿಯಾಗಿ ಭೂತ-ಪಿಶಾಚಾದಿಗಳನ್ನು ನಿಯಂತ್ರಿಸುವದರಿಂದ ನಾವೆಲ್ಲ ಸುಖದಿಂದ ಮನೆಗಳಲ್ಲಿ ವಾಸಿಸಲು ಸಾಧ್ಯವಾಗಿದೆ ಯೆಂದೂ ತೋರಿಸಿಕೊಟ್ಟಿದೆ :—

ಭುಂಜೀಥಾ ನ ಹಲಾಹಲಂ ಯದಿ ಮಹಾದೇವ ತ್ವಮೇವಂ ವಿಧಂ
ಭುಂಜೀರನ್ ಕಿಮಿಮೇ ಸುರಾಶ್ಚರುಪುರೋಡಾಶಾದಿಹವ್ಯಂ ಮಖೇ ।

ಆಸೀಯಾ ನ ಯದಿ ಸ್ವಯಂ ಪಿತೃವನೇ ಭೂತಾನಿ ಸಂಮೋಹಯನ್
ಆಸೀರನ್ ಕಿಮಿಮೇ ಜನಾಃ ಸುಕೃತಿನೋ ಹರ್ಮ್ಯೇಷು ಸೌಧೇಷು ಚ ॥

(ಮಹಾದೇವನೇ, ಈ ರೀತಿಯಾಗಿ ನೀನು ಹಾಲಾಹಲ ವಿಷವನ್ನು ಕುಡಿದಿಲ್ಲವಾಗಿದ್ದರೆ, ಈ ದೇವತೆಗಳಿಗೆ ಯಜ್ಞದ ಚರ - ಪುರೋಡಾಶ ಮೊದಲಾದ ಹವಿಸ್ಸನ್ನು ತಿನ್ನಲು ಸಾಧ್ಯವಾಗುತ್ತಿತ್ತೇ ? ನೀನು ಸ್ಮಶಾನದಲ್ಲಿ ಭೂತ-ಪಿಶಾಚಾದಿಗಳನ್ನು ಸಂಮ್ಮೋಹನ ಗೊಳಿಸುತ್ತ ವಾಸಿಸಿಲ್ಲವಾಗಿದ್ದರೆ ಈ ಸಜ್ಜನರೆಲ್ಲ ತಮ್ಮ ತಮ್ಮ ಮಹಲುಗಳಲ್ಲಿ ಸುಖ ದಿಂದಿರಲು ಸಾಧ್ಯವಾಗುತ್ತಿತ್ತೇ ?)

ಶಿವನು ಗಂಗೆಯನ್ನು ತಲೆಯ ಮೇಲೆ ಧರಿಸಿದ್ದೂ ಹಾಲಾಹಲವನ್ನು ಕುಡಿದದ್ದೂ ಕೇವಲ ಲೋಕಹಿತಕ್ಕಾಗಿಯೇ ಎಂದು ಅಪ್ಪಯ್ಯ ದೀಕ್ಷಿತರು ತಮ್ಮ 'ಬ್ರಹ್ಮತರ್ಕಸ್ತವ'ದಲ್ಲಿ ಕೊಂಡಾಡಿದ್ದಾರೆ :—

ಗಂಗಾ ಧೃತಾ ನ ಭವತಾ ಶಿವ ಪಾವನೀತಿ
ನಾಸ್ವಾದಿತೋ ಮಧುರ ಇತ್ಯಪಿ ಕಾಲಕೂಟಃ ।
ಸಂರಕ್ಷಣಾಯ ಜಗತಾಂ ತ್ರಿತಯಸ್ಯ ನಾಥ
ಕರ್ಮದ್ವಯಂ ಕಲಿತಮೇತದನನ್ಯಸಾಧ್ಯಮ್ ॥

(ಶಿವನೇ, ನೀನು ಗಂಗೆಯನ್ನು ತಲೆಯ ಮೇಲೆ ಧರಿಸಿದ್ದು ಆಕೆ ಪವಿತ್ರಳೆಂದಲ್ಲ. ಕಾಲ ಕೂಟ ವಿಷವನ್ನು ನೀನು ಕುಡಿದದ್ದು ಅದು ಸಿಹಿಯಾಗಿದೆಯೆಂದಲ್ಲ; ಬೇರೆ ಯಾರಿಗೂ ಸಾಧ್ಯವಾಗದ ಈ ಎರಡು ಮಹಾಕಾರ್ಯಗಳನ್ನು ನೀನು ಪೂರೈಸಿದ್ದು ಕೇವಲ ಈ ಲೋಕಗಳನ್ನು ಸಂರಕ್ಷಿಸಬೇಕೆಂದು.)

ಏಕೆಂದರೆ ಭಗೀರಥನ ಘೋರ ತಪಸ್ಸಿನ ಫಲವಾಗಿ ಗಂಗಾನದಿಯು ಸ್ವರ್ಗದಿಂದ ಭೂಲೋಕಕ್ಕೆ ಧುಮುಕಿದಾಗ ಅವಳ ಪ್ರವಾಹವನ್ನು ಶಿವನು ತನ್ನ ತಲೆಯ ಮೇಲೆ ಹಿಡಿಯದೆ ಇದ್ದಿದ್ದರೆ ಈ ಭೂಲೋಕ ಆಕೆಯ ರಭಸಕ್ಕೆ ಒಡೆದು ಪುಡಿ-ಪುಡಿಯಾಗು ತ್ತಿತ್ತು. ಹಾಲಾಹಲ ವಿಷವನ್ನು ಶಿವನು ಕುಡಿಯದೇ ಇದ್ದರೆ ಅದರ ದಾಹದಿಂದ ಲೋಕಗಳೆಲ್ಲ ಸುಟ್ಟು ಭಸ್ಮವಾಗುತ್ತಿದ್ದವು. ಅದಕ್ಕಾಗಿಯೇ ಅಪ್ಪಯ್ಯ ದೀಕ್ಷಿತರು ಶಿವನನ್ನು ಕೊಂಡಾಡಿದ್ದಾರೆ.

ಶತಕತ್ರಯಗಳನ್ನು ರಚಿಸಿದ ಭರ್ತೃಹರಿಗೆ ಶಿವನಲ್ಲಿ ಅನನ್ಯ ಸಾಧಾರಣ ಭಕ್ತಿ ಯೆಂಬುದನ್ನು ಪ್ರಾರಂಭದಲ್ಲೇ ನೋಡಿದ್ದೇವೆ. ತನಗೆ ಶಿವನ ನಾಮಸ್ಮರಣೆಯೊಂದೇ

ಸಾಕೆಂದೂ ಅದರಲ್ಲಿಯೇ ದಿನಗಳೆಯಬೇಕೆಂದೂ ಅವನು ತನ್ನ ಮನದಿಚ್ಛೆಯನ್ನು ತೋಡಿಕೊಂಡಿದ್ದಾನೆ.

ಕದಾ ವಾರಣಸ್ಯಾಮಮರತಟಿನೀರೋಧಸಿ ವಸನ್
ವಸಾನಃ ಕೌಪೀನಂ ಶಿರಸಿ ನಿದಧಾನೋಽಂಜಲಿಪುಟಮ್ ।
ಅಯೇ ಗೌರೀನಾಥ ತ್ರಿಪುರಹರ ಶಂಭೋ ತ್ರಿನಯನ
ಪ್ರಸೀದೇತ್ಯಾಕ್ರೋಶನ್ನಿಮಿಷಮಿವ ನೇಷ್ಯಾಮಿ ದಿವಸಾನ್ ॥

(ನಾನು ಕಾಶಿಗೆ ಹೋಗಬೇಕು; ಗಂಗೆಯ ದಡದಲ್ಲಿ ನೆಲೆಸಬೇಕು; ಕೌಪೀನ ಮಾತ್ರ ಧರಿಸಿಕೊಂಡು ತಲೆಯ ಮೇಲೆ ಕೈ ಜೋಡಿಸಿ ನಿಂತು ' ಗೌರಿನಾಥ. ತ್ರಿಪುರ ಹರ. ಶಂಭೋ ತ್ರಿನಯನ ಪ್ರಸನ್ನನಾಗು ' ಎಂದು ಕೂಗುತ್ತಾ ದಿವಸಗಳನ್ನು ನಿಮಿಷಗಳಂತೆ ಕಳೆಯಬೇಕು, ಇದು ಎಂದು ಸಂಭವಿಸೀತು?)

ಇದೇ ರೀತಿಯಾದ ಬಯಕೆಯನ್ನು ಭರ್ತೃಹರಿಯು ಹಲವು ಶ್ಲೋಕಗಳಲ್ಲಿ ನಿರ್ವಹಿಸಿದ್ದಾನೆ. ಈ ಒಂದು ಶ್ಲೋಕವನ್ನು ನೋಡೋಣ:—

ಅಹೌ ವಾ ಹಾರೇ ವಾ ಬಲವತಿ ರಿಪೌ ವಾ ಸುಹೃದಿ ವಾ
ಮಣೌ ವಾ ಲೋಷೇ ವಾ ಕುಸುಮಶಯನೇ ವಾ ದೃಷದಿ ವಾ ।
ತೃಣೇ ವಾ ಸ್ತ್ರೈಣೇ ವಾ ಮಮ ಸಮದೃಶೋ ಯಾಂತು ದಿವಸಾಃ
ಕ್ವಚಿತ್ ಪುಣ್ಯೇಽರಣ್ಯೇ ಶಿವ ಶಿವ ಶಿವೇತಿ ಪ್ರಲಪತಃ ॥

(ಯಾವುದಾದರೂ ಪುಣ್ಯಕರವಾದ ಅಡವಿಯಲ್ಲಿ "ಶಿವ ಶಿವ ಶಿವ" ಎಂದು ಉಚ್ಚರಿಸುತ್ತ ನನ್ನ ದಿವಸಗಳು ಕಳೆಯಲಿ - ಆಗ ನಾನು ಸರ್ಪ ಮತ್ತು ಮುತ್ತಿನಹಾರ, ಬಲಾಢ್ಯ ಶತ್ರು ಮತ್ತು ಗೆಳೆಯ, ಅಮೂಲ್ಯ ರತ್ನ ಮತ್ತು ಮಣ್ಣಿನ ಹೆಂಟೆ. ಹೂವಿನ ಹಾಸಿಗೆ ಮತ್ತು ಕಲ್ಲಿನ ಹಾಸಿಗೆ, ಹುಲ್ಲಿನ ಕಡ್ಡಿ ಮತ್ತು ಸ್ತ್ರೀ ಸುಖ ವೈಭವ - ಇವುಗಳನ್ನು ಸಮಾನ ದೃಷ್ಟಿಯಿಂದ ನೋಡುವಂಥವನಾಗಲಿ)

ಇದೇ ರೀತಿಯಾಗಿ ಶಿವನಲ್ಲಿ ಅನನ್ಯ ಭಕ್ತಿ ಜಗನ್ನಾಥ ಪಂಡಿತನ ' ಪಂಡಿತರಾಜ ಕಾವ್ಯ ಸಂಗ್ರಹ 'ದ ಒಂದು ಶ್ಲೋಕದಲ್ಲಿ ಮೂಡಿ ಬಂದಿದೆ. ಕಿರೀಟದಲ್ಲಿ ಚಂದ್ರ, ಹಣೆಯಲ್ಲಿ ಅಗ್ನಿ, ಭುಜಗಳಲ್ಲಿ ಸರ್ಪರಾಜ, ಕೊರಳಲ್ಲಿ ಕಪ್ಪು ಕಲೆ ಶರೀರದಲ್ಲಿಯೇ ಪ್ರೇಯಸಿ-ಇವುಗಳನ್ನುಳ್ಳ ಶಿವನಿಗೆ ಸಮಾನರಾದ ದೇವರಿಲ್ಲವೆಂದು ಜಗನ್ನಾಥ ಪಂಡಿತನು ಕೊಂಡಾಡಿದ್ದಾನೆ :—

ಕಿರೀಟೇ ನಿಶೇಶೋ ಲಲಾಟೇ ಹುತಾಶೋ
ಭುಜೇ ಭೋಗಿರಾಜೋ ಗಲೇ ಕಾಲಿಮಾ ಚ ।
ತನೌ ಕಾಮಿನೀ ಯಸ್ಯ ತತ್ತುಲ್ಯ ದೇವಂ
ನ ಜಾನೇ ನ ಜಾನೇ ನ ಜಾನೇ ನ ಜಾನೇ ॥

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

(ಪ್ರಾರೂಪ ೪ ; ವಿಧಿ ೮)

೧. ಪ್ರಕಟಣೆಯ ಸ್ಥಳ	ಬಸವ ಮಂಟಪ, ೨೪, ಎರಡನೆಯ ಬ್ಲಾಕ್ ಕಾರ್ಡ್ ರೋಡ್, ರಾಜಾಜಿನಗರ, ಬೆಂಗಳೂರು-೧೦,
೨. ಪ್ರಕಟಣೆಯ ನಿಯತಕಾಲಿಕತೆ	ಮಾಸ ಪತ್ರಿಕೆ.
೩. ಮುದ್ರಕರ ಹೆಸರು	ರಾಧಾಕೃಷ್ಣ, ಸೂಪರ್ ಪ್ರಿಂಟರ್ಸ್
ರಾಷ್ಟ್ರೀಯತೆ	ಭಾರತೀಯ
ವಿಳಾಸ	೧೪, ಹೂವಾಡಿಗರ ಗಲ್ಲಿ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು-೫೩. ಫೋನ್ : ೭೧೮೬೦.
೪. ಪ್ರಕಾಶಕರು	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ವಿಶ್ವ ಕಲ್ಯಾಣ ಮಿಷನ್ ಪರವಾಗಿ
ರಾಷ್ಟ್ರೀಯತೆ	ಭಾರತೀಯ
೫. ಸಂಪಾದಕರು	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ರಾಷ್ಟ್ರೀಯತೆ	ಭಾರತೀಯ
೬. ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗತ ಮತ್ತು ಪಾಲುಗಾರರ ವಿಳಾಸ	ವಿಶ್ವಕಲ್ಯಾಣ ಮಿಷನ್ನಿನ ಏಕೈಕ ಒಡೆತನದಲ್ಲಿ ಪ್ರಕಾಶಿತವಾಗುತ್ತಿದೆ.

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆ ನಿಜವೆಂದು ನಾನು, ಜಗದ್ಗುರು ಮಾತೆ ಮಹಾದೇವಿ ಈ ಮೂಲಕ ಘೋಷಿಸುತ್ತೇನೆ.

ಸಹಿ ಎಂ. ಮಹಾದೇವಿ.
ಪ್ರಕಾಶಕ ಮತ್ತು ಸಂಪಾದಕರು

೧-೩-೭೯,

ಕಲ್ಯಾಣಕಿರಣ ಮಾಸ ಪತ್ರಿಕೆ ವಿಶ್ವ ಕಲ್ಯಾಣ ಮಿಷನ್
ನಂ, ೨೪, ಎರಡನೆಯ ಬ್ಲಾಕ್, ಕಾರ್ಡ್‌ರೋಡ್,
ರಾಜಾಜಿನಗರ, ಬೆಂಗಳೂರು-೫೬೦೦೧೦.

ಮೂವತ್ನಾಲ್ಕನೆಯ ವರುಷ ಕಾಣುತ್ತಲಿಹ

ಮಹಾಮಾತೆಯಡಿಯಲ್ಲಿ ನುಡಿನೈವೇದ್ಯ

ಸೋದರಿ ಉಮಾದೇವಿ, ಎಂ.ಎ.,ಎಂ.ಇಡಿ.,

ಮಾಗುರುವಿನ ಮಣಿಹವ ಮಕುಟದಲ್ಲಿ ಹೊತ್ತು
ತಾನುರಿಯುತ ಜಗಕ್ಕೆ ಹೊಂಬೆಳಕು ನೀಡುತ್ತಿರುವ
ಜಿತೇಂದ್ರಿಯರಾಗಿ ಹರನ ಶಿಶುಗಳ ಉದ್ಧರಿಸಲು ಧರೆಗಿಳಿದು ಬಂದ ದಿವ್ಯ
ನಂದಾದೀಪಕ್ಕೆ ಶರಣು ಶರಣಾರ್ಥಿ.

ಒಂದೇ ನೆಲದಲ್ಲಿದ್ದು. ಒಂದೇ ನೀರು ಕುಡಿದು, ಒಂದೇ ಗಾಳಿಯಲ್ಲಿ ಸುಳಿದಾಡುತ್ತಿರುವ ಭಾರತೀಯರಲ್ಲಿ ನಗ್ನಭೀಕರ ನೃತ್ಯ ಮಾಡುತ್ತಿರುವ ವರ್ಣಭೇದ, ವರ್ಗಭೇದಗಳನ್ನು ತೊಡೆಯಲು ಶ್ರಮಿಸುತ್ತಿರುವ, ಪರಂಪರಾಗತವಾಗಿ ಬೆಳೆದು ಬಂದ ಕಂದಾಚಾರಗಳಿಗೆ ವೈಜ್ಞಾನಿಕತೆಯ ಹೊಸ ತಿರುವು ಕೊಟ್ಟು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ನೈತಿಕ ರಂಗಗಳ ಕತ್ತಲೆಯನ್ನು ತೊಡೆಯುತ್ತಿರುವ ಅಸಾಮಾನ್ಯ ಮಂಗಳ ಮೂರ್ತಿ: ನಿರಾಡಂಬರೆ, ನಿಗರ್ವಶಿರೋಮಣಿ, ನಿರರ್ಗಳವಾಗಿ ಪ್ರವಚನ ಸುಧೆಯನ್ನು ಹರಿಸುತ್ತಿರುವ ಜ್ಞಾನ ತರಂಗಿಣಿ: ಸಾಹಿತ್ಯರಂಗದಲ್ಲಿ ಮೂಡಿದ ಮಂದಾರ ಕುಸುಮ, ಅನುಭಾವ ವೃಕ್ಷದಲ್ಲಿ ಅರಳಿದ ಸಜೀವ ಪುಷ್ಪ; ಧ್ಯಾನೋನ್ಮುಖವಾಗಿ ಕುಳಿತಾಗ, ಸೌಮ್ಯ. ತೇಜೋಪೂರ್ಣ. ಶುಭ್ರ ಕಾಷಾಯ ವಸ್ತ್ರಧಾರಿಯಾಗಿ ಅಭಯರಕ್ಷೆ ನೀಡುವ ಅಪೂರ್ವ ಚೇತನ ಅದಾವುದೆಂದು ಕೇಳುವಿರಾ ? ಅದು ನಮ್ಮ-ನಿಮ್ಮೆಲ್ಲರ ಚಿರಪರಿಚಿತ ಮಾತೃಶಕ್ತಿ, ಜ್ಞಾನ ಜ್ಯೋತಿ—ಮಾತಾಜಿ,

ಸತ್ಯಕಾಯಕದಲ್ಲಿ ನಿತ್ಯನಿರತೆ. ಗುರುಲಿಂಗಜಂಗಮಕ್ಕೆ ಅರ್ಥ. ಪ್ರಾಣ, ಅಭಿಮಾನಗಳನ್ನು ನಿತ್ಯ ಸಮರ್ಪಿಸಿ, ಬಯಸದೆ ಬಂದುದ (ಕೀರ್ತಿ) ಶಿವಪ್ರಸಾದವೆಂದು ಬಗೆದು, ಒಲ್ಲೆನೆಂಬ ವೈರಾಗ್ಯ-ಬೇಕೆಂಬ ಕಾಯಗುಣ ಈ ಉಭಯಕ್ಕೂ ಒಳಗಾಗದೆ, ನಾಲ್ಕುದಿನ ಬದುಕಿದರೂ ಲೇಸೆನಿಸಿಕೊಂಡು ಬದುಕಬೇಕೆಂಬ ಛಲ ಉಳ್ಳ ಶಿವಕಾಂತೆ, ಲೇಸಬಯಸುತ್ತ, ಎಲ್ಲರಿಂದ ಲೇಸು ಲೇಸೆನಿಸಿಕೊಂಡ, ಯಾರಿಗೂ ಹೊರೆಯಾಗದೆ ಸರ್ವರಿಗೆ 'ನೆರಳಾಗಿ' ವಿಶ್ವಕ್ಕೆ ಮಾತೆಯಾಗಿರುವ 'ರತ್ನ' ವೆಂಬ ಶಿಲ್ಪಶಿಲೆಯನ್ನು ಸೃಷ್ಟಿಕರ್ತ ಸಚ್ಚಿದಾನಂದ ಚಿನ್ಮೂಲಾದ್ರಿಯಲ್ಲಿ ೧೯೪೬, ಮಾರ್ಚ ೧೩ರಂದು ಸೃಷ್ಟಿಸಿದ [ಆಶ್ಚರ್ಯಕರ ಸಂಗತಿಯೆಂದರೆ ಈ 'ರತ್ನ' ಕ್ಕೆ ನಿಮಿತ್ತೋಪದಾನ ಕಾರಣ

ರಾದ ಮಾತಾ ಪಿತರು. ೮00ವರ್ಷಗಳ ಹಿಂದಣ ಆಧ್ಯಾತ್ಮಕ್ರಾಂತಿಯೋಗಿ ಬಸವಣ್ಣ ಮತ್ತು ಅವರ ಧರ್ಮಪತ್ನಿ ಗಂಗಾಂಬಿಕೆಯರ ಹೆಸರನ್ನು ಹೋಲುವ, ಲಿಂಗೈಕ್ಯರಾದ ಶರಣ ಬಸಪ್ಪನವರು ಮತ್ತು ಶರಣೆ ಗಂಗಮ್ಮನವರು]. ವಿಶ್ವವಿಭೂತಿ ಬಸವಣ್ಣನವರು ಆ ಪರವಸ್ತುವಿನ ಚಿಕ್ಕಳಿಯಾದ : ರತ್ನಳೆಂಬ ಶಿಲೆಯನ್ನು ಲೋಕೋದ್ಧಾರ ಗೈಯಲೆಂದು ಆರಿಸಿಕೊಂಡು. ಶಿಥಿಲಗೊಂಡ ನವದೃಷ್ಟಿಕೋನದ ವಿಶ್ವಧರ್ಮವನ್ನು ವಿಶ್ವದಾದ್ಯಂತ ಪಸರಿಸಲೆಂದು ಅಪ್ರತಿಮ ಚತುರತೆಯಿಂದ ಕಟೆದು ನಿಲ್ಲಿಸಿದರು, ಈ ಭವ್ಯ - ದಿವ್ಯ ಮೂರ್ತಿಯನ್ನು: ಭಕ್ತಿ- ಜ್ಞಾನ - ವೈರಾಗ್ಯಗಳ ತ್ರಿಕೂಟವಾದ, ತ್ರಿಪುಟಿಯುಳಿದ ತ್ರಿನೇತ್ರಿ ಪೂಜ್ಯ ಮಾತಾಜಿಯನ್ನು.

'ಬೆಳೆವ ಸಸಿಯ ಗುಣ ಮೊಳಕೆಯಲ್ಲಿ ' ಎಂಬಂತೆ ' ರತ್ನ ' ಶಿವಬಾಲೆಯಾಗಿಯೇ ಬಾಲ್ಯಜೀವನವನ್ನು ಕಳೆದುದು. ಶಾಲಾ ಕಾಲೇಜು ಮುಗಿಸುವ ವೇಳೆಗಾಗಲೇ ಅಂತರ್ಮುಖಿಯಾಗಿದ್ದು ಹುಟ್ಟು ಸಾಹಿತಿಯಾಗಿದ್ದರು. ಅನಿತರಲ್ಲಿ ಪ್ರವಚನದ ಸಲುವಾಗಿ ಚಿತ್ರದುರ್ಗಕ್ಕೆ ಅಭಿನವ ಸ್ವಾಮಿವಿವೇಕಾನಂದರೆಂದು ಖ್ಯಾತಿವೆತ್ತಿರುವ, ಬಸವಣ್ಣನವರ ಬೆಸನು ಕೈಕೊಂಡು ವಿಶ್ವಧರ್ಮ ಪಸರಿಸುತ್ತಿರುವ ಪೂಜ್ಯ ಶ್ರೀಸದ್ಗುರು ಲಿಂಗಾನಂದ ಸ್ವಾಮಿಗಳ ಆಗಮನ. ಪ್ರವಚನ ಶ್ರವಣದ ನಂತರ ಬೈಚಿಟ್ಟ ಬಯಕೆಯಂತಿದ್ದ ವೈರಾಗ್ಯ ಪ್ರಕಟಗೊಳ್ಳಲು ಬಂಧುಗಳ ಮಮತೆಯ ವಜ್ರಪಂಜರದಿಂದ ' ರತ್ನದರಗಿಳಿಯ ' ನಿರ್ಗಮನ ; ಇದುವೇ ಆಧ್ಯಾತ್ಮಶೃಂಗಕ್ಕೆ ಮೊದಲ ಸೋಪಾನ, ದಿವ್ಯ ಪ್ರತಿಭೆಯನ್ನು ಗುರುತಿಸಿದ ಸ್ವಾಮೀಜಿಯವರಿಂದ ದೀಕ್ಷೆ ಪಡೆದು ಗುರುಕರಕಮಲ ಸಂಜಾತೆಯಾಗಿ ಗುರುವಿಗೇ ಮಾತೆಯಾಗಿ ನಂತರ ಇಡೀ ವಿಶ್ವಕ್ಕೆ ಮಾತೆಯಾದ ಮಹಾಚೇತನ. ಹತ್ತೊಂಭತ್ತನೆಯ ವಯಸ್ಸಿಗೇ ಸನ್ಯಾಸ ಸ್ವೀಕರಿಸಿ, ಬಸವಣ್ಣನವರ ಕೂರ್ಮೆಯ ಕಂದ, ವೈರಾಗ್ಯನಿಧಿ ಅಕ್ಕಮಹಾದೇವಿಯ ಕಾರುಣ್ಯ ಪಡೆದ ಸೋದರಿ, ಸಚ್ಚಿದಾನಂದನ ನೆಚ್ಚಿನ ಸತಿ, ಮಾತೆ ಮಹಾದೇವಿಯಾದರು ; ಪರಮ ಶಿವಯೋಗಿಣಿಯಾದರು ! ಅಕ್ಕನಂತೆ ಗುರುಗಳ ' ಮುಡಿಗೆ ಹೂವ ತರುವೆನಲ್ಲದೆ ಹುಲ್ಲ ತಾರೆನು' ಎಂದು ಪ್ರತಿಜ್ಞೆಗೈದ ವೀರವಿರಾಗಿಣಿ ಮಾತಾಜಿ. ಇಷ್ಟೇ ಅಲ್ಲ, ಕಿತ್ತೂರ ರಾಣಿ ಚನ್ನಮ್ಮನಂತೆ ಕೆಚ್ಚೆದೆಯುಳ್ಳವರು. ಇವರ ವ್ಯಕ್ತಿತ್ವ ಬಹುಮುಖ ಪ್ರತಿಭೆಯಿಂದ ಕೂಡಿದುದು : ಅಪೂರ್ವ, ಅನುಕರಣೀಯ ಮತ್ತು ಉಪಮಾತೀತ. ದೈವಸಂಕಲ್ಪದಂತೆ ನೆಪಮಾತ್ರಕ್ಕೆ ಎಂ. ಎ. (ತತ್ತ್ವಶಾಸ್ತ್ರ) ಮಾಡಿ ಪ್ರಥಮ ಸ್ಥಾನ ಗಳಿಸಿದರು. ಮಹಿಳಾ ಜಗದ್ಗುರು ಪೀಠ ಸ್ಥಾಪಿಸುವೆನೆಂದು ' ಶ್ರೀ ಬಸವೇಶ್ವರರ ಅಷ್ಟ ಶತಮಾನೋತ್ಸವ 'ದ ಆಚರಣೆಯ ದಿನ ಘೋಷಿಸಿದ ಮಾತಾಜಿ ಕೆಲವೇ ತಿಂಗಳುಗಳ ನಂತರ ಅದನ್ನು ಧಾರವಾಡದಲ್ಲಿ ಸ್ಥಾಪಿಸಿದರು. ಬಸವಣ್ಣನವರು

ಚಿತ್ರರಿಸಿದ ಅನುಭವ ಮಂಟಪದ ಅಮೂಲ್ಯ ಸಂದೇಶಗಳು ಮುಂಕಾಗಿ ಹೋಗಬಾರದೆಂದು, ಪುನಃಶ್ಚೇತನಗೊಳಿಸಲು ಬಸವನಟ್ಟಿದ ಈ ಚಿಜ್ಯೋತಿ ತನ್ನ ಜೀವನವನ್ನು ಆ ಮಹಾ ಗುರುವಿನ ಅಡಿದಾವರೆಗಳಲ್ಲಿ ಅರ್ಪಿಸಿಕೊಂಡು ಅವನ ದಿವ್ಯ ನೆನಹನ್ನು ಹಾಸಿಕೊಂಡು, ಹೊದ್ದುಕೊಂಡು ಅವನ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆದು - ನುಡಿದು, ವಿಶ್ವಧರ್ಮ ಸಂದೇಶವನ್ನು ವಿಶ್ವದಾದ್ಯಂತ ಪಸರಿಸುತ್ತ 'ಬಸವನ ಭಾಗ್ಯ' ಎಂದೆನಿಸಿದ್ದಾರೆ.

ಮಾತಾಜಿಯವರ ಪ್ರವಚನಾಮೃತವರ್ಷಧಾರೆಯನ್ನು ಸವಿಯಬಲ್ಲವರಿಗೆ ಅದರ ಪರಿಚಯದ ಅವಶ್ಯಕತೆಯೆಲ್ಲಿದೆ ? ಆದರೆ ಅದರ ಪರಿಣಾಮವಿಷ್ಟು—ಮನ ಮಿಡಿಸುವ, ಆಧ್ಯಾತ್ಮತತ್ತ್ವರಸಭರಿತವಾದ ಆ ಮಾತಿನ ಮೋಡಿಗೆ ಮರುಳಾಗಿ ಮೈಸೂರು. ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು ಮುಂತಾದ ನಗರಗಳ ಜನತೆ ಬೀಳ್ಕೊಡಿಗೆ ಸಮಾರಂಭದ ದಿನ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. 'Woman thy, name is jealousy' ಎಂಬ ಮಾತಿಗೆ ಮಾತಾಜಿ ಹೊರತಾಗಿದ್ದಾರೆ ! ಏಕೆಂದು, ಹೇಗೆಂದು ಕೇಳುವಿರಾ ? ವೈರಾಗ್ಯಪಥದಲ್ಲಿ ಹೆಜ್ಜೆ ಇಟ್ಟಾಗ ತಾನು ಅತ್ತು ಪರಮಾತ್ಮನಿಗಾಗಿ ಹಂಬಲಿಸಿ, ಪರಮಾನಂದವ ಪಡೆದ ಸಚ್ಚಿದಾನಂದಾರ್ಪಿತ ಸುಮ ಈಗ ತಾನು ನಗುತ್ತ, ಮನುಕುಲವು ಮಹಾದೇವನಿಗೆ ಹಂಬಲಿಸುವಂತೆ, ಅಳುವಂತೆ ಮಾಡಿ, ಪರಮಾನಂದ ಪ್ರಭುವಿನ ಪ್ರೇಮದಲ್ಲಿ ಪಾಲು ಪಡೆಯುವಂತೆ ತಾನೇ ಕೈಹಿಡಿದು ಕರೆದೊಯ್ಯುತ್ತಿರುವ ಧೀರೆ, ಧೀಮಂತ ಅಭಿನವ ಅಕ್ಕಮಹಾದೇವಿಯಾಗಿದ್ದಾರೆ ! ಮಹಾದೇವನ ಈ ಮಣಿಹವನ್ನು ಶಿರದಲ್ಲಿ ಹೊತ್ತು ಅವಿರತವಾಗಿ ಪೂರೈಸಲು ಆತ್ಮಬಲ ಇನ್ನಾರಲ್ಲಿದೆ ?

ಇನ್ನು ಇವರ ಸಾಹಿತ್ಯಶಕ್ತಿಯ ಬಗ್ಗೆ ಹೇಳಬೇಕೆ? ಸುಯಿಧಾನ ಸುಗ್ರಂಥಮಾಲೆಯ ಪುಷ್ಪಗಳನ್ನೆಣಿಸಿ. (ನಲವತ್ತಕ್ಕೂ ಹೆಚ್ಚು) "ಮಾತಾಜಿ, ನಿಮ್ಮ ವಯಸ್ಸೆಷ್ಟು?" ಎಂದು ಕೇಳಿದ ಸದ್ಭಕ್ತರೊಬ್ಬರು. ಮಾರ್ಚ್ ೧೩ರಂದು ಮೂವತ್ತೂರು ವರ್ಷಗಳು ತುಂಬುವುದೆಂದು ತಿಳಿದಾಗ ಮೂಗಿನ ಮೇಲೆ ಬೆರಳನ್ನಿಟ್ಟುಕೊಂಡರು. ವಯೋಮಾನವನ್ನು ಮೀರಿಸಿದೆ ಇವರ ಗ್ರಂಥಗಳ ಸಂಖ್ಯೆ! ಇಷ್ಟೇ ಅಲ್ಲ ಇವರ ನಿಶಿತಮತಿ ಎವರೆಡಿ ಬ್ಯಾಟರಿ ! ಮೂಡ್ ಇದ್ದಾಗ ಸಾಹಿತ್ಯ ರಚನೆಗೆ ತೊಡಗುವವರು ಸಾಕಷ್ಟಿದ್ದಾರೆ. ಆದರೆ ಸದಾಕಾಲ, ಹೆಚ್ಚಿನ ಕಾರ್ಯ ಒತ್ತಡಗಳ ಮಧ್ಯೆಯೂ ಇವರಂತೆ ಸಾಹಿತ್ಯ ರಚನೆ ಮಾಡುವವರು ಅತಿ ವಿರಳ. ಸುಯಿಧಾನ ಸುಗ್ರಂಥಮಾಲೆಯಲ್ಲಿ ಅರಳುತ್ತಿರುವ ಒಂದೊಂದು ಕೃತಿಪುಷ್ಪವೂ ಸಾಹಿತ್ಯ ಸೌಂದರ್ಯದಿಂದ ತುಂಬಿ, ಜ್ಞಾನಸೌರಭವ ಬೀರುತ್ತ, ಆಧ್ಯಾತ್ಮ ಮಕರಂದವನ್ನು ಜನತೆಗೆ ನೀಡುತ್ತಿದೆ. ಈ ಮಾತಿಗೆ ಸಾಕ್ಷಿ

ಯಾಗಿ ಆಧ್ಯಾತ್ಮತತ್ತ್ವ ಪ್ರಧಾನವಾದ 'ತರಂಗಿಣಿ'; ವೈಚಾರಿಕತೆ ಪ್ರಧಾನವಾದ 'ಹೆಪ್ಪಿಟ್ಟಹಾಲು'—ಇವೆರಡೇ ಸಾಕು. ಜೇಂಗೊಡಗಳಂತೆ ಇವಿದ್ದರೆ ಇನ್ನುಳಿದ ಹೊತ್ತಿಗೆಗಳು ತಾವೇನೂ ಕಡಿಮೆಯಿಲ್ಲವೆಂದು ಸಮಷ್ಟಿಯ ಉದ್ಧಾರಕ್ಕೆ ಮೈವೆತ್ತು ವಿಚಾರ ಪ್ರಚೋದಕವಾಗಿ ನಿಂತಿವೆ. ರಾಷ್ಟ್ರಕವಿ ಕುವೆಂಪುರವರು ಆಧ್ಯಾತ್ಮದರಮನೆಯಿಂದ ಹೊರಹೊಮ್ಮುವ 'ಕಲ್ಯಾಣಕಿರಣ' ವನ್ನು ಪ್ರಶಂಸಿಸಿ ಅದರಲ್ಲಿ ಪ್ರಕಟಗೊಳ್ಳುವ "ಬಸನ ಬೀಡಿನಿಂದ ಆಂಗ್ಲನಾಡಿಗೆ" ಲೇಖನದ ವೈಖರಿಗೆ ಮಾರುಹೋಗಿದ್ದೇನೆ ಎಂದುದು, ಇವುಗಳೆಲ್ಲವರ ಹಿಂದಿರುವ ಶಿವಕವಿಯತ್ರಿಯ ಜ್ಞಾನಗಂಗೋತ್ರಿಯ ಅಪೂರ್ವ ಪ್ರತಿಭೆಗೆ ಸಾಕ್ಷಿಯಾಗಿದೆ. ತನ್ನ ಕಾರ್ಯಾಗಾರದಲ್ಲಿ ತಯಾರಾದ ಪ್ರಣತೆಗಳನ್ನೆಲ್ಲ ಅನ್ಯರಿಗೆ ಕೊಟ್ಟು ತಾನೊಂದನ್ನೂ ಹಚ್ಚಿಕೊಳ್ಳಲು ಅಶಕ್ತನಾಗಿರುವ ಬಡ ಕುಂಬಾರನಂತಲ್ಲ ಈ ಮಾತಾಜ್ಯೋತಿ. ಪ್ರವಚನ. ಧರ್ಮಗ್ರಂಥ ರಚನೆ, ಧರ್ಮ ಪ್ರಚಾರಕರ ತರಬೇತಿ ಮತ್ತು ಮನೆಮನೆಗಳ ಬಾಗಿಲಿಗೂ ಹರಿಯುತ್ತಿರುವ ಜ್ಞಾನವಾಹಿನಿ 'ಕಲ್ಯಾಣಕಿರಣ' ಮಾಸಪತ್ರಿಕೆ ಸಂಪಾದನೆ. ಹೀಗೆ ಬಹುಮುಖವಾಗಿ ಕರುನಾಡಿನಾದ್ಯಂತ (ಪರನಾಡಿಗೂ) ಜ್ಞಾನವನ್ನು ಪಸರಿಸಿ, ತಾನುರಿವ ಜ್ಯೋತಿಯಾಗಿ ಮತ್ತೆ ಅಸಂಖ್ಯಾತ ಜ್ಯೋತಿಗಳನ್ನು ಬೆಳಗಿಸುತ್ತಿರುವಂತಹ ಪರಂಜ್ಯೋತಿ. "ಅಯ್ಯಾ ನಿಮ್ಮ ಶರಣರು ಪಾದವಿಟ್ಟುದು ಅವಿಮುಕ್ತ ಕ್ಷೇತ್ರ" ಎಂದು ಅಕ್ಕಮಹಾದೇವಿ ಹೇಳಿದಂತೆ ಮಾತಾಜಿಯವರು ಶ್ರೀಪಾದವಿಟ್ಟಾಗ ಧಾರವಾಡದಲ್ಲಿ "ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ" ನಿರ್ಮಾಣವಾಯಿತು. ಬೆಂಗಳೂರಿನಲ್ಲಿ "ಬಸವ ಮಂಟಪ" ವಾಗಿ ಮುಮುಕ್ಷುಗಳಿಗೆ ಆಶ್ರಯತಾಣವಾಗಿದೆ. ಕೆಂಗೇರಿಯ ಸನಿಹದಲ್ಲಿದ್ದು ಕಾಯಕ ಜೀವಿಗಳನ್ನು ಕೈ ಚಾಚಿ ಕರೆಯುತ್ತಿದೆ. "ಬಸವ ಗಂಗೋತ್ರಿ".

ಧರ್ಮ ಜಾಗೃತಿಯ ಕ್ಷೇತ್ರದಲ್ಲಿ ಮಾಡಿರುವ ಪವಾಡದಂತೆ. ಬಸವಣ್ಣನವರನ್ನು ನೆರೆನಂಬಿರುವ ಮಾತಾಜಿಯವರಿಂದ ಆಧ್ಯಾತ್ಮ ಕ್ಷೇತ್ರದಲ್ಲಿಯೂ ಆಗಿರುವ ಪವಾಡಗಳೆಷ್ಟೋ ? ಒಂದು ಕಡೆ, ಅದ್ಭುತವಾಗಿ ಸಮಾರಂಭ ನಡೆಯಬೇಕಾದ ಸಂದರ್ಭದಲ್ಲಿ ಭಯಾನಕ ವರ್ಷಧಾರೆಯು ಆರಂಭವಾದಾಗ ಸಾಮೂಹಿಕ ಪ್ರಾರ್ಥನೆ ಮಂತ್ರ ಜಪದಿಂದ ಅದನ್ನು ನಿಲ್ಲಿಸಿದ್ದು: ಅದೇ ರೀತಿ ತಾಂಡೂರಿನಲ್ಲಿ ಒಮ್ಮೆ ಮಳೆ ಬರದೆ ಪೈರು ಒಣಗುತ್ತ ಇದ್ದಾಗ, ಭಕ್ತ ವೃಂದದ ಕೋರಿಕೆಯ ಮೇರೆಗೆ ಮಳೆ ತರಿಸಿದ್ದು; ಹಾಸನದಲ್ಲಿ ಇಬ್ಬರು ಸದ್ಭಕ್ತರ ಕನಸಿನಲ್ಲಿ ಮಾತಾಜಿಯವರೊಮ್ಮೆ ಕಾಣಿಸಿಕೊಂಡು ವಿಶೇಷ ಸೂಚನೆ ನೀಡಿದ್ದು, ನಂತರ ಕನಸು ನಿಜರೂಪವ ಪಡೆದದ್ದು; ಶಿವಮೊಗ್ಗದಲ್ಲಿ ಬುದ್ಧಿವಿಕಲ್ಪವಾದವರೊಬ್ಬರನ್ನು ಮಂತ್ರೋಪದೇಶದಿಂದ ಚೇತರಿಸಿಕೊಳ್ಳುವಂತೆ ಮಾಡಿದುದು; ಮಾತಾಜಿಯವರು ಭಸ್ಮಪೂಸಿ ಸಂಕಲ್ಪ

ಮಾಡಿದಾಗ ಮೂರು ವರ್ಷಗಳಿಂದ ಪ್ರಜ್ಞಾಶೂನ್ಯಳಾಗಿದ್ದ ಮೈಸೂರಿನ ಒಬ್ಬ ಸ್ತ್ರೀಗೆ ಪ್ರಜ್ಞೆ ಮರುಕಳಿಸಿದುದು; ಇನ್ನೂ ಆಶ್ಚರ್ಯಕರ ಘಟನೆ ಎಂದರೆ, ಪ್ರವಚನ ಕೇಳಲು ಟೌನ್‌ಹಾಲ್ ಮೈದಾನಕ್ಕೆ ದೇವಮ್ಮ ಎನ್ನುವವರೊಬ್ಬರು ಬರುತ್ತಿದ್ದಾಗ, ಕತ್ತಲೆಯಲ್ಲಿ ಕಾಣದೆ ಗುಂಡಿಯಲ್ಲಿ ಬಿದ್ದರು. ಆಗ ಆ ತಾಯಿ ಬಸವ ಮಂತ್ರ [ಮಾತಾಜಿಯವರು ಪ್ರವಚನದಲ್ಲಿ ಹೇಳಿದ ರೀತಿಯಲ್ಲಿ] ಜಪಿಸಿದಾಗ ಕಾಣದ ಶಕ್ತಿಯೊಂದು ಅವರ ಕೂದಲನ್ನು ಹಿಡಿದು ಮೇಲೆ ಎತ್ತಿ ಹಾಕಿದಂತಾದದ್ದು; ಬಸವಣ್ಣನವರ ಹೆಸರಿನಲ್ಲಿ ಹರಕೆ ಹೊತ್ತು ಸಂಕಲ್ಪ ಮಾಡಿದಾಗ ಮೈಸೂರಿನ ಶರಣದಂಪತಿಗಳಾದ ಸರಸ್ವತಿಬಾಯಿ-ತುಕಾರಾಂ ಎಂಬುವವರಿಗೆ ಬರಲಾರದೆಂದೇ ತಿಳಿದಿದ್ದ, ಕೈ ಬಿಟ್ಟು ಹೋಗಿದ್ದ ಸಾಲದ ಹಣ [4,000 ರೂ] ಹಿಂತಿರುಗಿ ಬಂದುದು [ಅವರು ಮಾಡಿಕೊಂಡಿದ್ದ ಹರಕೆಯ ಮೇರೆಗೆ ಅದೇ ದಿನ ಆ ಹಣ ವನ್ನು ಮಾತಾಜಿಯವರಿಗೆ ಅರ್ಪಿಸಿದರು.] ಇಂತಹ ಪವಾಡಗಳನೇಕವು ಮೈಸೂರಿನಲ್ಲಿ ಮತ್ತು ಇತರೆಡೆಯಲ್ಲಿ ನಡೆದಿವೆ

ಮರ್ತ್ಯದ ಕರ್ತಾರನ ಕಮ್ಮಟದಲ್ಲಿ ಸಲುವ ನಾಣ್ಯವಾಗಿ, ಜಂಗಮದೀಕ್ಷೆ ಪಡೆದ ದಿನ ಆಧ್ಯಾತ್ಮ ಪ್ರಪಂಚದಲ್ಲಿ ಸ್ತ್ರೀಸ್ವಾತಂತ್ರ್ಯಕ್ಕೋಸ್ಕರ ಫಲ ತೊಟ್ಟ ಪರಮ ಶಿವಶರಣೆ ಇಂದು ಭಕ್ತಸ್ತೋಮದಿಂದ ಹಿರಿದಾದ ಬೆಂಬಲ, ಕೀರ್ತಿ ದೊರೆಯುತ್ತಿರುವಾಗ ಹಿಗ್ಗದೆ, ನೋವು-ನಿಂದನೆಗಳು ಬಂದಾಗ ಕುಗ್ಗದೆ, ಕಾಣದ ಕೈಲಾಸಕ್ಕೆ ಕೈ ಚಾಚದೆ. ನೆತ್ತರಿನ ಪ್ರತಿ ಬಿಂದುವನ್ನು ಬಸವ ತತ್ವ ಪ್ರಸರಣಕ್ಕೆ ಮುಡಿಪಾಗಿಟ್ಟು. ಸಚ್ಚಿದಾನಂದನ ಕರುಣೆಯ ಮಹಾಪೂರವೊಂದೇ ಸಾಕೆಂದು ಸುಯಿಧಾನಿಗಳಾಗಿ, ಪೂಜ್ಯ ಮಾತಾಜಿ ಆಧ್ಯಾತ್ಮಶೃಂಗದ ತುತ್ತ ತುದಿಯಲ್ಲಿ ನಿಂತು ವಿಶ್ವಧರ್ಮ ಪತಾಕೆ ಹಿಡಿದು ನಿಜ ಧರ್ಮದ ಅರಿವನ್ನು ಸರ್ವರಲ್ಲಿ ಉಂಟು ಮಾಡಲು ಅವಿಶ್ರಾಂತವಾಗಿ ಶ್ರಮಿಸು ತ್ತಿದ್ದಾರೆ. ಜನತೆಯು ಆಧ್ಯಾತ್ಮ ಪಥದಲ್ಲಿ ಸಾಗಿ ಸದ್ಭಕ್ತಿ ಸುಜಲದ ಮನಸಾರೆ ಈಂಟಿ, ದೇವೋನ್ಮಾದದ ನಿಬ್ಬೆರಗಿನಲ್ಲಿ ನಿಲುಗಡೆ ಹೊಂದುವಂತೆ ಮಾಡುವುದೇ ಅವರ ಜೀವಿತದ ಉದ್ದೇಶ. ಈ ಧರ್ಮ ಜ್ಯೋತಿಯು ಬಹುಕಾಲ ಪ್ರಜ್ವಲಿಸುವಂತೆ ರಕ್ಷಿ ಸೆಂದು ಪರಮಪೂಜ್ಯ ಮಾತಾಜಿಯವರ ಜನ್ಮದಿನೋತ್ಸವದ ಸಂದರ್ಭದಲ್ಲಿ ಪರಮ ಪ್ರಭುವಿನ ಪಾದಾರವಿಂದದಲ್ಲಿ ಶಿರವಿಟ್ಟು ಬೇಡಿಕೊಂಡು ಈ ನುಡಿನೈವೇದ್ಯವನ್ನ ರ್ಪಿಸುವೆ ಮಾತೆಯ ಶ್ರೀಚರಣಕೆ.

ಕಾಲಿಗೆ ಚಪ್ಪಲಿ ಇಲ್ಲವೆಂದು ಅಳುತ್ತಿದ್ದೆ. ಒಮ್ಮೆ ಕಾಲುಗಳೇ ಇಲ್ಲದ ಒಬ್ಬಾತನನ್ನು ನೋಡಿದೆ. ನನ್ನ ಅಳು ಬತ್ತಿ ಹೋಯಿತು

—ಪರ್ಶಿಯನ್ ಗಾದೆ.

ಎಳಂದೂರು ಮಠಾಧ್ಯಕ್ಷ ಷಡಕ್ಷರಿದೇವನ ಮೂರು ಮುಖಗಳು

ಎನ್. ಬಸವಾರಾಧ್ಯ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಷಡಕ್ಷರಿಯ ಹೆಸರು ಬಹುಕಾಲ ನಿಲ್ಲುವಂತಹುದು. ಹದಿನಾಲ್ಕನೆಯ ಶತಮಾನಕ್ಕೆ ಕಣ್ಮರೆಯಾಗಿದ್ದ ಚಂಪೂ ಶೈಲಿಗೆ ಜೀವದಾನ ಮಾಡಿದವನು ಈತ. ಕ್ರಿಸ್ತಶಕ ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಷಡಕ್ಷರಿಯು ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಶಬರಶಂಕರ ವಿಳಾಸ ಎಂಬ ಕರ್ನಾಟಕ ಚಂಪೂ ಗ್ರಂಥಗಳನ್ನೂ, ಕವಿಕರ್ಣರಸಾಯನ. ಭಕ್ತಾಧಿಕ್ಯ ರತ್ನಾವಳಿ. ಶಿವಸ್ತವ ಮಂಜರಿ. ವೀರಭದ್ರೋದಾಹರಣ ಗದ್ಯ. ಪಾದಪೂಜಾಸ್ತೋತ್ರ, ಶಿವಮಾನಸ್ತೋತ್ರ ಇಷ್ಟಲಿಂಗಾಷ್ಟಕ. ಷಡಕ್ಷರ ಮಂತ್ರಸ್ತೋತ್ರ. ಬಸವಾಷ್ಟಕ. ನೀಲಾಂಬಿಕಾಸ್ತೋತ್ರ ವೀರಭದ್ರದಂಡಕ, ಶಿವಾಧಿಕ್ಯ ರತ್ನಾವಳಿ. ಮುಂತಾದ ಸಂಸ್ಕೃತಗ್ರಂಥಗಳನ್ನೂ ರಚಿಸಿದ್ದಾನೆ.

ಷಡಕ್ಷರಿಯ ಜನ್ಮಸ್ಥಳ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿರುವ ದನುಗೂರು. ಈತನ ತಂದೆ ತಾಯಿಗಳ ವಿಷಯ ತಿಳಿದುಬಂದಿಲ್ಲ. ಈತನ ಗುರು ಚಿಕವೀರ ದೇಶಿಕ. ಈ ಚಿಕವೀರದೇಶಿಕನ ಕೀರ್ತಿ ದಿಗಂತವಿಶ್ರಾಂತವಾಗಿತ್ತು. ಅದನ್ನೇ ಕವಿ—

ಮಣಿಯದ ಮಾನ್ಯರಿಲ್ಲ ತಲೆವಾಗದ ವಾದಿಗಳಿಲ್ಲ ಬಂದು ಸಂ
ದಣಿಸದ ಸಂತರಿಲ್ಲ ನಡೆನೋಳ್ಪಡೆ ಬಾರದ ರಾಜರಿಲ್ಲ ಕೂ
ರ್ತಣಿಸದ ಧೀರರಿಲ್ಲ ನುತಿಗೆಯ್ಯದ ಕಬ್ಬಿಗರಿಲ್ಲ ಸಾರಸ
ದ್ಗುಣಮನೆನಲ್ ಧರಾತಳದೊಳೊಪ್ಪಿದನಾ ಚಿಕವೀರದೇಶಿಕಂ।

ಎಂದು ಹೇಳಿದ್ದಾನೆ.

ಷಡಕ್ಷರಿ ಎಳಂದೂರು ಮಠಕ್ಕೆ ಸ್ವಾಮಿಯಾಗಿ ಅಲ್ಲಿಯೇ ಸಮಾಧಿಯನ್ನು ಹೊಂದಿದಂತೆ ತಿಳಿದುಬರುತ್ತದೆ. ಆತನನ್ನು ಎಳಂದೂರಿಗೆ ಕರೆಸಿಕೊಂಡು ಅಲ್ಲಿ ಮಠ ವನ್ನು ಕಟ್ಟಿಸಿಕೊಟ್ಟು ಅಲ್ಲಿಯೇ ನಿಲ್ಲುವಂತೆ ಮಾಡಿದವನು ಹದಿನಾಡ ದೊರೆಯಾದ ಮುದ್ದ ರಾಜನೆಂದು ಕೆಲವರು ಹೇಳುತ್ತಾರೆ. ಇದು ಹೇಗಾದರೂ ಇರಲಿ. ಈತನು ಎಳಂದೂರು ಷಡಕ್ಷರಿಯೆಂದೇ ಪ್ರಖ್ಯಾತಿಗೊಂಡಿದ್ದಾನೆ.

ಪ್ರಾಚೀನ ಕವಿಗಳಲ್ಲಿ ಹರಿಹರನ ಪ್ರಭಾವ ಈತನ ಮೇಲೆ ಸಾಕಷ್ಟಾಗಿದೆ. "ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ" ಕಾವ್ಯವನ್ನು ರಚಿಸಬಾರದೆಂದು ಹರಿಹರ ಹೇಳಿದ್ದನ್ನೇ ಈತನೂ ಪ್ರತಿಪಾದಿಸಿದ್ದಾನೆ.

ಧರೆಯೊಳ್ ಮೇಣ್ ಪುಟ್ಟಿ ಪುಟ್ಟುತ್ತಿರುಳ್ವ ನರರ ಮೇಲುರ್ಬಕಬ್ಬಂಗಳಂ ಬಿ
ತ್ತರಿಸುತ್ತಂ ಸಪ್ರಯಾಸಂ ಕೆಲಕೆಲರಕಟಾ ಕಬ್ಬಿಗರ್ ಕೆಟ್ಟುಪೋದರ್
ಹರಿದೇವಂ ದೇವದೇವೋತ್ತಮನ ಶರಣರಂ ಪಾಡಿ ಕೈವಲ್ಯ ಲಕ್ಷ್ಮೀ
ವರನಾದಂ ಮತ್ತಮಂಗತ್ಯಧಿಕ ಶಿವಕವೀಂದ್ರಂಗದಾರ್ ಸಾಟಿಯಪ್ಪರ್

ಆದರಂತೆಯೇ ತಾನೂ ಸಹ ಸುರರು ನರರ ಮೇಲೆ ಕೃತಿಯನ್ನು ರಚಿಸುವುದಿಲ್ಲ ವೆಂಬುದನ್ನು:

ರಸೆಯೊಳ್ ರಸವತ್ಕವಿತೆಯ
ನುಸಿರಲ್ಪಡೆದಸಮನಯನನಂ ಪೊಗಳದೆ ಮಾ
ನಿಸರಂ ಸುರರಂ ಪೊಗಳ್ವುದು
ಕಸವರಮಂ ಕಳೆದು ಕಸಮನಾಂತವೊಲಕ್ಕುಂ

ಅದರಿಂದೆ ಮಹಿತ ಮಹಿಮಾ
ಸ್ಪದನಂ ಶಿವನಂ ತದೀಯ ಶರಣವ್ರಜಮಂ
ಪದೆದು ಮುದಮೊದವೆ ಬಲ್ಲಂ
ದದೆ ನುತಿಪೆಂ ನುತಿಸೆನುಳಿದ ಸುರರಂ ನರರಂ

ಈ ಪದ್ಯಗಳಲ್ಲಿ ವಿವರಿಸಿದ್ದಾನೆ.

ಷಡಕ್ಷರಿಯು ತನಗೆ ಕೇವಲ ಹನ್ನೊಂದನೆಯ ವರ್ಷದಲ್ಲಿಯೇ ಕವಿತಾಶಕ್ತಿ ಯುಂಟಾಯಿತೆಂದು:

ನೆರೆದೇಕಾದಶವರ್ಷದ
ಹರೆಯದೊಳಭವಪ್ರಸಾದ ಬಲದಿಂ ಕವಿತಾ
ತರುಣಿ ಷಡಕ್ಷರದೇವನ
ನೆರವಿಲ್ಲದೆ ವರಯಿಸಿರ್ದಳರಿದೆನೆ ವಿಬುಧರ್

ಹೇಳಿಕೊಂಡಿದ್ದಾನೆ. ತನ್ನನ್ನು 'ಉಭಯ ಕವಿತಾವಿಶಾರದ' ಎಂದೂ ಸಂಬೋಧಿಸಿ ಕೊಂಡಿದ್ದಾನೆ. ಕಾವ್ಯರಚನಾಶಕ್ತಿ ಸುಲಭಸಾಧ್ಯವಲ್ಲವೆಂಬುದನ್ನು:

ಆರಾರೇರರ್ ಶಾಸ್ತ್ರ
ಶ್ರೀರೋಹಣಗಿರಿಯನಲ್ಲಿ ನವಕವಿತಾಚಿಂ
ತಾರತ್ನಂ ದೊರೆಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಳದೊಳ್

ಕಲಿಸಿದೊಡಂ ಬರ್ಕುಮೆ ಸ
ಲ್ಲಲಿತ ಕವಿತ್ವಂ ನಿಸರ್ಗಸುಭಗಂ ರಮಣೀ
ವಿಲಸಿತ ರತಿರಸರಸಿಕತೆ
ತಲೆದೋರ್ಪುದು ತಾನೆ ಕಲಿಸಲೇಂ ಬಂದಪುದೇ

ಈ ಪದ್ಯಗಳಲ್ಲಿ ಸ್ಪಷ್ಟಪಡಿಸಿದ್ದಾನೆ. ಷಡಕ್ಷರಿಯ ಕವಿತಾ ಶಕ್ತಿ ಪಾಂಡಿತ್ಯ ಗಳನ್ನು ವಿದ್ವಾಂಸರೇ ಮುಕ್ತಕಂಠದಿಂದ ಹೊಗಳಿದ್ದಾರೆಂಬುದಕ್ಕೆ ಒಂದು ಐತಿಹ್ಯವು ಜನಜನಿತವಾಗಿದೆ.

ಒಮ್ಮೆ ಜೈನಮತಸ್ಥರು ನೇಮಿಚಂದ್ರ ವಿರಚಿತ 'ಲೀಲಾವತಿ' ಪ್ರಬಂಧವನ್ನು ಆನೆಯ ಮೇಲೆ ಅಂಬಾರಿಯಲ್ಲಿರಿಸಿಕೊಂಡು ಆ ಆನೆಯ ಹೊಟ್ಟೆಯ ಕೆಳಗೆ ಒಂದು ಬೆಳ್ಳಿಯ ತೊಟ್ಟಿಲನ್ನು ಕಟ್ಟಿ ಬೀದಿಯಲ್ಲಿ ಮೆರವಣಿಗೆ ಮಾಡಿಕೊಂಡು ಷಡಕ್ಷರಿಯ ಮಠದ ಮುಂದೆ ನಿಲ್ಲಿಸಿದರಂತೆ. ಆಗ ಷಡಕ್ಷರಿಯ ಶಿಷ್ಯರು ಬಂದು ಆ ಗುಂಪಿನ ಮುಖ್ಯಸ್ಥರನ್ನು ಆ ಮೆರವಣಿಗೆಯ ಬಗೆಗೆ ಕೇಳಲಾಗಿ ಅದು ಕವಿಕುಂಜರ ಲೀಲಾವತಿಯ ಮೆರವಣಿಗೆ ಎಂದೂ ರಸಭರಿತವಾದ ಆ ಗ್ರಂಥದ ರಸವು ಸ್ರವಿಸಿ ಹೋಗಬಾರದೆಂದು ಆನೆಯ ಹೊಟ್ಟೆಗೆ ತೊಟ್ಟಿಲನ್ನು ಕಟ್ಟಿರುವುದಾಗಿಯೂ ತಿಳಿಸಿದರು. ಶಿಷ್ಯರಿಂದ ಎಲ್ಲ ವಿಚಾರ ವನ್ನೂ ಅರಿತ ಷಡಕ್ಷರಿಯು ಲೀಲಾವತಿಪ್ರಬಂಧಕ್ಕಿಂತಲೂ ಹೆಚ್ಚು ರಸಭರಿತವಾದ ಗ್ರಂಥವಿರುವಾಗ ಇದಕ್ಕೆ ಇಷ್ಟು ಬಹುಮಾನ ಸಲ್ಲುವುದೆ ಎಂದು ಹೇಳಿ ಒಂದು ವರ್ಷ ದೊಳಗಾಗಿ ಅದಕ್ಕಿಂತಲೂ ರಸಭರಿತವಾದ ಕಾವ್ಯವನ್ನು ಕಾಶಿಯಿಂದ ತರಿಸಿ ವಿದ್ವಾಂಸರ ಸಭೆಯಲ್ಲಿ ಓದುವುದಾಗಿಯೂ ಲೀಲಾವತಿಯೇ ರಸಭರಿತವಾದದ್ದೆಂದು ವಿದ್ವಾಂಸರು ನಿರ್ಧರಿಸಿದರೆ ಮೆರವಣಿಗೆ ಮಾಡಬಹುದೆಂದೂ ತಿಳಿಸಿ ಆ ಮೆರವಣಿಗೆ ಯನ್ನು ತಡೆದು ಹಿಂತಿರುಗಿಸಿದನಂತೆ. ರಾಜಶೇಖರವಿಳಾಸವನ್ನು ಒಂದು ವರ್ಷದೊಳ ಗಾಗಿ ರಚಿಸಿ ವಿದ್ವಾಂಸರ ಸಭೆಯಲ್ಲಿ ಮೊದಲು ಲೀಲಾವತಿಯ ಭಾಗಗಳನ್ನು ಓದಿಸಿ ತರುವಾಯ ರಾಜಶೇಖರ ವಿಳಾಸದಲ್ಲಿನ ಆಯಾ ವರ್ಣನಾಂಶಗಳನ್ನು ಓದಿ, ತಾನೇ ಅರ್ಥವನ್ನು ಹೇಳಿ ಈ ಎರಡರಲ್ಲಿ ಯಾವುದು ರಸಭರಿತವಾದುದೆಂದು ಕೇಳಿದನಂತೆ. ಅದಕ್ಕೆ ವಿದ್ವಾಂಸರೆಲ್ಲರೂ ಲೀಲಾವತಿಯು ಕನ್ನಡದಲ್ಲಿ ಪ್ರೌಢವಾದಾಗ್ಯೂ ರಾಜ

ಶೇಖರ ವಿಳಾಸದಷ್ಟು ರಸಪುಷ್ಟಿಯುಳ್ಳುದಲ್ಲವೆಂದು ಹೇಳಿ ಷಡಕ್ಷರದೇವನ ಕವಿತಾ ವಿಷಯವಾಗಿ :

ಜಿಹ್ವಾಂತರ್ನಟದಂಬುಜಾಸನವಧೂಪಾದಪ್ರವಾಳ ಸ್ಫುರ
ನ್ಮಂಜೀರದ್ವಯ ಮಂಜುನಾದ ವಿಭವಶ್ರೀ ಗರ್ವಸರ್ವಂಕಷಾಃ
ಜೀಯಾಸುರ್ಭವತ ಷಡಕ್ಷರ ವಿಭೋ ಕುಂದಾರಮಂದಾವಳೀ
ಮಂದಾರದ್ರುಮಮಂಜರೀ ಮಧುಝುರೀ ಮಾಧುರ್ಯಧುರ್ಯಾಗಿರಃ

ಎಂದು ಯೋಗ್ಯತಾಪತ್ರವನ್ನು ಕೊಟ್ಟರಂತೆ. ಈ ಮೇಲಿನ ಐತಿಹ್ಯದ ಸತ್ಯಾ ಸತ್ಯವು ಎಂತಾದರೂ ಇರಲಿ. ಷಡಕ್ಷರಿಯು ಪ್ರತಿಭಾವಂತನೂ ಪ್ರಭಾವಶಾಲಿಯೂ ಆಗಿದ್ದನೆಂಬುದು ಮಾತ್ರ ನಿರ್ವಿವಾದವಾದುದು.

ರಾಜಶೇಖರ ವಿಳಾಸ ಷಡಕ್ಷರಿಯ ಪ್ರಪ್ರಥಮ ಕಾವ್ಯ. ಈ ಕಾವ್ಯದ ಕಥಾವಸ್ತು ಸುಪ್ರಸಿದ್ಧವಾದುದು. ಪಂಚಾಕ್ಷರೀಮಂತ್ರ ಮಾಹಾತ್ಮ್ಯವನ್ನು ಸಾರುವುದೇ ಇದರ ಪರಮೋದ್ದೇಶ. ರಾಜಶೇಖರ ವಿಳಾಸ ಹದಿನಾಲ್ಕು ಆಶ್ವಾಸಗಳುಳ್ಳ ಒಂದು ಚಂಪೂ ಕಾವ್ಯ. ಇದರಲ್ಲಿ ಸಾಂಪ್ರದಾಯಕವಾದ ಅಷ್ಟಾದಶವರ್ಣನೆಗಳಿವೆ. ತಮಿಳಿನಲ್ಲಿ ಪಿಳ್ಳೈನೈನಾರ' ಹೇಳಿದ್ದ ಈ ಕಥೆಯನ್ನು ಗುಬ್ಬಿಯ ಮಲ್ಲಣಾರ್ಯನು ಕನ್ನಡದಲ್ಲಿ 'ಭಾವಚಿಂತಾರತ್ನ'ವೆಂಬ ವರ್ಣಕ ಗ್ರಂಥವಾಗಿ ಮಾಡಿದನು. ಅದನ್ನೇ ಹರೀಶ್ವರನ ಕವಿತಾಮಾರ್ಗವನ್ನು ಅನುಸರಿಸಿ ತಾನು ವಸ್ತುಕರೂಪವಾಗಿ ರಚಿಸಿದಂತೆ ಕವಿ ಹೇಳಿಕೊಂಡಿದ್ದಾನೆ. ರಾಜಶೇಖರ ವಿಳಾಸದ ಕಥಾವಸ್ತು ಇಂತಿದೆ :

ಧರ್ಮದೇವಪುರದಲ್ಲಿ ಚೋಳ ಚಕ್ರವರ್ತಿಯಾದ ಸತ್ಯೇಂದ್ರನು ರಾಜ್ಯಭಾರವನ್ನು ಮಾಡುತ್ತಿದ್ದನು. ಆತನ ಪತ್ನಿ ಅಮೃತವತೀದೇವಿ. ಮಂತ್ರಿ ಪತಿಮೋಹಿ. ಈ ಮಂತ್ರಿಯಂ ಮಗ ಮಿತವಚನ. ರಾಜದಂಪತಿಗಳಿಗೆ ಮಕ್ಕಳಿರಲಿಲ್ಲ. ಚಿದ್ಘನ ಶಿವಾಚಾರ್ಯರೆಂಬ ಗುರುಗಳ ಅನುಗ್ರಹದಿಂದ ಅವರಿಗೆ ಪುತ್ರಸಂತಾನವಾಗುವುದು. ಈತನೇ ಕಥಾನಾಯಕನಾದ ರಾಜಶೇಖರ. ರಾಜಪುತ್ರನಾದ ರಾಜಶೇಖರನೂ ಮಂತ್ರಿಸುತನಾದ ಮಿತವಚನನೂ ಅಣ್ಣತಮ್ಮಂದಿರಂತೆ ಅನ್ಯೋನ್ಯವಾಗಿ ಒಡನುಂಡು ಒಡನಾಡಿ ಒಡನೆ ಬೆಳೆಯುವರು. ಹೀಗಿರುವಲ್ಲಿ ಒಮ್ಮೆ ಸಿಂಹಳೇಂದ್ರನಿಗೂ ಸತ್ಯೇಂದ್ರನಿಗೂ ಮನಸ್ತಾಪವಾಯಿತು. ಆಗ ರಾಜಶೇಖರನು ಸಿಂಹಳೇಂದ್ರನ ಮೇಲೆ ನಡೆತಿತ್ತಿ ಹೋಗಿ ಆತನನ್ನು ಸೋಲಿಸುವನು. ಆದರೆ ಆ ಸಿಂಹಳೇಂದ್ರನ ಪುತ್ರಿಯ ಅನುಪಮ ಸೌಂದರ್ಯಕ್ಕೆ ತಾನು ಸೋತುಹೋಗುವನು. ಕವಿ ಇದನ್ನು ಚಾತುರ್ಯದಿಂದ :

ಈ ಲಲನೆಯ ಸೌಂದರ್ಯಂ
ಸೋಲಿಸಿದುದು ಗಡ ಮದೀಯ ಮನವನದಾರ್ಗಂ
ಸೋಲದುದಂ ಶಿವಶಿವ ಶಶಿ
ಮೌಲಿಯ ಮಾಯೆಯನದಾರೋ ಮೀರಲ್ ಬಲ್ಲರ್

ಈ ರೀತಿ ಹೇಳಿದ್ದಾನೆ.

ರಾಜಶೇಖರನ ಮತ್ತು ಸಿಂಹಳೇಂದ್ರನ ಪುತ್ರಿ ಸರ್ವಮಂಗಳೆಯ ವಿವಾಹ ನಡೆದು ಕೆಲಕಾಲ ಅವರು ಭೋಗಭಾಗ್ಯಗಳನ್ನು ಅನುಭವಿಸುವರು. ಹೀಗಿರಲು ಒಂದು ದಿನ ರಾಜಶೇಖರನಿಗೆ ಪುರವೀದೀವಿಹಾರವನ್ನು ಮಾಡಿಕೊಂಡು ಬರಬೇಕೆಂಬ ಬಯಕೆಯಾಯಿತು. ಸಿಂಧುದೇಶದಿಂದ ಕಾಣಿಕೆಯಾಗಿ ಬಂದಿದ್ದ ದಿವ್ಯಾಶ್ವಗಳನ್ನೇರಿ ರಾಜಪುತ್ರ ಮಂತ್ರಿಪುತ್ರರಿಬ್ಬರೂ ಹೊರಟರು. ವಿಹಾರವನ್ನು ಮುಗಿಸಿಕೊಂಡು ಹಿಂತಿರುಗುತ್ತಿದ್ದಾಗ ರಾಜಶೇಖರನ ಅಶ್ವವು ಬೆದರಿ ತಿರಿಕೊಳವಿನಾಚಿಯೆಂಬ ಶಿವಭಕ್ತೆಯ ಮಗನನ್ನು ತುಳಿದು ಕೊಂದು ಬಿಡುತ್ತದೆ. ಮಗನನ್ನು ಕಳೆದುಕೊಂಡ ತಿರಿಕೊಳವಿನಾಚಿಯ ಕರುಣಾಜನಕವಾದ ಪ್ರಲಾಪ ಎಂತಹವರ ಕಲ್ಲೆದೆಯನ್ನೂ ಕರಗಿಸುತ್ತದೆ. ರಾಜಶೇಖರವಿಳಾಸದಲ್ಲಿ ಈ ಪ್ರಸಂಗವು ಒಂದು ರಸಘಟ್ಟಿಯಂತಿದೆ. ಆರು ಜನ ಮಕ್ಕಳನ್ನು ಕಳೆದುಕೊಂಡು, ತನ್ನ ಜೀವಿತಕ್ಕೆ ಊರೆಗೋಲಾಗಿ ಉಳಿದಿದ್ದ ಮತ್ತೊಬ್ಬ ಮಗನನ್ನೂ ಕಳೆದುಕೊಂಡಾಗಿನ ಆಕೆಯ ಸ್ಥಿತಿ ಹೃದಯವಿದ್ರಾವಕವಾಗಿದೆ. ತನ್ನ ಮಗ ಶಂಕರನ ಸುಳಿವನ್ನು ಕಾಣದೆ :

ತನುಭವನೆಲ್ಲಿದನೆಲ್ಲಿದ
ನಿನಿವಾತಿನ ನೀರನೆಲ್ಲಿದಂ ಮೆಲ್ನಗೆಯಿಂ
ಪಿನ ಸೊಬಗನೆಲ್ಲಿದಂ ಚೆ
ಲ್ವಿನ ಕಣಿಯೆಲ್ಲಿದನೊ ಮನ್ಮನೋಂಬುಜಹಂಸಂ

ಹೀಗೆ ಗೋಳಿಡುತ್ತ ಆತನು ಸತ್ತನೆಂಬ ವಾರ್ತೆಯನ್ನು ಕೇಳಿ :

ಹಾ ಮಗನೆ ಹಾ ಮನೋಜ್ಞನೆ
ಹಾ ಮುದ್ದುಗ ಹಾ ಮದೇಭಗತಿ ಮಂಜುಳ ಹಾ
ಹಾ ಮಧುರವಾಣಿ ಹಾ ಮ
ತ್ಪ್ರೇಮಾಸ್ಪದ ಹಾ ಮದೀಶವಂಶಲಲಾಮ
ನೋಡುವ ಕಣ್ಣೊಡೆದುದು ಮಾ
ತಾಡಿಪ ನಾಲಿಗೆ ಮುರುಂಟಿದುದು ನಿನ್ನಂ ನಯಂ

ಡಾಡುವ ಕಯ್ಯುಡಿದುದು ಸಲೆ
ಪಾಡುವ ಬಾಯ್ ಬೆಂದುದಣುಗ ನೀಂ ನುಡಿಯಲೊಡಂ

ಆರೊಡನುಸಿರ್ವೆಂ ದುಃಖಮ
ನಾರುಂಟೆನಗಕಟ ಮಗನೆ ಮಗನೆ ಮನೋಜಾ
ರಿಯ ಕೃಪೆ ತಪ್ಪಿದ ಬಳಿ
ಕಾರಾದೊಡಮೇನೊ ನಿನ್ನನೇಂ ಕಾಣಪರೇ

ಎಂದು ಪ್ರಲಾಪಿಸುವಳು. ಕೊನೆಗೆ ಆ ಸತ್ತಮಗನನ್ನೆತ್ತಿಕೊಂಡು ರಾಜಾಸ್ಥಾನಕ್ಕೆ ಹೋಗುವಳು. ಆ ವೇಳೆಗೆ ನಡೆದ ಸಂಗತಿಯನ್ನೆಲ್ಲ ಅರಿತ ಸತ್ಯೇಂದ್ರನು ಆಕೆಯನ್ನು ಸಂತೈಸಿ ರಾಜಶೇಖರನ ಶಿರಸ್ಸನ್ನು ಕತ್ತರಿಸುವಂತೆ ಮಂತ್ರಿಗೆ ಆಜ್ಞಾಪಿಸುವನು. ಧರ್ಮಸಂಕಟಕ್ಕೊಳಗಾದ ಮಂತ್ರಿ ಆ ಕಾರ್ಯವನ್ನು ಮಾಡಲಾರದೆ ತನ್ನ ಶಿರವನ್ನೇ ಕಡಿದುಕೊಳ್ಳುವನು. ಅದನ್ನು ಕೇಳಿದ ರಾಜನು ಸಂದಾಯಿ ಎಂಬ ಭೃತ್ಯನಿಗೆ ಆ ಕೆಲಸವನ್ನು ವಹಿಸುವನು. ಸಂದಾಯಿ ರಾಜಶೇಖರನನ್ನು ವಧಾಸ್ಥಾನಕ್ಕೆ ಒಡಗೊಂಡು ಹೋಗಿ ವಧಿಸುವುದಕ್ಕೆ ಮುನ್ನ ಪಂಚಾಕ್ಷರಿಯನ್ನು ಜಪಿಸುವಂತೆ ಆತನಿಗೆ ಹೇಳಿ ವಧಿಸುವನು. ದೇಹದಿಂದ ಬೇರೆಯಾದ ರಾಜಶೇಖರನ ರುಂಡವು ಪಂಚಾಕ್ಷರಿಯನ್ನು ಜಪಿಸುತ್ತಿತ್ತು. ಸಂದಾಯಿ ಆ ಶಿರವನ್ನು ಆಸ್ಥಾನಕ್ಕೆ ತಂದು ರಾಜನಿಗೆ ತೋರಿಸಲು ರಾಜನು ಅದಕ್ಕೆ ಕಾರಣವನ್ನು ಕೇಳುವನು. ಆಗ ಸಂದಾಯಿಯು ತನ್ನ ಶಿರವನ್ನೇ ಕಡಿದುಕೊಳ್ಳುವನು. ಆತನ ಶಿರವೂ ಪಂಚಾಕ್ಷರಿಯನ್ನೇ ಜಪಿಸುವುದು. ಮಂತ್ರಿ ಪತಿಮೋಹಿಯ ಶಿರವೂ, ಸತ್ತ ಬಾಲಕನ ಶಿರವೂ ಪಂಚಾಕ್ಷರಿಯನ್ನೇ ಜಪಿಸುವುವು. ಅದನ್ನೆಲ್ಲ ನೋಡುತ್ತಿದ್ದ ತಿರಿಕೊಳವಿನಾಚಿ ತನ್ನಿಂದ ಇಷ್ಟೆಲ್ಲ ಅನಾಹುತವಾಯಿತೆಂದು ತನ್ನ ಕೊರಳನ್ನೇ ಕಡಿದುಕೊಳ್ಳುವಳು. ಆಕೆಯ ಶಿರವೂ ಪಂಚಾಕ್ಷರಿಯನ್ನೇ ಜಪಿಸುವುದು. ಆಗ ಸತ್ಯೇಂದ್ರ ಮಿತವಚನರೂ ತಮ್ಮ ಶಿರಗಳನ್ನು ಕತ್ತರಿಸಿಕೊಳ್ಳಲು ಅವರ ಶಿರಗಳೂ ಪಂಚಾಕ್ಷರಿಯನ್ನೇ ಜಪಿಸುವುವು. ಕೊನೆಗೆ ಅಮೃತಮತೀದೇವಿಯೂ ತನ್ನ ಶಿರವನ್ನು ಕಡಿದುಕೊಳ್ಳಲುದ್ಯುಕ್ತಳಾದಳು. ಆಗ ಪಾರ್ವತಿ ಪರಮೇಶ್ವರರು ಪ್ರತ್ಯಕ್ಷರಾಗಿ ಸತ್ತಿದ್ದ ಎಲ್ಲರನ್ನೂ ಬದುಕಿಸಿ ಕೈಲಾಸಕ್ಕೆ ಕೊಂಡೊಯ್ಯುವರು.

ರಾಜಶೇಖರವಿಳಾಸದ ರಚನಾಕಾಲವನ್ನು ಕವಿ ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

ಸುರುಚಿರಶಾಲಿವಾಹನಶಕಾನ್ವಿತ ರತ್ನ ಸಮುದ್ರ ಬಾಣಭೂ
ಪರಿಗಣನಾಂಕ ಬಂಧುರಜಯಾಬ್ದದ ಮಾಘದ ಶುಕ್ಲ ಪಕ್ಷವಿ
ಸ್ಫುರಿತ ತೃತೀಯೆಯಲ್ಲಿ ಬುಧವಾರದೊಳೀಕೃತಿ ಪೂರ್ಣಮಾಯ್ತು, ಶಂ
ಕರ ಶಿವಲಿಂಗದಂಘ್ರಿಕೃಪೆಯಿಂದ ಷಡಕ್ಷರದೇವ ನಿರ್ಮಿತಂ

ಇದು ಕ್ರಿ.ಶ. ೧೬೫೪ನೆಯ ವರ್ಷವೆಂದು ವಿದ್ವಾಂಸರು ನಿರ್ಧರಿಸಿದ್ದಾರೆ.

ವೃಷಭೇಂದ್ರ ವಿಜಯವು ನಲವತ್ತೆರಡು ಆಶ್ವಾಸಗಳುಳ್ಳ ಒಂದು ಬೃಹತ್ಕಾವ್ಯ. ಇದಕ್ಕೆ ಬಸವರಾಜ ವಿಜಯ ಎಂದೂ ಪರ್ಯಾಯ ನಾಮವಿದೆ. ಇದರಲ್ಲಿ ಜಗಜ್ಯೋತಿ ಬಸವೇಶ್ವರನ ಚರಿತೆಯು ಆದ್ಯಂತವಾಗಿ ವರ್ಣಿತವಾಗಿದೆ. ಮೊದಲು ಪಾಲ್ಕುರಿಕೆ ಸೋಮನಾಥನು ತೆಲುಗಿನಲ್ಲಿ ಬಸವಪುರಾಣವನ್ನು ಬರೆದನು. ಅದನ್ನೇ ಭೀಮಕವಿ ಕನ್ನಡದಲ್ಲಿ ವರ್ಣಕಗ್ರಂಥವಾಗಿ ಮಾಡಿದನು. ಶಂಕರಕವಿ ಅದನ್ನು ಸಂಸ್ಕೃತಕ್ಕೆ ಪರಿವರ್ತಿಸಿದನು. ಆ ಕಥೆಯನ್ನೇ ತಾನು ಚಂಪೂರೂಪದಲ್ಲಿ ರಚಿಸಿದಂತೆ ಷಡಕ್ಷರಿ ಹೇಳಿಕೊಂಡಿದ್ದಾನೆ. ಬಸವೇಶ್ವರನ ಕಥೆ, ಅತ್ಯಂತ ಪ್ರಸಿದ್ಧವೂ ಪ್ರಚಲಿತವೂ ಆದುದು. ವೃಷಭೇಂದ್ರ ವಿಜಯವು ಒಂದು ಕಥಾಸರಿತ್ಸಾಗರ. ಇದರಲ್ಲಿ ಬಸವೇಶ್ವರನ ಕಥೆಯ ಜೊತೆಗೆ ಬರುವ ಹಲವಾರು ಶಿವಭಕ್ತರ ಕಥೆಗಳು ಮೂಲಕಥೆಗೆ ಪರಿಪೋಷಕವಾಗಿವೆ. ವೃಷಭೇಂದ್ರ ವಿಜಯದ ಕೋಳೂರು ಕೊಡಗೂಸಿನ ಚಿತ್ರ ಎಂತಹವರ ಮನವನ್ನಾದರೂ ಸೂರೆಗೊಳ್ಳುತ್ತದೆ.

ಕೋಳೂರಿನಲ್ಲಿ ಶಿವದೇವನೆಂಬ ಮಹಾಭಕ್ತನಿದ್ದನು. ಆತನು ಪ್ರತಿನಿತ್ಯವೂ ಆ ಊರಿನಲ್ಲಿದ್ದ ಕಲ್ಲಿನಾಥನಿಗೆ ಹಾಲನ್ನರ್ಪಿಸುವ ವ್ರತವನ್ನು ಕೈಗೊಂಡಿದ್ದನು. ಒಂದು ಸಲ ಶಿವದೇವನು ಪತ್ನೀಸಮೇತನಾಗಿ ಪರಸ್ಥಳಕ್ಕೆ ಹೋಗಬೇಕಾಯಿತು. ಕಲ್ಲಿನಾಥನಿಗೆ ಹಾಲನ್ನರ್ಪಿಸಿ ಬರುವ ಕೆಲಸವನ್ನು ತನ್ನ ಮುದ್ದು ಮಗಳಾದ ಕೊಡಗೂಸಿಗೆ ವಹಿಸಿ ಹೋಗುವನು. ತಂದೆಯ ಆಣತಿಯಂತೆ ಕೊಡಗೂಸು ಮಜ್ಜನವನ್ನು ಮಾಡಿ ಭಸ್ಮವನ್ನಿಟ್ಟುಕೊಂಡು ಹಾಲನ್ನು ಹದವಾಗಿ ಕಾಸಿ ಹೊಂಬಟ್ಟಲಲ್ಲಿ ಅದನ್ನು ಕೊಂಡು ಶಿವಾಲಯಕ್ಕೆ ಬರುವಳು. ಕಲ್ಲಿನಾಥನ ಮುಂದೆ ಆ ಹೊಂಬಟ್ಟಲನ್ನಿಟ್ಟು ಹಾಲನ್ನು ಸೇವಿಸುವಂತೆ ಹೇಳಿ ಮರೆಯಾಗಿ ನಿಲ್ಲುವಳು. ತುಸುಹೊತ್ತಾದ ಮೇಲೆ ಬಂದು ನೋಡುವಳು. ಹಾಲು ಮೊದಲಿದ್ದಂತೆಯೇ ಇರಲು ಆ ಕೊಡಗೂಸು ಭಯದಿಂದಲೂ ಭ್ರಾಂತಿಯಿಂದಲೂ :

ಏಂ ಕಾರಣಮೀ ಪಾಲಂ
ನೀಂ ಕುಡಿಯದೆ ಸುಮ್ಮನಿರ್ಪೆಯಕಟಕಟೆನಗಾ

ಟಂಕಮನಾಗಿಪುದುಚಿತಮೆ
ಶಂಕರ ನೀ ಪೇಳ್ವುದೆಂದು ಮುಗುಳ್ದಿಂತೆಂದಳ್

ಪಸಿವೇನಾಗದೋ ದೇವ ಕೇಳ್ ನಿನಗೆ ಪಾಲೇಂ ಕಾಯದೋ ಪೊತ್ತಿತೋ
ಬಿಸುಪಾರಿರ್ದುದೋ ಕಮ್ಮನಾಗದೊ ಲಸತ್ತಿಂಪೇರದೋ ಕಣ್ಗೆ ರಂ
ಜಿಸದೋ ಮೇಣ್ ಪೊಗೆ ಸುತ್ತಿದತ್ತೋ ಪೆರರಿಂ ಕಣ್ಣೆಂಜಲಾದತ್ತೊ ಬಲ್
ಬಿಸಿಯೂಗಿರ್ದುದೊ ವಿಾಸಲೊಸರಿತೋ ಪೇಳೀಂಟದಿರ್ಪಂದಮಂ

ಹೀಗೆ ಪರಿಪರಿಯಾಗಿ ಶಿಶುಸಹಜವಾಗಿ ಕೇಳಿಕೊಳ್ಳುವಳು. ಆದರಿಂದ ಏನೂ ಪ್ರಯೋಜನವಾಗದಿರಲು ಕೊನೆಗೆ :

ಎನ್ನ ಮಾತನುಪೇಕ್ಷೆಗೆಯ್ಯದೆ ಪಾಲನೀಂಟಿದೊಡಯ್ಯ ಕೇಳ್
ನಿನ್ನನಾಂ ಕರೆದೊಯ್ವೆನೊಪ್ಪುವ ವೀರಭದ್ರನ ತೇರ್ಗೆ ಸಂ
ಪನ್ನ ಮುದ್ದುಗರುಪರ್ವಕೆನ್ನಯ ತಂದೆ ನಾಳೆನಗೀವ ರ
ತ್ನೋನ್ನತಾಭರಣಂಗಳಂ ನಿನಗೀವೆನಿಂದುಕಳಾಧರಾ

ಈ ರೀತಿ ಕಲ್ಲಿನಾಥನಿಗೆ ಆಶೆಯನ್ನು ತೋರಿಸುವಳು. ಇದಾವುದಕ್ಕೂ ಕಲ್ಲಿನಾಥನು ಜಗ್ಗದಿರಲು ಅತ್ತು ಗೋಳಾಡಿ ತನ್ನ ಹರಣವನ್ನೇ ಅರ್ಪಿಸಲು ಸಿದ್ಧಳಾಗುವಳು; ಆಗ ಪರಶಿವನು ಪ್ರತ್ಯಕ್ಷನಾಗಿ ಆ ಸುಧೆಯನ್ನೀಂಟಿದ ಮೇಲೆ ಕೊಡಗೂಸು ಅತನಿಗೆ :

ಜನಕಂ ಬಂದೊಡೆ ಪೇಳ್ದಪೆ
ನಿನಿತೆಲ್ಲಮನಯ್ಯ ಮುಳಿಯದಿರ್ ಬಳಿಕೆನಗುಂ
ನಿನಗಂ ಸಂವಾದಮುದುಂ
ಟೆನುತಂ ಪೊಡಮಟ್ಟು ನಗುತೆ ಮನೆಗೆಳ್ತಂದಳ್

ಈ ರೀತಿ ಹೇಳುವಳು. ಈ ಪ್ರಕರಣದಲ್ಲಿ ಶಿಶುಸಹಜವಾದ ಪ್ರವೃತ್ತಿಯನ್ನು ಚಿತ್ರಿಸಿರುವ ಷಡಕ್ಷರಿಯ ಪ್ರತಿಭಾಶ್ರೀಮಂತಿಕೆ ನಿಜಕ್ಕೂ ಶ್ಲಾಘ್ಯವಾದುದು.

ಶಬರಶಂಕರವಿಳಾಸವು ಐದು ಆಶ್ವಾಸವುಳ್ಳ ಒಂದು ಚಿಕ್ಕ ಗ್ರಂಥ. ಪರಶಿವನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಅನುಗ್ರಹಿಸಿದ್ದು ಈ ಕಾವ್ಯದ ಕಥಾವಸ್ತು. ಪರಶಿವನ ಪಂಚವಿಂಶತಿ ಲೀಲೆಗಳಲ್ಲಿ ಹದಿನೈದನೆಯದಾದ ಶಬರಲೀಲೆಯು ಇದರಲ್ಲಿ ವರ್ಣಿಸಲ್ಪಟ್ಟಿದೆ. ಷಡಕ್ಷರಿಗಿಂತ ಹಿಂದೆ ಪಂಪನ ವಿಕ್ರಮಾರ್ಜುನ ವಿಜಯ,

ಕುಮಾರವ್ಯಾಸನ ಭಾರತ, ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣವೇ ಮೊದಲಾದ ಕಾವ್ಯಗಳಲ್ಲಿ ಈ ಉಪಾಖ್ಯಾನವು ಬಂದಿದೆ.

ಅರ್ಜುನನು ರಿಪುಸಂಹಾರಕ್ಕಾಗಿ ಪರಶಿವನಿಂದ ಪಾಶುಪತಾಸ್ತ್ರವನ್ನು ಪಡೆಯಲು ಇಂದ್ರಕೀಲ ಪರ್ವತಕ್ಕೆ ಬಂದು ಘೋರ ತಪವನ್ನಾಚರಿಸುವನು. ಆತನ ತಪಸ್ಸಿನ ಉಗ್ರತೆಯನ್ನು ತಾಳಲಾರದೆ ತಾಪಸರೆಲ್ಲ ಈಶ್ವರನಿಗೆ ಮೊರೆಯಿಡುವರು. ಶಂಕರನು ಅವರನ್ನೆಲ್ಲ ಸಂತೈಸಿ ಶಬರರೂಪವನ್ನು ತಾಳಿ ಪಾರ್ವತಿಯೊಡನೆ ಇಂದ್ರಕೀಲ ಪರ್ವತಕ್ಕೆ ಬರುವನು, ಅಲ್ಲಿಯ ವನ್ಯಮೃಗಗಳನ್ನು ಬೇಟೆಯಾಡುತ್ತಾ ಬರುತ್ತಿರುವಾಗ ಒಂದೆಡೆ ಗಿರಿಕಂದರದಲ್ಲಿ ವಾಸಿಸುತ್ತಿದ್ದ ಮೂಕ ದಾನವನೆಂಬ ರಕ್ಕಸನ್ನು ಬೇಟೆಯ ಕಳವಳವನ್ನು ಕೇಳಿ ಮಹಾವರಾಹ ರೂಪದಿಂದ ಹೊರಕ್ಕೆ ಬಂದು ಶಬರಶಂಕರನ ಪರಿವಾರವನ್ನೆಲ್ಲ ಸೊಪ್ಪುಸದೆ ಮಾಡುವನು. ಅದನ್ನು ಕಂಡ ಈಶ್ವರನು ಆ ವರಾಹನ ಮೇಲೆ ದಿವ್ಯಬಾಣಗಳನ್ನು ಪ್ರಯೋಗಿಸುವನು. ಆ ಬಾಣಗಳ ಪೆಟ್ಟಿನಿಂದ ನೊಂದ ವರಾಹ ಅರ್ಜುನನು ತಪಸ್ಸು ಮಾಡುತ್ತಿದ್ದಲ್ಲಿಗೆ ಹೋಯಿತು ಭೀಕರಾಕಾರದ ವರಾಹನನ್ನು ಕಂಡ ಅರ್ಜುನನು ಬಾಣಪ್ರಯೋಗಮಾಡಿ ಅದನು ಉರುಳಿಸುವನು. ಅಷ್ಟರಲ್ಲಿ ಆ ಹಂದಿಯನ್ನೇ ಹುಡುಕಿಕೊಂಡು ಶಬರಶಂಕರನು ಅರ್ಜುನನಿದ್ದಲ್ಲಿಗೆ ಬರುವನು. ಅಲ್ಲಿ ಸತ್ತುಬಿದ್ದಿದ್ದ ಹಂದಿಯನ್ನು ತೆಗೆದು ಕೊಳ್ಳವಂತೆ ತನ್ನ ಗಣಗಳಿಗೆ ಬೆಸಸುವನು. ಆಗ ಅರ್ಜುನ ಅದು ತನ್ನ ಬಾಣದಿಂದ ಸತ್ತಿರುವುದೆಂದೂ ಅದನ್ನು ಮುಟ್ಟಕೂಡದೆಂದು ತಿಳಿಸುವನು. ಹೀಗೆ ಅರ್ಜುನನಿಗೂ ಶಂಕರನಿಗೂ ವಾಗ್ವಾದವಾಗಿ ಇಬ್ಬರೂ ಯುದ್ಧಕ್ಕೆ ತೊಡಗುವರು; ಅರ್ಜುನನ ಎಲ್ಲ ಅಸ್ತ್ರಗಳೂ ನಿಷ್ಫಲವಾದ ಮೇಲೆ ಕೊನೆಗೆ ಮುಷ್ಟಿಯುದ್ಧವನ್ನು ಮಾಡುವರು ಅದನ್ನು ಕವಿ :

ತಳಹತ್ತಂ ಧಣುವಟ್ಟಿ ಖೊಪ್ಪರಮುರೋಬಂಧಂ ಲತಾಬಂಧಮು
ಜ್ವಳ ಶಾಕಚರಬಂಧಮಾಯತಿಕೆಬಂಧಂ ಡೊಕ್ಕರಂ ಪಟ್ಟಿಸಂ
ವಳಯಾವೇಷ್ಟನಮಾಹತಂ ಭುಜಗಬಂಧಂ ತೋರಹತ್ತಂ ಶಿರೋ
ವಳಯಂ ಬಾಹುತಳಂ ಚಮತ್ಕರಿಸೆ ನಾನಾ ಕೌಶಲಂದೋರಿದರ್

ಈ ರೀತಿ ವರ್ಣಿಸಿದ್ದಾನೆ. ಈಶಾರ್ಜುನರ ಯುದ್ಧದಿಂದಾದ ಅನಾಹುತವನ್ನು:

ಪದಘಾತಕ್ಕೆ ಧರಾತಳಂ ಕುಸಿಯೆ ಕೂರ್ಮಂ ಕುರ್ಗೆ ಭೋಗೀಂದ್ರನ
ಗ್ಗದ ದೀರ್ಘಸ್ಪುಟ ಕಂಠದೋಳ್ ನೆಲಸೆ ಬಾಹುಭ್ರಾಂತಿ ಸಂಜಾತವಾ

ತದ ಘಾತಕ್ಕೆ ಪಯೋಧರಂ ಕೆದರೆ ಬಾನೊಳ್ ಜೀರ್ಣಪರ್ಣಂದಲೊ
ಡ್ಡಿದ ವಿದ್ಯಾಧರ ಪುಷ್ಪಕಂ ಜಗುಳೆ ಯುದ್ಧಂಗೈದ್ದರೀಶಾರ್ಜುನರ್

ಈ ಪದ್ಯದಲ್ಲಿ ವಿವರಿಸಿದ್ದಾನೆ. ಎಲ್ಲ ರೀತಿಯಿಂದಲೂ ಅರ್ಜುನನು ಪರಾಭವವನ್ನು ಹೊಂದಿದುದಕ್ಕೆ ಕಾರಣವೇನಿರಬಹುದೆಂಬುದನ್ನು ಕುರಿತು :

ಶಿವಪದಭಕ್ತಿಯಂ ತೊರೆದೆನೋ ಶಿವನಿಂದೆಯನೆಯ್ದೆ ಕೇಳ್ದೆನೋ
ಶಿವನಿಜಭಕ್ತರಂ ಪಳಿದೆನೋ ಶಿವಪೂಜೆಗೆಯ್ಯದನ್ನಮಂ
ಸವಿದೆನೊ ಶೈವಸುವ್ರತಮನಾಳ್ದೊಡೆವಿಟ್ಟೆನೋ ಪೂರ್ವಜನ್ಮದೊಳ್
ಶಿವಶಿವ ತಾನದಲ್ಲದೊಡೆ ಸಾರ್ಗುಮೆ ಸಂದೆನಗೀ ಪರಾಭವಂ

ಹೀಗೆ ಯೋಚಿಸುವನು. ಕೊನೆಗೆ ತನ್ನ ಇಷ್ಟದೈವವಾದ ಪರಶಿವನನ್ನು ಪೂಜಿಸಿ ತರುವಾಯ ತನ್ನ ಪರಾಕ್ರಮವನ್ನು ತೋರಿಸುವುದಾಗಿ ಆ ಶಬರ ಶಂಕರನಿಗೆ ತಿಳಿಸಿ ಅಲ್ಲಿಯೇ ಮಣಲಲಿಂಗವನ್ನು ಮಾಡಿ ಪೂಜೆಮಾಡುವನು. ತಾನು ಮಣಲಲಿಂಗದ ಮೇಲೆ ಸೂಡಿದ ಪುಷ್ಪಗಳು ಆ ಶಬರಶಂಕರನ ಮಂಡೆಯಲ್ಲಿ ಕಾಣಲು, ಅದನ್ನು ಖಚಿತಪಡಿಸಿಕೊಳ್ಳಲು ಆ ಲಿಂಗವನ್ನು ಮತ್ತೊಮ್ಮೆ ಪುಷ್ಪಗಳಿಂದ ಪೂಜಿಸುವನು. ಆಗಲೂ ಕೂಡ ಆ ಪುಷ್ಪಗಳು ಶಬರನ ಮಸ್ತಕದ ಮೇಲೆಯೇ ಕಾಣಿಸಿಕೊಳ್ಳಲು ಆಗ ಅರ್ಜುನನಿಗೆ ಜ್ಞಾನೋದಯವಾಗುವುದು. ತಾನು ಮಾಡಿದ ಅಕಾರ್ಯಕ್ಕಾಗಿ ಪರಿಪರಿಯಾಗಿ ಪಶ್ಚಾತ್ತಾಪಗೊಳ್ಳುವನು. ಪರಶಿವನು ಆತನನ್ನು ಸಂತೈಸಿ ಪಾಶುಪತಾಸ್ತ್ರವನ್ನು ಅನುಗ್ರಹಿಸುವನು. ಪಾರ್ವತಿಯು ಅಂಜನಾಸ್ತ್ರವನ್ನು ದಯಪಾಲಿಸುವಳು. ಅರ್ಜುನ, ಪಾರ್ವತಿಪರಮೇಶ್ವರರ ಆಶೀರ್ವಾದವನ್ನೂ ಅವರಿಂದ ದಿವ್ಯಾಸ್ತ್ರಗಳನ್ನೂ ಪಡೆದು ಹಿಂತಿರುಗುವನು.

ಷಡಕ್ಷರಿ ಪ್ರತಿಭಾವಂತನಾದ ಮಹಾಕವಿ. ಆತನು ರಚಿಸಿರುವ ಮೂರು ಚಂಪೂ ಕಾವ್ಯಗಳು ಆತನ ಅದ್ವಿತೀಯ ಪಾಂಡಿತ್ಯಕ್ಕೆ ನಿದರ್ಶನಗಳಾಗಿವೆ. ಆತನಿಗೆ ಸಂಸ್ಕೃತ ಕನ್ನಡ ಭಾಷೆಗಳೆರಡರಲ್ಲೂ ವಿಶೇಷವಾದ ಪಾಂಡಿತ್ಯವಿತ್ತು. ಆದುದರಿಂದಲೇ ಕನ್ನಡದಲ್ಲಾಗಲಿ ಸಂಸ್ಕೃತದಲ್ಲಾಗಲೀ ನಿರರ್ಗಳವಾಗಿ ಕಾವ್ಯವನ್ನು ರಚಿಸುವ ಸಾಮರ್ಥ್ಯವನ್ನು ಪಡೆದಿದ್ದನು. ಪ್ರಾಚೀನ ಕಥಾವಸ್ತುಗಳನ್ನೇ ಆರಿಸಿಕೊಂಡಿದ್ದರೂ ಅಲ್ಲಲ್ಲಿ ಮಾಡಿಕೊಂಡಿರುವ ಬದಲಾವಣೆಗಳಿಂದ ಆತನ ಕಾವ್ಯಗಳು ಇಂದಿಗೂ ಜೀವಂತವಾಗಿವೆ. ಷಡಕ್ಷರಿ ವರ್ಣನಾಪ್ರಿಯನಾದ ಕವಿ. ಆವೊಂದು ಸೂಕ್ಷ್ಮವಸ್ತುವನ್ನೇ ಆಗಲಿ ಮನಮುಟ್ಟುವಂತೆ ವರ್ಣಿಸುವ ಪರುಷಹಸ್ತ ಷಡಕ್ಷರಿ

ಯದು. ಆತನ ಕಂದಪದ್ಯಗಳು ಲಾಲಿತ್ಯದಿಂದಲೂ ಕೋಮಲತ್ವದಿಂದಲೂ ಕಂಗೊಳಿಸುತ್ತದೆ. ವಿರಕ್ತನಾದ ಷಡಕ್ಷರಿಗೆ ಯಾರ ಹಂಗೂ ಇರಲಿಲ್ಲ. ಹೇಳಬೇಕಾದುದನ್ನೆಲ್ಲಾ ಆತನು ದಿಟ್ಟತನದಿಂದ ಹೇಳಿದ್ದಾನೆ. ವೀರಶೈವರಿಗೆ ಪರಮಪೂಜ್ಯವಾದ ಕಥಾವಸ್ತುಗಳನ್ನೇ ಆರಿಸಿಕೊಂಡು ಬೃಹತ್ತು ಮಹತ್ತುಗಳುಳ್ಳ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನ ಹೆಸರನ್ನು ಶಾಶ್ವತಗೊಳಿಸಿದ್ದಾನೆ.

ಬೇಕಾಗಿದ್ದಾರೆ

‘ಬಸವ ಭಾರತಿ’ ವಸತಿ ಸಹಿತ ವಿದ್ಯಾಲಯಕ್ಕೆ

ಮಕ್ಕಳನ್ನು ಸೇರಿಸಲು ಬಯಸುವ ಪಾಲಕರಿಗೆ ಸೂಚನೆ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಆಶ್ರಯದಲ್ಲಿ, “ಬಸವ ಗಂಗೋತ್ರಿ” ನಿವೇಶನದಲ್ಲಿ ಇದೇ ಮೇ ೨೨ ರಿಂದ ೫ನೇ ತರಗತಿಯಿಂದ ಶಿಕ್ಷಣವನ್ನು ಆರಂಭಿಸಲಾಗುತ್ತಿದೆ.

೧. ರಾಜಧಾನಿಯೂ, ಸುಪ್ರಸಿದ್ಧ ಶಿಕ್ಷಣ ಕೇಂದ್ರವೂ ಆಗಿರುವ ಬೆಂಗಳೂರು ನಗರಕ್ಕೆ ಅತ್ಯಂತ ಸನಿಹದಲ್ಲಿರುವುದಲ್ಲದೇ ಬೆಂಗಳೂರು-ಮೈಸೂರು ರಸ್ತೆಯಲ್ಲಿರುವ ಕಾರಣ ವಾಹನ ಸೌಕರ್ಯ ತುಂಬಾ ಚೆನ್ನಾಗಿದೆ. ಬೆಂಗಳೂರಿನಿಂದ ಸತತವಾಗಿ ಸಿಟಿ ಬಸ್‌ಗಳ ಓಡಾಟವಿದೆ.

೨. ವಿದ್ಯಾರ್ಜನೆ ಮಾಡಬಯಸುವ ಮಕ್ಕಳು ನಗರದ ಸದ್ದುಗದ್ದಲಗಳಿಂದ ದೂರವಿರುವರು. ಆದರೆ ರಾಜಧಾನಿಯ ಸಂಪರ್ಕದಲ್ಲಿದ್ದು ಸಾಂಸ್ಕೃತಿಕ ಶಿಕ್ಷಣ ಪಡೆಯುವರು.

೩. ಉತ್ತಮ ಆಟದ ಬಯಲು, ಸ್ವಚ್ಛ ಹಿತಕರ ಹವೆ, “ಬಸವ ಗಂಗಾ” ನದಿಯ ತೀರಗಳು ವಿಶೇಷ ಆಕರ್ಷಣೆ.

೪. ಸ್ಪರ್ಧಾತ್ಮಕವಾಗಿ ಮಕ್ಕಳು ಮುಂದುವರಿಯಲೋಸುಗ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣವಿದ್ದರೂ, ಕನ್ನಡದ ಕಡ್ಡಾಯ ಅಧ್ಯಯನ, ಸಂಸ್ಕೃತದ ಐಚ್ಛಿಕ ಅಧ್ಯಯನ್ನು ಮಕ್ಕಳಿಗೆ ಒದಗಿಸಲಾಗುವುದು.

೫. ಮಕ್ಕಳು ಎಳೆಯ ವಯಸ್ಸಿನಿಂದಲೇ ಪ್ರೌಢ ಮಟ್ಟದ ಶಿಕ್ಷಣ ಸಜ್ಜನರ ಸಂಗ ಆದರ್ಶಗಳ ಚೌಕಟ್ಟಿನಲ್ಲಿ ಬೆಳೆಯುವ ಭಾಗ್ಯ ವಿಶೇಷ ಹೊಂದಿರುವರು.

೬. ಬುದ್ಧಿವಂತ ಮತ್ತು ಒಳ್ಳೆಯ ಅಂಕಗಳನ್ನು ಪಡೆದ ಮಕ್ಕಳಿಗೆ ಪ್ರವೇಶ ಪರೀಕ್ಷೆ ಇಟ್ಟು ಆರಿಸಲಾಗುವುದು. ಪಾಲಕರ ವಿಶೇಷ ಅಪೇಕ್ಷೆಯ ಮೇರೆಗೆ ಸಾಮಾನ್ಯ ಅಂಕಗಳನ್ನು ಪಡೆದ ಮಕ್ಕಳನ್ನು ತೆಗೆದು ಕೊಂಡರೂ ಅವರಿಗೆ ವಿಶೇಷ ತರಬೇತಿಯ ಯೋಜನೆ ಕಲ್ಪಿಸಲಾಗುವುದು.

ಇಂಥ ಆದರ್ಶ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಲಿಚ್ಛಿಸುವ ತಾಯಿ

ತಂದೆಯರು ಈಗಿನಿಂದಲೇ ವ್ಯವಹಾರ ಆರಂಭಿಸುವ ಮಾಹಿತಿ ತಾಳಬೇಕಲ್ಲದೆ ಪ್ರವೇಶ ಪರೀಕ್ಷೆಗಳಿಗಾಗಿ ಬೇಸಿಗೆ ರಜದಲ್ಲಿ ಮಕ್ಕಳನ್ನು ಸಿದ್ಧಗೊಳಿಸಬೇಕು. ೪ನೇಯ ಸ್ಟಾಂಡರ್ಡ್ ಮುಗಿಸುತ್ತಿರುವ ಮಕ್ಕಳ ತಾಯಿತಂದೆಯರು ವಿಶೇಷ ಗಮನವನ್ನು ಇತ್ತ ಕಡೆಗೆ ಹರಿಸಬೇಕು. ಮತ್ತು ಮಾರ್ಚ ೧೦ರ ನಂತರ ಪ್ರಾಸ್ಪೆಕ್ಟಸ್ ಪಡೆಯಲು ೩ ರೂಗಳನ್ನು ಕಳಿಸಿ, ವಿಶೇಷ ವಿವರಗಳನ್ನು ಪಡೆಯುವದೇ ಅಲ್ಲದೆ ಲಗತ್ತಿಸಿದ ಅರ್ಜಿ ಪತ್ರಗಳನ್ನು ಏಪ್ರಿಲ್ ೨೫ರ ಒಳಗೆ ತುಂಬಿ ಕಳಿಸಬೇಕು.

ತಡವಾಗಿ ಬಂದ ಅರ್ಜಿಗಳನ್ನು ಗಮನಿಸುವುದಿಲ್ಲ.

ಬಸವ ಮಂಟಪ
೨೪, ಎರಡನೆ ಬ್ಲಾಕ್, ಕಾರ್ಡ್ ರಸ್ತೆ
ರಾಜಾಜಿನಗರ. ಬೆಂಗಳೂರು-೫೬೦೦೧೦

ಕರೆಸ್ಪಾಂಡೆಂಟ್
ಬಸವ ಭಾರತಿ ವಿದ್ಯಾಲಯ

ಗ್ರಂಥಾಲಯಗಳಿಗೆ ‘ಕಲ್ಯಾಣ ಕಿರಣ’

ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಗ್ರಂಥಪಾಲಕರು ತಮ್ಮ ಪತ್ರ No. TA 2-3 - NPS - 55/11746/78 - 79 ದಿನಾಂಕ 21 - 2 - 1979ರ ಮೂಲಕ. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ-ನಗರ ಕೇಂದ್ರ ಗ್ರಂಥಾಲಯಗಳಿಗೂ, ಆಧ್ಯಾತ್ಮಿಕ ಪತ್ರಿಕೆ ‘ಕಲ್ಯಾಣ-ಕಿರಣ’ವನ್ನು ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆ ಈ ಅವಕಾಶವನ್ನು ಉಪಯೋಗಿಸಿಕೊಂಡು, ಎಲ್ಲಾ ನಗರ-ಜಿಲ್ಲಾ ಕೇಂದ್ರ ಗ್ರಂಥಾಲಯಗಳೂ ಕಲ್ಯಾಣ-ಕಿರಣಕ್ಕೆ ಚಂದಾದಾರರಾಗಬೇಕೆಂದು ವಿನಂತಿಸಿಕೊಳ್ಳುತ್ತೇವೆ. ವಾರ್ಷಿಕ ಚಂದಾ ಹನ್ನೆರಡು ರೂಪಾಯಿ ಇದ್ದು, ಪ್ರತಿ ತಿಂಗಳ ಒಂದನೇ ತಾರೀಖು ಬೆಂಗಳೂರಿನಿಂದ ಹೊರಡುವ, ಅರವತ್ತೆಂಟು ಪುಟಗಳ ಈ ಮಾಸಿಕ ಆಧ್ಯಾತ್ಮ - ಸಾಮಾಜಿಕ ವಿಷಯಗಳಿಗೆ ಮೀಸಲಾಗಿದ್ದು, ಪೂಜ್ಯ ಮಾತೆ ಮಹಾದೇವಿಯವರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದೆ. ಪತ್ರಿಕೆಯ ವಿಳಾಸ: ಕಲ್ಯಾಣ-ಕಿರಣ ಮಾಸಪತ್ರಿಕೆ, ನಂ. 24. ಕಾರ್ಡ್‌ರಸ್ತೆ. ಎರಡನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 10.

ವ್ಯವಸ್ಥಾಪಕರು

ಜಗದ್ಗುರು ಮಾತೆ ಮಹಾದೇವಿ


ಮಾತಿನ ಮರ್ಮ

೨೧ ನುಡಿದರೆ ಮುತ್ತಿನ ಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದರೆ ಲಿಂಗಮೆಚ್ಚಿ ' ಅಹುದಹುದೆನ್ನಬೇಕು '.
ನುಡಿಯೊಳಗಾಗಿ ನಡೆಯದಿದ್ದರೆ,
ಕೂಡಲ ಸಂಗಮ ದೇವನೆಂತೊಲಿವನಯ್ಯಾ?

ಮಾತು ಬೆಲೆಯುಳ್ಳ ವಸ್ತು. ಅದು ಮಾಣಿಕ್ಯವನ್ನು ತಡಬಲ್ಲುದು ಅಥವಾ ಜಗಳವನ್ನು ತರಬಲ್ಲುದು. ದೃಶ್ಯವಾಗುವ ವಚನಾಂಗದ ಭಾಗವಾದ ನಾಲಿಗೆಯನ್ನು ನೋಡಿ. ಹೊಟ್ಟೆಯ ಗುಣದೋಷಗಳನ್ನು ಅರಿಯುವಂತೆ, ಮಾನವನಾಡುವ ಮಾತಿನಿಂದ ಅವನ ಅಂತರಂಗದ ವಿಚಾರಧಾರೆ ಮತ್ತು ಪರಿಪಕ್ವತೆಯನ್ನು ಅಳೆಯಬಹುದು.

ಇಂಥ ಮಾತು ಹೇಗಿರಬೇಕು ? ಮಾತನ್ನೇ ಶಾಸ್ತ್ರವನ್ನಾಗಿ ಮಾಡಿ ಶಕ್ತಿ ತುಂಬಿದ ಆಡುಮಾತನ್ನು ಮೃಡನ ಮಾತನ್ನಾಗಿ ದೈವೀಕರಿಸಿದ, ಮಾತು ಜ್ಯೋತಿರ್ಲಿಂಗವಾಗಬಲ್ಲುದೆಂಬುದನ್ನು ಸಾರಿದ ಮಹಾನುಭಾವ ಬಸವಣ್ಣನವರು ಅಧಿಕಾರವಾಣಿಯಿಂದ ಮಾತಿನ ಮರ್ಮವನ್ನು ವಿವರಿಸುವರು. ಆಡುವ ಮಾತು ಮುತ್ತಿನಂತಿರಬೇಕು. ಕಪ್ಪೆಚಿಪ್ಪಿನೊಳಗೆ ಇರುವ ಹುಳುವಿನಲ್ಲಿ ವಿಶಿಷ್ಟ ಕ್ರಿಯೆ ನಡೆದು, ಮುತ್ತು ಗಟ್ಟಿಗೊಂಡು ಹೊರಬರುವುದಷ್ಟೆ. ಅದೇ ರೀತಿ ಹೃದಯದಲ್ಲಿ ಸಂಸ್ಕರಣ ಕ್ರಿಯೆಗಳು ನಡೆದು, ಮಾಗಿದ ಸಂಕೇತವಾಗಿ ಮಾತಿನ ಮುತ್ತುಗಳು ಬಾ ಯಿ ಯಿಂ ದ ಜಾರಬೇಕು. ಹೀಗೆ ಜಾರಿದ ಮಾತುಗಳು. ಕೇವಲ ಮುತ್ತಿನ ಮಣಿಗಳಂತೆ ಬಿಡಿಬಿಡಿಯಾಗಿದ್ದರಾಗದು. ಮುತ್ತಿನ ಹಾರವು ದಾರದಿಂದ ಬಂಧಿಸಲ್ಪಟ್ಟು ಇಡಿಯಾಗಿರುವಂತೆ, ಮಾತಿನ ಮೌಕ್ತಿಕಗಳು ವಿಚಾರ ಸ್ಪಷ್ಟತೆ. ಸುಸಂಬದ್ಧತೆಗಳಿಂದ ಕೂಡಿ ಕ್ರಮಬದ್ಧವಾಗಿ, ವೈಚಾರಿಕ ಮತ್ತು ಅರ್ಥಗರ್ಭಿತವಾಗಿರಬೇಕು. ಹೇಳುವಾಗಲಾಗಲೀ, ಬರೆಯುವಾಗಲೀ ಅಸಂಬದ್ಧತೆ, ಅಪ್ರಸ್ತುತತೆ. ವಿಷಯಾಂತರವಾಗಬಾರದು.

ಆಡುವ ಮಾತು ಮಾಣಿಕ್ಯದ ದೀಪ್ತಿಯಂತಿರಬೇಕು. ಮಾಣಿಕ್ಯದ ದೀಪ್ತಿ ವಾತಾವರಣದ ಕತ್ತಲೆಯನ್ನು ಚದುರಿಸುವಂತೆ. ಜ್ಞಾನಿಯಾಡಿದ ಮಾತು ಮಾಣಿಕ್ಯದ ದೀಪ್ತಿಯಂತೆ ಕೇಳುಗರ ಮನದ ಅಜ್ಞಾನವನ್ನು ಚದುರಿಸಬೇಕು. ಸಂಶಯಗಳನ್ನು ಪರಿಹರಿಸಬೇಕು. ಅದು ಸ್ಫಟಿಕದ ಸಲಾಕೆಯಂತೆ ಒಳಹೊರಗು ಒಂದಾಗಿರಬೇಕು. ' ಬಾಯಲ್ಲಿ ಬೆಣ್ಣೆ ಎದೆಯಲ್ಲಿ ಕತ್ತರಿ ' ಎಂಬ ಕಾಪಟ್ಯದಿಂದ ಕೂಡಿರದೆ ಪರಿಶುಭ್ರ



ಮೈಸೂರಿನ ನಾಗರಿಕ ಸನ್ಮಾನ ಸಮಿತಿಯವರು ಸತ್ಕರಿಸಿದಾಗ ಪೂಜ್ಯದ್ವಯರುಗಳನ್ನು ಬರಮಾಡಿಕೊಳ್ಳುವ ಚಿತ್ರ
ಪೂಜ್ಯಶ್ರೀ ಸುತ್ತೂರು ಜಗದ್ಗುರುಗಳು ಮತ್ತು ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರು

ಕಲ್ಯಾಣ ಕಿರಣ ಮಾರ್ಚ್ ೧೯೭೪

Licenced to Post without prepayment under Licence No. WPP25



Correspond to :

Phone : Basava Mantap : 82335 Phone : Basava Gangotri : 3 4

B A S A V A M A N T A P A

No. 24, Chord Road, 2nd Block

Rajajinagar, Bangalore-560010

Cover Printed by : Bhaskar Printers, B-53